# ಬೆಳ್ಳಿ

ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ

## 1992-93










ಎಸ್. ಎ. ವ್ಹಿ. ವ್ಹಿ. ಪಿ. ಸಮಿತಿಯ

## ಶ್ರೀ ಅನ್ನದಾನೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ನರೇಗಲ್ಲ

ಪ್ರಧಾನ ಸಂಪಾದಕರು: ಪ್ರೊ ಎಸ್. ಬಿ. ಶೀಲವಂತಮಠ

# ಬೆಳ್ಳಿ

(ಸಂಸ್ಮರಣ ಸಂಚಿಕೆ)

ಪ್ರಧಾನ ಸಂಪಾದಕರು

**ಪ್ರೊ॥ ಎಸ್. ಬಿ. ಶೀಲವಂತಮಠ**

ವಾರ್ಷಿಕ ಪತ್ರಿಕೆಯ ಸಂಪಾದಕರು

**ಪ್ರೊ॥ ಎಸ್. ಎಸ್. ಸಾಳುಂಕೆ**

ಶ್ರೀ ಅನ್ನದಾನೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ
ಮಹಾವಿದ್ಯಾಲಯದ, "ಬೆಳ್ಳಿಹಬ್ಬ", ನರೇಗಲ್ಲ

# ಶಿವಲಿಂಗ ದೃಷ್ಟಿಯ ಕವಿ ಕಾವ್ಯಾನಂದರು

—ಎಸ್. ಬಿ. ಶೀಲವಂತಮಠ

ಶ್ರೀ ಅನ್ನದಾನೀಶ್ವರ ಮಹಾವಿದ್ಯಾಲಯದ ಬೆಳ್ಳಿಹಬ್ಬದ ಪ್ರಾರಂಭೋತ್ಸವವು ಕನ್ನಡನಾಡಿನ ಪ್ರತಿಷ್ಠಿತ ಸಾಹಿತಿಗಳಾದ ಶ್ರೀ ಸಿದ್ಧಯ್ಯ ಪುರಾಣಿಕರ (ಕಾವ್ಯಾನಂದ) ಎಪ್ಪತ್ತೈದನೆಯ ಹುಟ್ಟು ಹಬ್ಬವನ್ನು ಆಚರಿಸುವದರೊಂದಿಗೆ ಅವರ ಬದುಕು–ಬರಹಗಳ ವಿಚಾರ ಸಂಕೀರ್ಣವನ್ನು ೨೮–೯–೨ ರಂದು ಹಮ್ಮಿಕೊಳ್ಳಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಡಾ. ಪಂಚಾಕ್ಷರಿ ಹಿರೇಮಠ **M.A., Ph.D.** ಅವರು ಭಾಗವಹಿಸಿ "ಶಿವಲಿಂಗ ದೃಷ್ಟಿಯ ಕವಿ ಕಾವ್ಯಾನಂದರು" ಎಂಬ ವಿಷಯದ ಮೇಲೆ ವಿದ್ವತ್ಪೂರ್ಣ ಪ್ರಬಂಧ ಓದಿದರು.

ಶರಣ ಸದೃಶ ಓರ್ವ ಬಹುದೊಡ್ಡ ಜೀವದ ಬದುಕನ್ನು ಅರಿಯಲು ಮತ್ತೋರ್ವ ಶರಣ ಸದೃಶ ಜೀವವೇ ಬೇಕು. ಅಂತೆಯೇ ಇಲ್ಲಿ ಬಹು ಭಾಷಾ ಪಂಡಿತರಾದ, ಬಹುಮುಖ ಪ್ರತಿಭಾಶಾಲಿಯಾದ, ಶರಣ ಸದೃಶ ರಾದ, ದೇಶಗಳನ್ನು ಸುತ್ತಾಡಿದ, ಕೋಶಗಳನ್ನು ಕಿತ್ತಾಡಿದ ಹತ್ತು–ಹಲವಾರು ಪ್ರಶಸ್ತಿಗಳನ್ನು ಪಡೆದ ಡಾ. ಪಂಚಾಕ್ಷರಿ ಹಿರೇಮಠರು ಸದ್ಯ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಿರಿಯ ಪ್ರಾಧ್ಯಾಪಕರು.

ಕವಿ, ದಾರ್ಶನಿಕ, ಅನುಭಾವಿಗಳಾದ "ಕಾವ್ಯಾನಂದ"ರ ಕೃತಿಗಳು, ಅವರ ಅನುಭಾವದ ಮಿಂಚಿನ ಬೆಳಕಿನಲ್ಲಿ ಬಹುಕಾಲ ದೇದೀಪ್ಯಮಾನವಾಗಿ ಬೆಳಗಬಲ್ಲವು....—ಕನ್ನಡ ಕುಲವನ್ನು ಬೆಳಗಿಸುವವು. ಅವರ ಅನುಜ ನಾದ ನಾನು ಕಾವ್ಯಾನಂದರನ್ನು "ಶಿವಲಿಂಗ ದೃಷ್ಟಿಯ ಕವಿ" ಎಂದೇ ಕರೆದಿದ್ದೇನೆಂದು ಹೇಳುತ್ತ...........

'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಕನ್ನಡ ಸಾರಸ್ವತ ಲೋಕಕ್ಕೆ ಸುಪರಿಚಿತರಾಗಿರುವ ಡಾ.ಸಿದ್ಧಯ್ಯ ಪುರಾಣಿಕ ಅವರು ಕನ್ನಡ ಸಾಹಿತ್ಯಲೋಕದಲ್ಲಿ ಐದು ದಶಕಗಳಿಗಿಂತ ಹೆಚ್ಚು ಕಾಲದಿಂದಲೂ ಸೇವೆ ಸಲ್ಲಿಸುತ್ತ ಬಂದವರು. ಆಧುನಿಕ ಕನ್ನಡ ಕಾವ್ಯದ ಸಿದ್ಧಿಯನ್ನು ಕನ್ನಡ ಕಾವ್ಯಪ್ರೇಮಿಗಳವರೆಗೂ ತಲುಪಿಸಿದ ಶ್ರೇಯಸ್ಸು, ಹಿರಿಮೆ ಅವರದು.

ಕವಿ, ದಾರ್ಶನಿಕ, ಅನುಭಾವಿಗಳಾದ 'ಕಾವ್ಯಾನಂದ' ಅವರ ಕೃತಿಗಳು ಅವರ ಅನುಭಾವದ ಮಿಂಚಿನ ಬೆಳಕಿನಲ್ಲಿ ಬಹುಕಾಲ ದೇದೀಪ್ಯಮಾನವಾಗಿ ಬೆಳಗುವವು, ಅಷ್ಟೇ ಅಲ್ಲದೇ ಕನ್ನಡ ಕುಲವನ್ನೂ ಬೆಳಗಿಸುವವು.

ಸಾವಿರದೊಂಬೈನೂರ ಹದಿನೆಂಟರ ಆಗಸ್ಟ್ ಹದಿನೆಂಟರಂದು ಅಂದರೆ ಇಂದಿಗೆ ಎಪ್ಪತ್ತೈದು ವರುಷಗಳ ಹಿಂದೆ ಸಿದ್ಧಯ್ಯನವರು ರಾಯಚೂರ ಜಿಲ್ಲೆಯ ದ್ಯಾಂಪೂರದಲ್ಲಿ ಜನ್ಮ ತಳೆದರು. ತಂದೆ ಪಂಡಿತೋತ್ತಮ ಪ್ರಸಿದ್ಧ ಪುರಾಣಿಕ ವೇ. ಮೂ. ಕಲ್ಲಿನಾಥ ಶಾಸ್ತ್ರಿಗಳು. ತಾಯಿ ಮಹಾಸಾಧ್ವಿ, ಪರಮ ಕರುಣಾಮೂರ್ತಿ ದಾನಮ್ಮನವರು.

ದ್ಯಾಂಪುರ, ಚಿಕ್ಕೇನಕೊಪ್ಪ, ಕುಕನೂರು, ಕೊಪ್ಪಳ, ಗುಲ್ಬರ್ಗಾ, ಹೈದರಾಬಾದಗಳಲ್ಲಿ ಶಿಕ್ಷಣ ಪಡೆದ ಸಿದ್ಧಯ್ಯನವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಕಲಾ ಹಾಗೂ ಕಾಯ್ದೆ ಪದವೀಧರರು. ಗುಲ್ಬರ್ಗಾದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಮಹಾನುಭಾವಿ ಬಸವಣ್ಣನವರನ್ನು ಕುರಿತು 'ಆತ್ಮಾರ್ಪಣ'ವೆಂಬ ರಂಗನಾಟಕವನ್ನು ಬರೆದು ತಾವೇ ಅಣ್ಣ ಬಸವಣ್ಣನ ಪಾತ್ರವಹಿಸಿ ಹಲವು ಪ್ರದರ್ಶನ ನೀಡಿದರು. 'ಆತ್ಮಾರ್ಪಣ' ನಾಟಕ ಆಗ ತುಂಬ ಪ್ರಸಿದ್ಧಿ ಹಾಗೂ ಪ್ರಶಂಸೆಯನ್ನು ಪಡೆಯಿತು. ಮುಂದೆ ಅದು ಪುಸ್ತಕ ರೂಪದಲ್ಲಿ ಪ್ರಕಟವಾದಾಗ ನಾಡಿನ ವಿದ್ವಾಂಸರು ಮನದುಂಬಿ ಹೊಗಳಿದ್ದುಂಟು.

ಕರ್ನಾಟಕದ ಗಾಂಧಿಯೆಂದೇ ಪ್ರಸಿದ್ಧರಾಗಿದ್ದ ಶ್ರೀ ಹರ್ಡೇಕರ ಮಂಜಪ್ಪಣ್ಣನವರ ಆಲಮಟ್ಟಿಯ ಆಶ್ರಮದಲ್ಲಿದ್ದಾಗ ಡಾ. ಸಿದ್ಧಯ್ಯನವರು 'ಕಾವ್ಯಾನಂದ'ರಾಗಿ ಕನ್ನಡ ಕುಲಕೋಟಿಗೆ ದೊರಕಿದರು. ಅಲ್ಲಿ ಅವರು 'ಶರಣ ಸಂದೇಶ' ಪತ್ರಿಕೆಯಲ್ಲಿ ಆಗ ಬರೆದ 'ಕಾವ್ಯದೇವಿ' ಎಂಬ ಕವಿತೆಯಲ್ಲಿ ಈ ಸಾಲುಗಳಿವೆ—

'ನಿನ್ನಾತ್ಮವಾನಂದ
ನನ್ನಾತ್ಮ ಕಾವ್ಯ!
ಇಂತು ಕಾವ್ಯಾನಂದ
ನಾಮ ಸುಶ್ರಾವ್ಯ!'

ಅಂತೆಯೇ ಅವರು ಬರೆದ ಕಾವ್ಯಗಳೆಲ್ಲ ಆತ್ಮಕಾವ್ಯಗಳಾದವು. ಮಹಾಕವಿ ಭವಭೂತಿ ತನ್ನ ಉತ್ತರ ರಾಮಚರಿತದಲ್ಲಿ ಕಾವ್ಯವನ್ನು ಕುರಿತು ಬರೆದ ಮಾತುಗಳು ನನಗಿಲ್ಲಿ ನೆನಪಾಗುತ್ತಲಿವೆ—

"....ವಾಣೀ ಮಮೃತಾಂ ಆತ್ಮನಃ ಕಲಾಮ್" ವಾಣೀ, ಕಾವ್ಯ ಅದು ಆತ್ಮದ ಕಲೆ. ಕಾವ್ಯವನ್ನು ತಮ್ಮ ಸಾಧನಾಶೀಲತೆಯಿಂದ 'ಕಾವ್ಯಾನಂದ'ರು ಆತ್ಮದ ಕಲೆಯನ್ನಾಗಿಸಿಕೊಂಡು ಜನರ ಒಳಿತಿಗಾಗಿ ಜನರಿಗೆ ನೀಡಿದವರು.

ಡಾ. ಸಿದ್ಧಯ್ಯನವರು ಪ್ರಸಿದ್ಧ ಕವಿಗಳಾಗಿರುವಂತೆಯೇ ದಕ್ಷ ಆಡಳಿತಗಾರರೂ ಹೌದು. ಸಾವಿರದೊಂಬೈನೂರನಲವತ್ತನಾಲ್ಕರಿಂದ ಎಪ್ಪತ್ತಾರರವರೆಗೆ ಸರಕಾರದಲ್ಲಿ ಅನೇಕ ಹುದ್ದೆಗಳಲ್ಲಿದ್ದು, ಜನಸೇವೆ ಮಾಡಿದರು. ಅಸಿಸ್ಟೆಂಟ್ ಕಲೆಕ್ಟರ ಹುದ್ದೆಯಿಂದ ಆರಂಭವಾದ ಅವರ ಸೇವೆ ಇಡೀ ರಾಜ್ಯದ ಕಮೀಷನರ್ ಹುದ್ದೆ ಅಲಂಕರಿಸಿ ಮೂವತ್ತೆರಡು ವರ್ಷಗಳ ಸುದೀರ್ಘ ಸೇವೆಯಿಂದ ನಿವೃತ್ತರಾದರು. ಯಾವ ಸ್ಥಾನದಲ್ಲಿದ್ದರೂ ಅವರು ತಮ್ಮ ಸುಸಂಸ್ಕೃತ ಹಾಗೂ ಘನ ವ್ಯಕ್ತಿತ್ವದಿಂದಾಗಿ ಆಯಾ ಸ್ಥಾನಗಳಿಗೆ ಹೆಚ್ಚಿನ ಗೌರವ ತಂದು ಕೊಟ್ಟರು. ಈ ಕಾರಣದಿಂದಾಗಿಯೇ ಅವರು ಐ.ಎ.ಎಸ್. ಪದವಿಯನ್ನು ಪಡೆದರು. ತಮ್ಮ ಸೇವೆಯ ಕಾಲದಲ್ಲಿ ಅವರು ಯಾವ ಸ್ಥಳದಲ್ಲಿದ್ದರೂ ಆ ಇಡೀ ಪರಿಸರ ತಮ್ಮತ್ತ ಸಾಗಿ ಬರುವಂಥ ಆಕರ್ಷಣೆಯನ್ನು ಪಡೆದಿದ್ದರು. ಸರಳ–ಸಜ್ಜನಿಕೆಗೆ, ವಿನಯಶೀಲತೆಗೆ ಹೃದಯ ವೈಶಾಲ್ಯಕ್ಕೆ ಸಿದ್ಧಯ್ಯನವರು ಇನ್ನೊಂದು ಹೆಸರು.

ಹೀಗೆ ಕಾವ್ಯಾನಂದರು ಸಾಹಿತ್ಯ ಹಾಗೂ ಆಡಳಿತ ಎರಡನ್ನೂ ಸವ್ಯಸಾಚಿಯಂತೆ ಬಹು ಸಮರ್ಪಕವಾಗಿ, ಅಚ್ಚರಿಪಡುವಂತೆ ನಡೆಯಿಸಿ ಯಶಸ್ಸು ಪಡೆದವರು. ಸುಸಂಸ್ಕೃತ, ಭಾವುಕ, ಶ್ರದ್ಧಾವಂತ, ರಾಷ್ಟ್ರೀಯವಾದಿ ಯಾದ 'ಕಾವ್ಯಾನಂದ'ರ ಜೀವನ ನಯದಿಂದ ಅತ್ಯಂತ ಒಪ್ಪ ಓರಣದಿಂದ ಕೂಡಿದುದು. ಹತ್ತಾರು ದೇಶ

ಗಳನ್ನು ಸುತ್ತಿ, ಅಪಾರ ಲೋಕಾನುಭವ ಪಡೆದ ಈ ಕವಿ ತಮ್ಮ ಕಾವ್ಯ, ಕಾದಂಬರಿ, ನಾಟಕ, ವಚನ ಸಾಹಿತ್ಯ ದಿಂದ ಕನ್ನಡ ಸಾರಸ್ವತ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ.

ಕಾವ್ಯಾನಂದರ ಮೊದಲ ಕವಿತಾ ಸಂಗ್ರಹ 'ಜಲಪಾತ'ಕ್ಕೆ ಮುನ್ನುಡಿಯ ತಿಲಕವಿಟ್ಟು ಹರಸಿದ ವರಕವಿ ಅಂಬಿಕಾತನಯದತ್ತರು ಅಷ್ಟು ಹಿಂದೆಯೇ ಇಂದಿನ ಕಾವ್ಯಾನಂದರನ್ನು ಕಂಡರಸಿದ್ದರು.

"ಸಿದ್ಧಯ್ಯ ಪುರಾಣಿಕರ ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದವು. ಪ್ರಾಯದ ಪ್ರಥಮ ಗ್ರಾಸದಲ್ಲಿಯೇ ಅವರು ಶರಣರ ಸಾಹಿತ್ಯವನ್ನು ಮುಕ್ಕಿದರು; ದೇಶಸೇವಾ ತತ್ಪರರಾದವರ ಸಂಗ-ಸಹವಾಸಗಳಲ್ಲಿ ಕಾಲ ಕಳೆದರು. ಅವರು ಮಾಡಿದ ವಿದ್ಯಾಭ್ಯಾಸವು ಅವರ ಹೃದಯುದವರೆಗೆ ಪ್ರವೇಶ ಮಾಡಿತು. ಇದೆಲ್ಲದರ ಪರಿಣಾಮವೆಂದರೆ ಅವರಲ್ಲಿ ಭಾವನೆಯ ವಾಯುವೇಗವೂ, ಬುದ್ಧಿಯ ಅಗ್ನಿಗುಣವೂ ಸೇರಿಕೊಂಡಿವೆ. ಕಾವ್ಯಾನಂದರ ಕಾವ್ಯರಚನೆಯ ಅಸ್ತಿಭಾರಕ್ಕೆ ತತ್ತ್ವಗಳ ತೂಕ ವಿರುವುದರಿಂದಲೇ ಅವರ ನುಡಿಗಳಲ್ಲಿ ಬೆಂಕಿಯ ಜತೆಜತೆಗೆ ಬೆಳಕು ನುಗ್ಗುತ್ತದೆ" ಎಂದ ಅಂಬಿಕಾತನಯದತ್ತರ ಮಾತುಗಳನ್ನು ನಿಜಗೊಳಿಸಿದ ಹಿರಿಮೆ ಕಾವ್ಯಾನಂದರದು. ಅವರು ತಮ್ಮ ಒಂದೊಂದು ನುಡಿಯಲ್ಲೂ ಬೆಳಕನ್ನು ತುಂಬಿದರು. ಅಂತೆಯೇ ಅವರ ಕಾವ್ಯ ಹೃದಯವನ್ನು ಹದಗೊಳಿಸುವ, ಪ್ರಫುಲ್ಲಗೊಳಿಸುವ, ಚಿತ್ತವನ್ನು ಶುದ್ಧಗೊಳಿಸುವ 'ಗುರು' ಆಗಲು ಸಾಧ್ಯವಾಯಿತು. ಅವರ 'ಜಲಪಾತ', 'ಕರುಣಾಶ್ರಾವಣ', 'ಮಾನಸ ಸರೋವರ', 'ಕಲ್ಲೋಲಮಾಲೆ', 'ಮೊದಲು ಮಾನವನಾಗು' ಕವನ ಸಂಗ್ರಹಗಳು 'ವಚನೋದ್ಯಾನ' ದಲ್ಲಿಯ ವಚನಗಳು ನಿಜಕ್ಕೂ ಜನಮನದ ಕಾಳಿಕೆಯನ್ನು ಹೋಗಲಾಡಿಸುವಂಥ ಸತ್ಕೃತಿಗಳು.

ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ
ಶ್ರೀಗಂಧ ಸ್ನಾನ ಮಾಗಿ

ಎಂಬ ಈ ಸಾಲುಗಳು 'ಕರುಣಾಶ್ರಾವಣ'ದಲ್ಲಿ ಬರುವ ಒಂದು ಕವಿತೆಯ ಸಾಲುಗಳು. ಈ ಎರಡು ಸಾಲುಗಳು ಭೂ-ವ್ಯೋಮವಾಗಿ ತುಂಬಿಕೊಂಡ ಅನುಭವ ನನಗಾಗುತ್ತದೆ. ಇಲ್ಲಿಯ ಸೊಗಸಾದ ಲಯಬದ್ಧತೆ, ಶಬ್ದ ಮಾಧುರ್ಯ, ಅರ್ಥ ಸಂಪತ್ತು- ಯಾವುದನ್ನು ಕುರಿತು ಎಷ್ಟು ಹೇಳಿದರೂ ಅದು ಕಡಿಮೆಯೇ ಎಂದೆನಿಸುತ್ತದೆ. ಓದಿದ ಪ್ರತಿಸಲವೂ ನಾನು ಆನಂದದಿಂದ ಕುಣಿದಿದ್ದೇನೆ, ಅದರ ನಾದ ಮಾಧುರ್ಯಕ್ಕೆ ಮರುಳಾಗಿದ್ದೇನೆ.

'ಮಾನಸ ಸರೋವರ' ಸಿದ್ಧಯ್ಯನವರ ಮೂರನೆಯ ಕವನ ಸಂಗ್ರಹವನ್ನು ಕುರಿತು ಹೊಸಗನ್ನಡ ಕಾವ್ಯ ಪ್ರಪಂಚದ ಮಹತ್ವದ ಕವಿಗಳಾದ ಡಾ|| ಪು. ತಿ. ನರಸಿಂಹಾಚಾರ್ಯರು "....ಕಾವ್ಯಾನಂದರ ಕವನಗಳು 'ಹೂವುಗಳ ಹೃದಯವನ್ನು ಹೊಬಿಸಿಲು ಹೊಕ್ಕಂತೆ' ನಮ್ಮ ಮನಸ್ಸನ್ನು ಹೊಗುತ್ತವೆ.... ಕಾವ್ಯಾನಂದರ ಶೈಲಿ ಬಹಳ ಹಸನಾದ ಶೈಲಿ. ಅವರಿಗೆ ತಿರುಳುಗನ್ನಡದ ಸರಣಿ ಗೊತ್ತು.... ಈ ಸಂಗ್ರಹದಲ್ಲಿರುವ ಸುಂದರ ಕವನಗಳನ್ನು ತಮ್ಮ ಶುದ್ಧವೂ, ಸುಸಂಸ್ಕೃತವೂ, ಸದ್ಭಾವಪೂರ್ಣವೂ ಆದ ಮನಸ್ಸಿನಿಂದ ಸ್ವಚ್ಛ ಕನ್ನಡದ ಮಾತಿನಲ್ಲಿ ನಿರರ್ಗಳವಾಗಿ ಹರಿಯಬಿಡುತ್ತಿರುವ ಕಾವ್ಯಾನಂದರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸು ತ್ತೇನೆ. ಅವರ ಸತ್ಕೃತಿಗಳಿಂದ ನಮ್ಮ ಸರಸ್ವತೀ ಭಂಡಾರ ತುಂಬಲೆಂದೂ ಹಾರೈಸುತ್ತೇನೆ" ಎಂದು ಎದೆದುಂಬಿ ಹಾರೈಸಿದ್ದಾರೆ.

ನಲವತ್ತೈದು ಕವಿತೆಗಳಿರುವ ಈ ಸಂಗ್ರಹದಲ್ಲಿ ಭಾವ ಮತ್ತು ಬುದ್ಧಿಯ ವಿದ್ಯುದ್ಆಲಿಂಗನವಾಗಿರು ವುದನ್ನು ಕಾಣುತ್ತೇವೆ. ಇಲ್ಲಿಯ ಒಂದೊಂದು ಕವಿತೆಗಳೂ ರಸಸೃಷ್ಟಿ. ಇಲ್ಲಿ ಬರುವ ಉಪಮೆಗಳು, ಪ್ರತಿಮೆಗಳು, ಹೋಲಿಕೆಗಳು ಬಹು ಅಮೂಲ್ಯವಾದವುಗಳು. ಈ ಸಂಗ್ರಹದ ಮೊದಲ ಕವಿತೆ- 'ವಿಂಧ್ಯಾದ್ರಿ ಯಲ್ಲಿ ಚಂದ್ರೋದಯ'ದಲ್ಲಿ ಉಂಟಾಗುವ ಚಂದ್ರೋದಯ, ಆ ಚಂದ್ರೋದಯದಿಂದಾಗಿ ಹರಡುವ ಬೆಳದಿಂಗಳು- ಈ ಎಲ್ಲವನ್ನು ವರ್ಣಿಸಿರುವ ರೀತಿ, ಇವುಗಳನ್ನು ಉದಾತ್ತೀಕರಣಗೊಳಿಸಿದ ಭವ್ಯ ಕಲ್ಪನೆ ಕನ್ನಡ ಕಾವ್ಯಲೋಕಕ್ಕೆ ಹೊಸದು.

ಚಂದ್ರೋದಯ ಹೇಗಾಯಿತು ಎಂಬುದನ್ನು ಕವಿ ಹೇಳಿರುವ ರೀತಿಯನ್ನು ಸಹೃದಯರಾದ ನೀವು ಆಸ್ವಾದಿಸಬೇಕು–

ಶ್ರೀಗುರುವಿನ ಹಸ್ತದಂತೆ
ವಿಂಧ್ಯಾದ್ರಿಯ ಮಸ್ತಕದಲಿ
ಚಂದ್ರೋದಯವಾಯಿತು

ಈ ಹಸ್ತ–ಮಸ್ತಕ, ಹೋಲಿಕೆಗಳ ಪಾವಿತ್ರ್ಯತೆಯನ್ನು, ಶಕ್ತಿಯನ್ನು ಎನಿತು ರೀತಿಯಲ್ಲಿ ಅರ್ಥೈಸಿದರೂ ಅರ್ಥ ವಿಸ್ತಾರವಾಗುತ್ತಲೇ ಹೋಗುತ್ತದೆ. ಜಡವಾದ ವಿಂಧ್ಯಾದ್ರಿ ಭಕ್ತನಾಗಿ ಇಲ್ಲಿ ಪರಿಣಮಿಸಿದರೆ, ಚಂದ್ರ ಗುರುವಾಗಿ ಭಕ್ತನ ಮಸ್ತಕದ ಮೇಲೆ ತನ್ನ ಪರುಷಹಸ್ತವಿರಿಸಿ ಭಕ್ತನ ಜಡತ್ವ ಕಳೆದು ಅವನ ಅಂತರಂಗವನ್ನು ಬೆಳಗಿಸಿ, ಆ ಬೆಳಕಿನಲ್ಲಿ ಅವನ ಜಡತ್ವ ಅಳಿದು, ಬೆಳಕಿನ ಲೋಕದಲ್ಲಿ ವಿಹರಿಸುವಂತೆ ಮಾಡುತ್ತಾನೆ. ಇಡೀ ಪ್ರಕೃತಿ 'ಹಸ್ತ ಮಸ್ತಕ' ಸಂಯೋಗಕ್ಕೆ ಸಿದ್ಧವಾಗಿ ಕುಳಿತಿದೆ– ಎಂದೆನ್ನಿಸುತ್ತದೆ ನನಗೆ. ನನ್ನ ಈ ಭಾವನೆಗೆ ಪೂರಕವಾಗಿ ಮುಂದಿನ ಸಾಲುಗಳನ್ನೂ ಇಲ್ಲಿ ಕೇಳಿಸಬಯಸುತ್ತೇನೆ–

ಗುರುಬೋಧೆಯ ಸುಧೆಯ ತೆರದಿ
ಬೆಳದಿಂಗಳು ಹರಡೆ ಭರದಿ
ಜಗ ತನ್ಮಯವಾಯಿತು!

ಹೀಗೆ ಲೋಕ ತನ್ಮಯಗೊಳ್ಳುವಂಥ ಕಾವ್ಯ ರಚಿಸಿದ ಕಾವ್ಯಾನಂದರ ದೃಷ್ಟಿ ಶಿವಲಿಂಗದೃಷ್ಟಿಯಾಗಿದೆ.

ಇಲ್ಲಿಯ ಬಹಳಷ್ಟು ಕವಿತೆಗಳಲ್ಲಿ ಮಾತ್ರವಲ್ಲ, ಅವರ ಬಹುತೇಕ ಕವಿತೆಗಳಲ್ಲಿ ನಮಗೆ ಪ್ರಧಾನವಾಗಿ ಕಂಡುಬರುವುದು ಅವರ ಶಿವಲಿಂಗ ದೃಷ್ಟಿಯೇ ಆಗಿದೆ.

ಈ ಸಂಗ್ರಹದಲ್ಲಿಯ ಎಲ್ಲ ಕವಿತೆಗಳಿಗೂ ಕಳಸಪ್ರಾಯವಾಗಿದೆ. 'ಜಗವೆ ಕೂಡಲಸಂಗಮ' ಎಂಬುದು ಸಮಸ್ತ ಪ್ರಕೃತಿಯಲ್ಲಿ–ಜಡ–ಚೇತನ–ಎಲ್ಲದರಲ್ಲಿಯೂ ಶಿವಸ್ವರೂಪವನ್ನು ಶಿವಕಳೆಯನ್ನು ಶಿವತ್ತ್ವವನ್ನು ಕಂಡ 'ಕಾವ್ಯಾನಂದ'ರ ದೃಷ್ಟಿ– ಶಿವಲಿಂಗ ದೃಷ್ಟಿ ಅಲ್ಲದೆ ಬೇರೆ ಇನ್ನೇನೂ ಅಲ್ಲವೆಂದೇ ನನ್ನ ಭಾವನೆ. ಸಕಲ ಚರಾಚರವೆಲ್ಲವೂ ಶಿವಪೂಜೆಯಲ್ಲಿ ನಿರತವಾಗಿರುವ ಹಾಗೆ ಕವಿಯ ಬಗೆಗಣ್ಣಿಗೆ ತೋರಬೇಕಾದರೆ, ಅನುಭವವಾಗಬೇಕಾದರೆ, ಕವಿಯ ಬಗೆ ಪಡೆದ ಸಂಸ್ಕಾರ, ಅದರ ಬಿತ್ತರ, ಅನುಭವದ ಆಳ– ಎಲ್ಲವನ್ನೂ ನಾವು ಕಲ್ಪಿಸಿಕೊಳ್ಳಬೇಕು. ಕಲ್ಪಿಸಿಕೊಂಡಷ್ಟೂ ನಮ್ಮ ಬಗೆ, ನಮ್ಮ ಅನುಭವ ಸಂಸ್ಕಾರಗೊಂಡು ಕವಿಯ ಬಗೆಯ ಆಶಯಕ್ಕೆ ಪ್ರತಿಸ್ಪಂದಿಸಲು ಸಾಧ್ಯವಾಗುತ್ತದೆ. ಈ ಕವಿತೆ ಓದಿದ ಅಂಥ ಮನಸ್ಸಿಗೆ ಶುದ್ಧೋದಕದಲ್ಲಿ ಮಿಂದ ಅನುಭವವಾದರೆ ಅಚ್ಚರಿಪಡಬೇಕಾಗಿಲ್ಲ. ಇಡೀ ಕವಿತಯನ್ನೇ ಇಲ್ಲಿ ಉದಾಹರಿಸಬೇಕೆನಿಸುತ್ತದೆ ನನಗೆ. ನಮ್ಮ ಜನ ಇಂಥ ಸತ್ಕಾವ್ಯಗಳನ್ನು ಒಮ್ಮೆ ಓದಿ ಬಿಡದೆ ಮತ್ತೆ ಮತ್ತೆ ಓದುತ್ತಲಿರಬೇಕು. ಮನನ ಮಾಡುತ್ತಲಿರಬೇಕು. ಕವಿತೆ ಹೀಗಿದೆ–

ಪ್ರಕೃತಿಯೇ ಗುರು ಗಗನ ಲಿಂಗವು
ಜಗವೆ ಕೂಡಲಸಂಗಮ
ಹುಡಿಯೇ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ

○

ಕುಡಿವ ನೀರೇ ತೀರ್ಥ
ತಿನ್ನುವ ರೊಟ್ಟಿ ಶಿವನ ಪ್ರಸಾದವು
ಶ್ರಮದ ಬೆವರೇ ಸ್ನಾನ
ದುಡಿತದ ಹಾಡೆ ಮಂತ್ರನಿನಾದವು

○

ಭದ್ರವನ್ನೇ ನೋಳ್ಪ ಅಕ್ಷಿಯೆ
ಭಾವಿಸಲು ರುದ್ರಾಕ್ಷಿಯು
ಭದ್ರವನ್ನೇ ನುಡಿವೆ ಮಾಡುವೆ
ನೆಂಬ ಬುದ್ಧಿಯೆ ದೀಕ್ಷೆಯು

○

ಸರ್ವವೂ ಶಿವನಂಶವೆನ್ನುವ
ಧರ್ಮವೊಂದೇ ಧರ್ಮವು
ಅನ್ಯರನು ಅಳಲಿಸದ ಹಿತಕರ
ಕರ್ಮವೊಂದೇ ಕರ್ಮವು

○

ಎಲ್ಲರೆಲ್ಲರಿಗಾಗಿಯೆನ್ನುವ
ಜ್ಞಾನವೊಂದೇ ಜ್ಞಾನವು
ಒಲಿದು ಒಲಿಸುವ ನಲಿದು ನಲಿಸುವ
ಕಲೆಯೆ ಅಮೃತನಿಧಾನವು

○

ಉಣಿಸಿ ಉಣ್ಣುವ ಭಾವ ಭಕ್ತಿಯು
ಒಲ್ಲೆನೆನೆ ಸುವಿರಕ್ತಿಯು
ಕೂಡಿ ಕಲಿಯಲು ಕೂಡಿ ಬೆಳೆಯಲು
ಕೂಡಿ ನಲಿಯಲು ಮುಕ್ತಿಯು

ತಮ್ಮ ಧಾರ್ಮಿಕ, ಆಧ್ಯಾತ್ಮಿಕ, ಪಾರಿಭಾಷಿಕ ಪದಗಳಿಗೆ 'ಕಾವ್ಯಾನಂದ'ರು ತಮ್ಮ ಈ ಕವಿತೆಯಲ್ಲಿ ಹೊಸ ಅರ್ಥವನ್ನು ಹೊಸ ಮೌಲ್ಯವನ್ನು ತಂದುಕೊಟ್ಟಿದ್ದಾರೆ. ಅದುವೇ ಕವಿಯ 'ಸರ್ವಜನ ಹಿತಾಯ, ಸರ್ವಜನ ಸುಖಾಯ'. ಸರ್ವೋದಯದ ಧರ್ಮ. ಅವರ ಕಾವ್ಯಧರ್ಮವೂ ಅದೇ ಆಗಿದೆ. ಅವರ ಕವಿತೆಗಳನ್ನು ಓದಿದರೆ ಮನಸ್ಸು, ಬುದ್ಧಿ, ಚಿತ್ತ ಸಂಸ್ಕಾರಗೊಳ್ಳುತ್ತವೆ. ನನ್ನ ದೃಷ್ಟಿಯಲ್ಲಿ ಕಾವ್ಯ ಮಾಡಬೇಕಾದ ಕೆಲಸವೇ ಇದಾಗಿದೆ.

'ಕಾವ್ಯಾನಂದ'ರ 'ಕಲ್ಲೋಲಮಾಲೆ' ಅದೊಂದು ವಿಶಿಷ್ಟ ಪ್ರಕಾರದ ಕೃತಿಯಾಗಿದೆ, ಕಾವ್ಯವಾಗಿದೆ. ಅವುಗಳನ್ನು ನಾನು 'ಮುಕ್ತಕ'ಗಳೆಂದು ಕರೆದಿದ್ದೇನೆ. ಕಾವ್ಯಾನಂದರ ಲೋಕಾನುಭವವನ್ನು ಇಲ್ಲಿ ನಾವು ಅನುಭವಿಸಬಹುದಾಗಿದೆ. ಈ ಸಂಗ್ರಹಕ್ಕೆ ಮುನ್ನುಡಿ ಬರೆದ ಹೆಸರಾಂತ ಪ್ರಬಂಧಕಾರರೂ, ದಕ್ಷ ಆಡಳಿತಗಾರರೂ ಆದ ಶ್ರೀ ಸದಾಶಿವ ಒಡೆಯರ ಅವರು– "....ಇಲ್ಲಿಯ ಒಂದೊಂದು ಸಾಲನ್ನು ಓದಿದಂತೆ ಒಂದೊಂದು ಘನವಾದ ವಿಚಾರ ಮಿಂಚಿನ ಸೆಳಕಿನಂತೆ ಹೊಳೆಯುತ್ತದೆ...." ಎಂದಿದ್ದಾರೆ.

೧೯೭೮ ರಲ್ಲಿ ಈ ಕೃತಿಯನ್ನು ಧಾರವಾಡದ 'ತಾರಾಗ್ರಂಥ ಪ್ರಕಾಶನ' ಪ್ರಕಟಿಸಿದಾಗ ಆ ಪ್ರಕಾಶನದ ಸಂಪಾದಕನಾಗಿ ನಾನು ಹೀಗೆ ಬರೆದಿದ್ದೆ– "....ಕಾವ್ಯಾನಂದರ ಈ ಹಿಂದಿನ ಕೃತಿಗಳಿಗಿಂತಲೂ 'ಕಲ್ಲೋಲಮಾಲೆ' ತೀರ ಭಿನ್ನವಾಗಿದೆ. ಇಲ್ಲಿ ಕಾವ್ಯಾನಂದರು ಅನುಭಾವದ 'ಶ್ರೀಗಿರಿ'ಯ ತುತ್ತತುದಿಯಲ್ಲಿ ನಿಂದು ಈ ಬದುಕಿನ ಒಳಹೊರಗನ್ನು ಬಹು ಸೂಕ್ಷ್ಮವಾಗಿ ನಿರೀಕ್ಷಿಸಿ ತಾವು ಪಡೆದ ಅನುಭಾವಕ್ಕೆ ಕಾವ್ಯದ ತೊಡಿಗೆ ತೊಡಿಸಿ ಕೃತಕೃತ್ಯರಾಗಿದ್ದಾರೆ. ಈ ಕೃತಕೃತ್ಯತೆಯಿಂದ ಕನ್ನಡ ಕಾವ್ಯವಾಹಿನಿಗೆ ಹೊಸ ಪ್ರವಾಹವೊಂದು ಬಂದು ಸೇರಿದಂತಾಗಿದೆ.

ಅನುಭಾವವೇ ಪ್ರಧಾನವಾಗಿರುವ ಇವು ಕಾವ್ಯವಾಗಿ ಪರಿಣಮಿಸಿರುವುದು ಕಾವ್ಯಾನಂಬರ ಅಪೂರ್ವವಾದ ಕಾವ್ಯ ಪ್ರತಿಭೆಯಿಂದಾಗಿ ಒಟ್ಟಿನಲ್ಲಿ ಕಾವ್ಯಾನಂದರ ಕಾವ್ಯಕ್ಕೆ ಅನಿರ್ವಚನೀಯವಾದ ಅಭಿವ್ಯಕ್ತಿಯಿದೆ, ಶಕ್ತಿಯಿದೆ. ಅವರ ಕಾವ್ಯದ ತುಂಬ 'ಶಿವ' ತತ್ವದ ಪ್ರತಿಪಾದನೆಯಿದೆ.

ಅನುಭಾವದ ಜೊತೆ ಜೊತೆಯಾಗಿ ಕವಿಯ ಕಲ್ಪನೆ, ಭಾವ, ಚಿಂತನೆಗಳೂ ಕೂಡಿ ಈ ಮುಕ್ತಕಗಳಿಗೆ ಚಿರಂತತೆಯನ್ನು, ರಸಸಿದ್ಧಿಯನ್ನು ತಂದುಕೊಟ್ಟಿವೆ.

ಸಂಸಾರ ಸಾಗರದಲ್ಲಿ ಮುಳುಗುಹಾಕಿ 'ಕಾವ್ಯಾನಂದ'ರು ಸಂಪಾದಿಸಿದ ಮೂರು ಮುತ್ತುಗಳು 'ಕಲ್ಲೋಲ ಮಾಲೆ'ಯ ಆರನೆಯ ಮುಕ್ತಕದಲ್ಲಿ ನಮಗೆ ದೊರೆಯುತ್ತವೆ.

"ಬಾಳಕಡಲಲಿ ಮುಳುಗಿ ಮೂರು ಮುತ್ತನು ತಂದೆ
'ಸ್ನೇಹ', 'ಸ್ವೈರಣೆ', 'ಸಮತೆ' ಎಂದು ಕರೆದೆ"

ಇಂಥ ಮೌಕ್ತಿಕಗಳು 'ಕಲ್ಲೋಲಮಾಲೆ'ಯ ಎಪ್ಪತ್ತೆರಡು ಪುಟಗಳ ತುಂಬ ಚಲ್ಲವರಿದಿವೆ. ಓದುಗ ಅವುಗಳ ಓದುವಿಕೆ ಹಾಗೂ ಮನನದಿಂದ ಬದುಕಿನಲ್ಲಿ ಶಾಂತಿ, ಸಂತೃಪ್ತಿ ಪಡೆಯಬಲ್ಲ. ಈ ಕೃತಿಯ ಬೆನ್ನ ಹಿಂದೆಯೇ ಬಂದ ಅವರ ಇನ್ನೊಂದು ಕವನ ಸಂಗ್ರಹ 'ಮೊದಲು ಮಾನವನಾಗು' ಎಂಬುದು. ಈ ಸಂಗ್ರಹಕ್ಕೆ ಹೊಸಗನ್ನಡ ಕಾವ್ಯಲೋಕದ ಸೀಮಾ ಪುರುಷರಲ್ಲೊಬ್ಬರಾದ ಡಾ|| ವಿ. ಕೃ. ಗೋಕಾಕ ಅವರು ಮುನ್ನುಡಿ ಬರೆಯುತ್ತ "....ಇಪ್ಪತ್ತು ವರ್ಷಗಳ ಮೇಲಾಗಿ ಶ್ರೀ ಸಿದ್ಧಯ್ಯ ಪುರಾಣಿಕರನ್ನು ನಾನು ಬಲ್ಲೆ. ಜೀವನದ ದೃಷ್ಟಿಯಲ್ಲಿ, ಸಾಹಿತ್ಯದಲ್ಲಿ, ಆಡಳಿತದಲ್ಲಿ ಎಲ್ಲ ದೃಷ್ಟಿಯಿಂದಲೂ ಅವರು ಬೆಳೆದಿದ್ದಾರೆ.... ನಿಸರ್ಗದ ಚೆಲುವು, ಮಾನವನ ಮರ್ತ್ಯ-ಉದಾತ್ತ ವ್ಯಕ್ತಿತ್ವ, ದೇಶದ ಹಾಗೂ ಸಮಾಜದ ಕರುಣಾಜನಕ ಸ್ಥಿತಿ ಇವು ಅವರ ಅಂತಃಕರಣ ವನ್ನು ಸೂರೆಗೊಂಡ ಕಾವ್ಯವಸ್ತುಗಳಾಗಿವೆ.... ಇವರ ಕಾವ್ಯದ ಮೇಲ್ಮೆ ವಿಶೇಷವಾಗಿ ನಿಸರ್ಗೋಪಾಸನೆ ಹಾಗೂ ಮಾನವಾಂತಃಕರಣದ ಅಭಿವ್ಯಕ್ತಿಯಲ್ಲಿ ಒಡಮೂಡುತ್ತದೆ. ಮಾನವಾಂತಃಕರಣವೇ ಈ ಸಂಗ್ರಹದ ಪ್ರಧಾನ ವಸ್ತುವಾಗಿದೆ...." ಎಂದಿದ್ದಾರೆ.

ಈ ಸಂಗ್ರಹದಲ್ಲಿಯ 'ಯುದ್ಧಾಸ್ವ', 'ಕೈಗೆ ಬರಲಿ ಕೋವಿ' ಎಂಬಂಥ ಕವಿತೆಗಳಲ್ಲಿ ಕಾವ್ಯಾನಂದರ ರಾಷ್ಟ್ರಪ್ರೇಮವನ್ನು ಗುರುತಿಸಿದರೆ, 'ಕನ್ನಡ ಕುಲ', 'ತುಂಗಭದ್ರಾ ಜಲಾಶಯ' ಎಂಬ ಕವಿತೆಗಳಲ್ಲಿ ನುಡಿಪ್ರೇಮ ಹಾಗೂ ನಾಡಿನ ವೈಭವ, ಪೂರ್ಣ ಭವಿಷ್ಯವನ್ನು ಕಾಣುತ್ತೇವೆ.

ತುಂಗಭದ್ರಾ ಜಲಾಶಯವನ್ನು ಕವಿ ಕಂಡ ರೀತಿ ಅದೆನಿತು ಭವ್ಯವಾಗಿದೆ ನೋಡಿ–

ಕನ್ನಡದ ತೇಜ ಅವಿನಾಶಿ
ಇಲ್ಲಿ ಅದು ಸಲಿಲವೇಷಿ
ಇದೆ ಇನ್ನು ಕನ್ನಡದ ಕಾಶಿ

○

ನಿಜವತ್ತಿ ಈ ನಾಡ ಅಂತರಂಗದ ಅಧ್ಯಕ್ಷ
ಶ್ರೀ ವಿರೂಪಾಕ್ಷ?
ಈ ಜಲಾಶಯದ ತರಲ ತರಂಗ ಸಂಗೀತದಲಿ
ಕನ್ನಡದ ಮರುಹುಟ್ಟು ಹಾಡುತಿದೆ ಜಯಗೀತ

ಈ ಸಂಗ್ರಹದ ಶೀರ್ಷಿಕೆ ಹಾಗೂ ಕೊನೆಯ ಕವಿತೆ 'ಮೊದಲು ಮಾನವನಾಗು'–

ಓದಿ ಬ್ರಾಹ್ಮಣನಾಗು
ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು

ದುಡಿದು ಗಳಿಸಿ
ಏನಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು

ಇಂದಿನ ವಿಪರ್ಯಾಸಗೊಂಡಿರುವ ಬದುಕನ್ನು ಕಂಡಾಗ 'ಮೊದಲು ಮಾನವನಾಗು'ವುದು ಎಂದಿಗಿಂತಲೂ ಇಂದು ಅದೆನಿತು ಅವಶ್ಯ ಎಂಬುದರ ಅರಿವು ನಮಗಾಗುತ್ತದ. ಕವಿಯ ಆಶಯದಂತೆ ಈ ಮನುಷ್ಯ 'ಮೊದಲು ಮಾನವನಾಗ' ಬೇಕೆಂಬುದು ನಮ್ಮೆಲ್ಲರ ಆಶಯವೂ ಆಗಬೇಕು. ಇಂಥ ಕೃತಿಯನ್ನು ಧಾರವಾಡದ ತಾರಾಗ್ರಂಥ ಪ್ರಕಾಶನವೇ ಪ್ರಕಟಿಸಿ ಧನ್ಯತೆ ಪಡೆದಿದೆ.

ಕವಿಯಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಜೀವನ ಚರಿತ್ರೆ ಚಿತ್ರಿಸಿದ 'ಕಾವ್ಯಾನಂದ'ರು ಐದುನೂರ ಇಪ್ಪತ್ತೈದು ವಚನಗಳುಳ್ಳ 'ವಚನೋದ್ಯಾನ' ಪ್ರಕಟಿಸಿ ರಾಷ್ಟ್ರ ಪ್ರಸಿದ್ಧಿಯನ್ನು ಪಡೆದು ಕನ್ನಡಕ್ಕೆ ಕೀರ್ತಿ ತಂದರು. ಈ ಕೃತಿಗೆ ಕಲ್ಕತ್ತಾದ ಭಾರತೀಯ ಭಾಷಾ ಪರಿಷತ್ತು ಭಿಲ್ವಾರ ಪ್ರಶಸ್ತಿ ನೀಡಿ ಗೌರವಿಸಿತು. ಈ ಕೃತಿಗೆ ಡಾ|| ಹಾ. ಮಾ. ನಾಯಕರು ಮುನ್ನುಡಿ ಬರೆಯುತ್ತ.

"ಪುರಾಣಿಕರ ವಚನಗಳಲ್ಲಿ ಬಹುಧರ್ಮಗಳಿಲ್ಲ, ಒಂದೇ ಧರ್ಮ ಅದು ಜೀವನಧರ್ಮ. ಬಹುಮತಗಳಿಲ್ಲ, ಒಂದೇ ಮತ, ಅದು ಮಾನವಮತ ಬಹುಪಥಗಳಿಲ್ಲ, ಒಂದೇ ಪಥ; ಅದು ಶಿವಪಥ ಕಾಣದ ಕೈಯೊಂದು ಕಾಯುತಿದೆ ಎಂಬ ಭಕ್ತನ ಪರಮ ಶ್ರದ್ಧೆ, ಉದ್ದಕ್ಕೂ ಎದ್ದು ತೋರುತ್ತದೆ. ಈ ಶ್ರದ್ಧೆ, ಮುಗ್ಧತೆಯದಾದರೂ ಬಲವಾದದ್ದು. ಅದು ಧರ್ಮಜಡವಾದದ್ದಲ್ಲ; ಜೀವನ ವಿವೇಕದ್ದು...." ಎಂದಿದ್ದಾರೆ. ಈ ಮಾತುಗಳು ಬರೀಯಪ್ರಶಂಸೆಯ ಮಾತುಗಳಲ್ಲ ವಸ್ತುನಿಷ್ಠವಾದ ಮಾತುಗಳು.

ಕಾವ್ಯಾನಂದರು ಇಲ್ಲಿ ಅನುಭಾವಿ ಕವಿ (ಮಿಸ್ಟಿಕ್ ಪೋಯೆಟ್) ಯಾಗಿ ನಮಗೆ ಕಾಣಿಸಿಕೊಳ್ಳುತ್ತಾರೆ. ಅವರು ತಮ್ಮ ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ಮೊರೆಯಿಟ್ಟ ರೀತಿ ಹೀಗಿದೆ–

ನರರಿಗೆ ಶರಣು ಹೋದರೆ
ಅದು ದಾಸ್ಯ;
ನಿನಗೆ ಶರಣು ಹೋದರೆ
ಸ್ವಾತಂತ್ರ್ಯ ವಯ್ಯ
ನನ್ನಲ್ಲಿ ನಾನು ನೆಲೆಯೂರಿದರೆ
ಅದು ಬಂಧನ
ನಿನ್ನಲ್ಲಿ ನೆಲೆಸಿ ಬದುಕಿದರೆ
ಬಿಡುಗಡೆಯಯ್ಯ,
ನನಗಾಗಿ ನಾನು ಅರ್ಜಿಸಿದರೆ
ಅದು ಅಭಿಶಾಪ
ನಿನಗಾಗಿ, ನಿನ್ನ ವರಿಗಾಗಿ ಗಳಿಸಿದರೆ
ಅದು ವರದಾನವಯ್ಯ
ನನ್ನಿಷ್ಟಕ್ಕೆ ನಾನೆಂದರೆ
ಅದು ಅಜ್ಞಾನ
ನಿನ್ನಿಷ್ಟದಂತೆ ನಾನೆಂದರೆ

ಅದು ಸುಜ್ಞಾನವಯ್ಯ;
ನನಗೆ ತೋರಿದಂತೆ ಬರೆದರೆ
ಅದು ರಚನೆ
ನೀನು ತೋರಿಸಿದಂತೆ ಬರೆದರೆ
ಅದು ವಚನವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಿಂದ ನಿನ್ನಲ್ಲಿ ನಿನಗಾಗಿ ಬದುಕಿ
ನನ್ನಿಯಾಗುವ ಗುಟ್ಟು ತಿಳಿಸಯ್ಯ.

ಈ ವಚನದಲ್ಲಿ ಕಾವ್ಯಾನಂದರು ಯಾವುದು ಸ್ವಾತಂತ್ರ್ಯ, ಬಿಡುಗಡೆ, ವರದಾನ, ಯಾವುದು ಸುಜ್ಞಾನ, ವಚನ ಯಾವುದು ಎಂಬುದನ್ನು ಹೊಸ ಅರ್ಥಗಳೊಂದಿಗೆ ವಿವರಿಸಿದ್ದಾರೆ. ವಿಪುಲವಾದ ವಸ್ತು ವೈವಿಧ್ಯದಿಂದ, ಹೇಳುವ ಜಾಣ್ಮೆಯಿಂದ, ಭಾಷೆಯ ಲಾಲಿತ್ಯದಿಂದ ಅನುಭಾವದ ಪ್ರಖರತೆಯಿಂದ, ಪ್ರಾಸಾದಿಕ ಗುಣದಿಂದ ಈ ಕೃತಿ ಬಹುಕಾಲ ಉಳಿಯುವಂಥದು ಈಗ ತಾನೇ ಬಿಡುಗಡೆಯಾದ ಅವರ ಮೂರನೆಯ ವಚನ ಸಂಗ್ರಹ 'ವಚನಾರಾಮ' ಕೂಡ 'ವಚನೋದ್ಯಾನ' ದಂತೆ ಅವರ ಅನುಭಾವದ ಬದುಕನ್ನು, ಅದರ ಸಿದ್ಧಿಯನ್ನು ನಮ್ಮೆದುರಿಗಿರಿಸುತ್ತದೆ.

ಕನ್ನಡ, ಉರ್ದು, ಫಾರ್ಸಿ, ಹಿಂದೀ, ಇಂಗ್ಲೀಷ, ಸಂಸ್ಕೃತ ಹೀಗೆ ಹಲವು ಭಾಷೆಗಳ ಮೇಲೆ ಪ್ರಭುತ್ವ ಪಡೆದಿರುವ ಕಾವ್ಯಾನಂದರು ಮೌಲಿಕ ಕೃತಿಗಳನ್ನು ನೀಡುವುದರೊಂದಿಗೆ ಅನುವಾದಗಳನ್ನು ನೀಡಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಕೃತಿಯೆಂದರೆ ಹದಿನೆಂಟನೆಯ ಶತಮಾನದಲ್ಲಿ ಆಗಿ ಹೋದ ಕ್ರಾಂತಿಕಾರಿ ಕವಿ ಹಾಗೂ ಉರ್ದುಕಾವ್ಯಕ್ಕೆ ಹೊಸತಿರುವನ್ನು ನೀಡಿದ ನಜೀರ ಅಕಬರಾಬಾದಿಯನ್ನು ಕುರಿತಾದುದು.

ಈ ಪ್ರಬಂಧ ಕಾವ್ಯಾನಂದರ ಸಮಗ್ರ ಜೀವನ ಪರಿಚಯವನ್ನಾಗಲಿ ಅಥವಾ ಸಮಗ್ರ ಕೃತಿಗಳ ಅಧ್ಯಯನ ವನ್ನಾಗಲಿ ನೀಡುತ್ತಿಲ್ಲ. ಒಂದು ಪ್ರಬಂಧದಲ್ಲಿ ಹಾಗೆ ನೀಡುವುದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ ಅವರ ಜೀವನಕ್ಕೆ ಸಂಬಂಧಿಸಿದಂತೆ ಕೆಲ ಮಾತುಗಳು ಹಾಗೂ ಅವರ ಕಾವ್ಯ ಕೃತಿಗಳಿಗೆ ಸಂಬಂಧಿಸಿದಂತೆ ಕೆಲ ಮಾತು ಗಳನ್ನು ಇಲ್ಲಿ ಹೇಳಲು ಪ್ರಯತ್ನಿಸಿದ್ದೇನೆ. ಅವರ ಗದ್ಯ ಕೃತಿಗಳಾದ 'ಶರಣ ಚರಿತಾಮೃತ', 'ಸಿದ್ಧರಾಮ', 'ಬಸವಣ್ಣನವರ ಜೀವನ ಮತ್ತು ಸಂದೇಶ', 'ಕಥಾಮಂಜರಿ', 'ತುಷಾರಹಾರ', ನಾಟಕಗಳಾದ 'ಆತ್ಮಾರ್ಪಣ', 'ರಜತರೇಖೆ', 'ಭಾರತವೀರ', 'ನಿರ್ಬಂಧನ', ಕಾದಂಬರಿ 'ತ್ರಿಭುವನಮಲ್ಲ' ಇತ್ಯಾದಿ ಕೃತಿಗಳ ಬಗ್ಗೆ ಇಲ್ಲಿ ಒಂದು ಸಾಲುಕೂಡ ಹೇಳಲು ಸಾಧ್ಯವಾಗಿಲ್ಲ.

ಕಾವ್ಯಾನಂದರು ಶ್ರೇಷ್ಠ ಕವಿಗಳಾಗಿರುವಂತೆಯೇ ಶ್ರೇಷ್ಠ ವಾಗ್ಮಿಗಳೂ ಹೌದು ಮೂವತ್ತು ವರುಷಗಳ ಹಿಂದೆ ಅವರು ಧಾರವಾಡದ ಶ್ರೀ ಮುರುಘಾಮಠದಲ್ಲಿ ಪರಮಾರಾಧ್ಯರಾದ ಪೂಜ್ಯ ಶ್ರೀ ಮೃತ್ಯುಂಜಯ ಅಪ್ಪಗಳ ದಿವ್ಯ ಸಾನ್ನಿಧ್ಯದಲ್ಲಿ 'ಶರಣರ ಸುವರ್ಣ ಸೂತ್ರಗಳು' ಬದುಕನ್ನು ಉದಾತ್ತೀಕರಿಸಲು ಹೇಗೆ ಸಹಾಯ ವಾಗುತ್ತವೆ ಎಂಬುದನ್ನು ಬಹು ಅಮೋಘವಾದ ರೀತಿಯಲ್ಲಿ ಪ್ರತಿಪಾದಿಸಿದ್ದನ್ನು ನಾನು ಈಗಲೂ ಮರೆತಿಲ್ಲ, ಶ್ರೋತೃಗಳ ಮನವನ್ನು ಒಮ್ಮೆಲೇ ಆಕರ್ಷಿಸುವಂಥ ಚಾತುರ್ಯ, ವಿದ್ವತ್ತು ಅವರ ವಾಕ್ ಶಕ್ತಿಯಲ್ಲಿದೆ.

ಅವರದು 'ಶಿವಲಿಂಗದೃಷ್ಟಿ' ಎಂದು ಹೇಳಿದ್ದೇನೆ ಅವರು ಆರಂಭದಿಂದಲೂ ಅಂಥ ಸಂಸ್ಕಾರ ಪಡೆದವರು ಎಂಬುದಕ್ಕೆ ೧೯೪೭ರ ಮೇ ತಿಂಗಳಲ್ಲಿ ಹರಪನಹಳ್ಳಿಯಲ್ಲಿ ೩೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿ ಮಾತನಾಡಿದ ಕೆಲ ಮಾತುಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

'....ಈ ಸೃಷ್ಟಿಶಿವಸೃಷ್ಟಿಯಾಗಬೇಕು. ಅದಕ್ಕೆ ನಮ್ಮಲ್ಲಿ ಶಿವಜ್ಞಾನ, ಶುಭೇಚ್ಛೆ, ಮಂಗಲ ಕಾರ್ಯ ಗಳ ಅಪ್ರತಿಮಶಕ್ತಿಯ ಆವಿರ್ಭಾವವಾಗಬೇಕು. ಈ ಶಿವದರ್ಶನ ಶಕ್ತಿಯ ಸಾಕ್ಷಾತ್ಕಾರಗಳನ್ನು ಮೊದಲು

ತನ್ನಲ್ಲಿ ಸಾಧಿಸಿ 'ಸಿದ್ಧ'ನಾಗಿ ವ್ಯಕ್ತಿಗಳಲ್ಲಿ ತನ್ನ ಶಕ್ತಿಯನ್ನು ತುಂಬಿ ಆ ಶಕ್ತಿಯನ್ನು ಶಿವದ ಸಾಧನೆಯಲ್ಲಿ ತೊಡಗಿಸಿ ಸಮಾಜದ ಸರ್ವಶಕ್ತಿಗಳಿಗೆ ಶಿವದರ್ಶನ ಮಾಡಿಸಬೇಕು....' ಎಂದ ಕಾವ್ಯಾನಂದರು ಆ ಸಮ್ಮೇಳನವಲ್ಲಿ ಶಿವನನ್ನು ಕುರಿತು ಹೀಗೆ ಹಾಡಿದರು:

ಭೂಗಗನದ ವಿಸ್ತಾರದ ಮಹರಂಗವ ಮಾಡಿ
ನಾಗಗಳನು ಭೂಷಣಗಳ ಅಂಗಾಂಗಕೆ ಮಾಡಿ
ಆ ಗರುವದ ಇನಶಶಿಗಳ ತಾಳಗಳನು ಮಾಡಿ
ಸಾಗರಗಳ ರಾಗಗಳನೆ ಸಂಗೀತವ ಮಾಡಿ
ಯೋಗದ ಡಮರುಗವನು ನುಡಿನುಡಿಸುತ ಲಾಡಿ
ಓಂಕಾರದ ಝೇಂಕಾರಕೆ ಕುಣಿವನು ಕಲೆಗಾರ!

ಇಂಥ ಕಲೆಗಾರನಾದ ಶಿವನ ಕಲಾಕೃತಿ ಈ ವಿಶ್ವ–ಎಂದವರು ಕಾವ್ಯಾನಂದರು. ಅಂದಿನಿಂದ ಇಂದಿನವರೆಗೂ ಅವರ ದೃಷ್ಟಿ–'ಶಿವಲಿಂಗ ದೃಷ್ಟಿ' ಅಂತೆಯೇ ಅವರ ಪ್ರೀತಿಯ ಅನುಜನಾದ ನಾನು ಅವರನ್ನು–"ಶಿವಲಿಂಗ ದೃಷ್ಟಿಯ ಕವಿ "ಕಾವ್ಯಾನಂದ'ರು" ಎಂದೇ ಕರೆದಿದ್ದೇನೆ.

□□

# ವಚನಾರಾಮು

—ಚಂದ್ರಶೇಖರ ಕಂಬಾರ

ಡಾ|| ಚಂದ್ರಶೇಖರ ಕಂಬಾರ ಅವರು ಪ್ರಸ್ತುತ ಹಂಪೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು. ಕಾವ್ಯಾನಂದರ ಇತ್ತೀಚಿನ ಗ್ರಂಥ "ವಚನಾರಾಮ"ದ ಬಿಡುಗಡೆಯನ್ನು ಮಾಡಲು ನಮ್ಮೀ ಮಹಾವಿದ್ಯಾಲಯಕ್ಕೆ ಆಗಮಿಸಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವವರಿದ್ದರು. ಆದರೆ ಅನಿರೀಕ್ಷಿತ ಕಾರ್ಯ ನಿಮಿತ್ತ ಬರಲಾಗದೆ "ವಚನಾರಾಮ" ಗ್ರಂಥದ ಬಗೆಗಿನ ಅವರ ಅಭಿಪ್ರಾಯಗಳಿಲ್ಲಿ ಹಿಡಿಯಲ್ಲಿ ಪಡಿಯನ್ನು ಹಿಡಿದಂತಿವೆ.

ಡಾ|| ಚಂದ್ರಶೇಖರ ಕಂಬಾರರು ಬೆಳಗಾಂವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೇರಿ ಗ್ರಾಮದವರಾದರೂ, ಇಂದು ಸಮಸ್ತ ಕರ್ನಾಟಕದವರಾಗಿದ್ದಾರೆ. ಜನಪದ ಸಾಹಿತ್ಯ ಅವರ ಶ್ವಾಸೋಚ್ಛ್ವಾಸವಾದರೂ, ಗದ್ಯ-ಪದ್ಯ-ನಾಟಕ-ಚಲನಚಿತ್ರ, ಕತೆ, ಕವಿತೆಗಳಲ್ಲಿ ಸಿದ್ಧಹಸ್ತರು. ಇವರ ನಾಟಕಗಳು-ಚಲನ ಚಿತ್ರಗಳು ಕೇಂದ್ರ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ ಪಡೆದಿವೆ.

"ಕಾವ್ಯಾನಂದರ "ವಚನಾರಾಮು"ದಲ್ಲಿ ೫೦೧ ವಚನಗಳಿದ್ದು ಇವುಗಳಲ್ಲಿ ಅಂತರಂಗ ನಿವೇದನೆ, ಸಾಮಾಜಿಕ ವಿಷಮತೆ, ಆಧ್ಯಾತ್ಮಿಕ ತಹತಹಿಕೆ, ಸಮಕಾಲೀನ ಎಚ್ಚರ ಹಾಗೂ ಜಗತ್ತಿನ ಆವಶ್ಯಕತೆಗಳನ್ನು ಅರ್ಥಮಾಡಿಕೊಡುವಲ್ಲಿ ದಾರಿದೀಪಗಳಾಗಿವೆ...." ಎಂದಿದ್ದಾರೆ.

—ಸಂ.

ಹನ್ನೆರಡನೇ ಶತಮಾನದಲ್ಲಿ ಜನಪ್ರಿಯವಾಗಿದ್ದ ವಚನ ಸಾಹಿತ್ಯವನ್ನು, ಮತ್ತೆ ಇಪ್ಪತ್ತನೇ ಶತಮಾನದಲ್ಲಿ ಪುನರ್ ಸೃಷ್ಟಿಸಿದವರಲ್ಲಿ 'ಸಿದ್ಧಯ್ಯ ಪುರಾಣಿಕ'ರು ಪ್ರಮುಖರು. ಅವರು ೧೯೭೭ರಲ್ಲಿ 'ವಚನೋದ್ಯಾನ' ವನ್ನು ಪ್ರಕಟಿಸಿದಾಗ ಕನ್ನಡ ನಾಡಿನ ಸಹೃದಯ ಓದುಗರು ಅದನ್ನು ಉತ್ಸಾಹದಿಂದ ಸ್ವಾಗತಿಸಿದರು. ೧೯೮೫ರಲ್ಲಿ 'ವಚನ ನಂದನ'ವನ್ನು ಪುರಾಣಿಕರು ಹೊರ ತಂದಾಗ ಕನ್ನಡ ವಿಮರ್ಶಕರು ಅದರ ಬಗ್ಗೆ ಪ್ರೀತಿಯಿಂದ ಬರೆದರು. ಈಗ ೧೯೯೨ರಲ್ಲಿ 'ವಚನಾರಾಮ' ಬರುತ್ತಿದೆ. ಇದನ್ನೂ ಜನರು ಪ್ರೀತಿ-ಉತ್ಸಾಹದಿಂದ ಬರಮಾಡಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ.

ಈ 'ವಚನಾರಾಮ'ದಲ್ಲಿ ೫೦೧ ವಚನಗಳಿವೆ. ಇವುಗಳಲ್ಲಿ ಅಂತರಂಗ ನಿವೇದನೆ, ಸಾಮಾಜಿಕ ವಿಷಮತೆಯ ಬಗ್ಗೆ ಚರ್ಚೆ, ಆಧ್ಯಾತ್ಮಿಕ ತಹತಹಿಕೆ, ಸಮಕಾಲೀನ ಎಚ್ಚರ-ಇವೆಲ್ಲವೂ ಇವೆ. ಈ ಕೃತಿಯ ಮುನ್ನುಡಿಯಲ್ಲಿ ಸಿ.ಪಿ.ಕೆ. ಯವರು ಹೇಳಿದ ಹಾಗೆ "ಸಿದ್ಧಯ್ಯ ಪುರಾಣಿಕರ ವಚನಗಳ ಮೇಲೆ ಪ್ರಾಚೀನ ವಚನಗಳ ಪ್ರಭಾವ ಮುದ್ರೆ ಸಾಂದ್ರವಾಗಿದೆ; ರೂಪ ರಚನಾ ವಿನ್ಯಾಸಗಳಲ್ಲಿ ಮಾತ್ರವಲ್ಲ, ತಿರುಳಿನಲ್ಲಿ ಕೂಡಾ".

ಇಚ್ಛಿದ್ದರೂ ಹಲವೆಡೆಗಳಲ್ಲಿ ಪುರಾಣಿಕರು ಪ್ರಾಚೀನ ವಚನಗಳನ್ನು ಮೀರಲು ಪ್ರಯತ್ನಿಸಿದ್ದಾರೆ, ಸಮಕಾಲೀನ ಜಗತ್ತಿನ ಅಗತ್ಯಗಳನ್ನು ಅರ್ಥಮಾಡಿಕೊಂಡು ಅದನ್ನು ವಚನದಲ್ಲಿ ತರಲು ಪ್ರಯತ್ನಿಸಿದ್ದಾರೆ. ಉದಾಹರಣೆಗೆ ೧೪೫ನೇ ವಚನದಲ್ಲಿ ಅವರು ಪ್ರಸ್ತುತ ರಾಜಕಾರಣವನ್ನು ಟೀಕಿಸುವುದನ್ನು ನೋಡಬೇಕು. ಅದೇ ರೀತಿ ೧೨೨ನೇ ವಚನದಲ್ಲಿ ರಾಷ್ಟ್ರಧ್ವಜ, ರಾಷ್ಟ್ರಗೀತೆಯ ಬಗ್ಗೆ, ೨೨೨ನೇ ವಚನದಲ್ಲಿ ಗಾಂಧೀಜಿಯ ಬಗ್ಗೆ, ೨೬೫ನೇ ವಚನದಲ್ಲಿ ಕಾದಂಬರಿ ಪ್ರಕಾರದ ಬಗ್ಗೆ, ೩೧೪ನೇ ವಚನದಲ್ಲಿ ಸ್ವಾತಂತ್ರ್ಯ, ಸಮಾನತೆಗಳೆಂಬ ಆಧುನಿಕ ಪರಿಕಲ್ಪನೆಯ ಬಗ್ಗೆ ಅವರು ತಮ್ಮ ವಿಚಾರಗಳನ್ನು ಮುಂದಿಡುತ್ತಾರೆ.

ಮುಖ್ಯವಾದ ಸಂಗತಿ ಎಂದರೆ, ಸುಮಾರು ಎಂಟುನೂರು ವರ್ಷಗಳಷ್ಟು ಹಿಂದಿನ ಸಾಹಿತ್ಯ ರೂಪವೊಂದನ್ನು ಪುರಾಣಿಕರು ಆಧುನಿಕ ಅಭಿವ್ಯಕ್ತಿಗೆ ಸಾರ್ಥಕವಾಗಿ ಬಳಸಿಕೊಂಡಿದ್ದಾರೆ. ಆ ಮೂಲಕ ಕಾಲದ ಅಂತರವನ್ನು ಕಾಪಾಡಿಕೊಂಡಿದ್ದಾರೆ ಎನ್ನುವುದೇ ಆಗಿದೆ.

ಪುರಾಣಿಕರ ಆಧುನಿಕ ವಚನ ಸಾಹಿತ್ಯವು ಕನ್ನಡ ನಾಡಿನ ಎಲ್ಲೆಗಳನ್ನು ಮೀರಿ ಭಾರತವನ್ನು ತನ್ನ ತೆಕ್ಕೆಗೆ ಒಗ್ಗಿಸಿಕೊಂಡಿದೆ. 'ನನ್ನ ರಾಷ್ಟ್ರದ ಯಾವ ಭಾಗವನ್ನು ನೋಡಿದರೂ ನಲಿವು ಚಿಮ್ಮುತ್ತದೆ' ಎಂದು ಅವರು ಬರೆಯುವಾಗ ಅವರಲ್ಲಿರುವ ರಾಷ್ಟ್ರದ ಕಲ್ಪನೆಯ ವಿಸ್ತಾರವನ್ನು ಗಮನಿಸಬೇಕು. ಹಾಗಾಗಿ ಪುರಾಣಿಕರು 'ನನ್ನ ರಾಷ್ಟ್ರಧ್ವಜವನ್ನು ನೋಡಿದಾಗೆಲ್ಲ ಮೈಯುಬ್ಬುತ್ತದೆ; ನನ್ನ ರಾಷ್ಟ್ರ ಗೀತೆಯನ್ನು ಕೇಳಿದಾಗಲೆಲ್ಲ ರೋಮಾಂಚನವಾಗುತ್ತದೆ' ಎಂದು ಬರೆಯುತ್ತಾರೆ. ಇದು ನಮ್ಮ ೧೨ನೇ ಶತಮಾನದ ವಚನಕಾರರ ಧೋರಣೆಗಿಂತ ಭಿನ್ನವಾದುದು ವಚನಕಾರರ ನಾಡಿನ ಕಲ್ಪನೆ ಮೂಲತಃ ಸಾಮಾಜಿಕವಾದುದು ಮತ್ತು ವಿಶ್ವಾತ್ಮಕವಾದುದು. ಹಾಗಾಗಿಯೇ ಅಲ್ಲಿ ಆಧ್ಯಾತ್ಮದ ಪರಿಭಾಷೆಯೂ ಕ್ರಿಯಾಶೀಲವಾಗುತ್ತದೆ. ಪುರಾಣಿಕರಲ್ಲಿ ಹಾಗಾಗುವುದಿಲ್ಲ. ಅವರ ಪ್ರಜ್ಞೆ ಮೂಲತಃ ಸಾಮಾಜಿಕ ಮತ್ತು ಆಂತರಿಕವಾದುದು ಹೀಗಾಗಿ—

ಸ್ವತಂತ್ರತೆ ಬಂದಾಕ್ಷಣ
ಸಮಾನತೆ ಬರುವುದೆಂಬುದು ಭ್ರಮೆಯಯ್ಯ
ಸಿರಿವಂತರ ಸ್ವತಂತ್ರತೆ ದೀನರ ದಾಸ್ಯ
ಹೋರಾಡಿ ಸಮಬಾಳು, ಸಮಪಾಲು ಪಡೆಯದಿರೆ
ಬಡವರಿಗೆ ಬಿಡುಗಡೆಯೇ ಪಾಶ!

ಎಂದು ಕರೆಕೊಡುವುದು ಅವರಿಗೆ ಸುಲಭ ಸಾಧ್ಯವಾಗುತ್ತದೆ.

ಪುರಾಣಿಕರು ತಮ್ಮ ವಿಚಾರಗಳ ಅಭಿವ್ಯಕ್ತಿಯಲ್ಲಿ ರಸೆಲ್, ಲಿಯೋನಾರ್ಡವಿಂಚಿ, ಅಂಬೇಡ್ಕರ ಮೊದಲಾದವರನ್ನು ನಿಸ್ಸಂಕೋಚವಾಗಿ ಬಳಸಿಕೊಳ್ಳುತ್ತಾರೆ. ಬರ್ಮಾ, ಪಾಕಿಸ್ತಾನ, ಆಫ್ರಿಕಾ ದೇಶಗಳನ್ನು ಬೇಕೆಂದಾಗ ಉದಾಹರಿಸುತ್ತಾರೆ. ಪರ್ಮಿಟ್ಟು ಮೊದಲಾದ ವಿದೇಶೀ ಪದಗಳನ್ನು ಹಿಂಜರಿಕೆಯಿಲ್ಲದೆ ಬಳಸುತ್ತಾರೆ. ಕೆಲವು ಕಡೆಗಳಲ್ಲಿ ಮಾತ್ರ ಶುದ್ಧಾಂಶವಾಗಿ ೧೨ನೇ ಶತಮಾನದ ವಚನಕಾರರಂತೆ ಬರೆಯುತ್ತಾರೆ. ಉದಾಹರಣೆಗೆ ೪ನೇ ವಚನವನ್ನು ನೋಡಬಹುದು.

ಬಿಸಿಲಿಗೆ ಕೆರೆ ಬತ್ತುವುದೆಂದು
ಶರಧಿ ಬತ್ತುವುದೆ, ಅಯ್ಯ
ಗಾಳಿಗೆ ಕಡ್ಡಿ ಅಲುಗುವುದೆಂದು
ಗುಡ್ಡ ಅಲುಗುವುದೆ ಅಯ್ಯ
ಬೆಂಕಿಗೆ ಬನವು ಸುಡುವುದೆಂದು
ಬಯಲು ಸುಡುವುದೆ, ಅಯ್ಯ

ನೀರಿಗೆ ಮಣ್ಣು ಕರಗುವುದೆಂದು
ಕಲ್ಲು ಕರಗುವುದೆ ಅಯ್ಯ....

೮ನೇ ವಚನ :

ಹಸಿ ನೆಲಕ್ಕೆ ಹಸುರಾಗುವ ಕನಸು
ಹಸುರಾದರೆ ಸಸಿಯಾಗುವ ಕನಸು
ಸಸಿಯಾದರೆ ಗಿಡವಾಗುವ ಕನಸು
ಗಿಡವಾದರೆ ಕುಸುಮಿಸಿ ಫಲಿಸುವ ಕನಸು
ಫಲಿಸಿದ ಮೇಲೂ ಬೀಜ ಭೂಮಿ ಸೇರಿ
ಮತ್ತೆ ಮೊಳೆವ ಕನಸು....

ಇಂಥ ಕಡೆಗಳಲ್ಲಿ ಪುರಾಣಿಕರು ೧೨ನೇ ಶತಮಾನದ ವಚನಕಾರರ ವಚನಗಳ ಸತ್ವದ ಹತ್ತಿರವೇ ಸುಳಿಯುತ್ತಾರೆ. ಬಹುಶಃ ಈ ಬಗೆಯ ರಚನೆಗಳೇ ಪುರಾಣಿಕರ ಅತ್ಯುತ್ತಮ ರಚನೆಗಳೆಂದು ತೋರುತ್ತದೆ. ೧೬, ೧೯, ೨೪, ೩೯, ೪೬, ೬೩, ೧೨೯, ೧೫೩, ೧೯೦, ೨೩೩, ೩೦೬, ೪೬೧, ೪೭೧, ೪೮೭; ೫೦೧, – ಈ ನಿಟ್ಟಿನಲ್ಲಿ ಬಹಳ ಹೃದ್ಯವಾದ ರಚನೆಗಳು. ಇವುಗಳಲ್ಲಿ ಭಾವ ಮತ್ತು ಭಾಷೆ ಹದವಾಗಿ ಬೆರೆತುಕೊಂಡಿದೆ.

ವಚನಗಳ ರೂಪಕ ಶಕ್ತಿಯನ್ನು ಪುರಾಣಿಕರು ಅನನ್ಯವಾಗಿ ಬಳಸಿಕೊಳ್ಳುತ್ತಾರೆ. ಕೆಲವೊಮ್ಮೆ ಮಾತ್ರ ರೂಪಕಗಳನ್ನು ಶಿಥಿಲಗೊಳಿಸಿ ವಾಚ್ಯಗೊಳಿಸುವುದುಂಟು. ಉದಾಹರಣೆಗೆ ೨೨ ನೇ ವಚನದಲ್ಲಿ ಹಾಗಾಗಿದೆ. 'ಮಲ್ಲಿಗೆಯನ್ನು ಬಿಡಿಯಾಗಿ ಮುಡಿಯಲಾಗದು, ಕೇದಗೆಯನ್ನು ಇಡಿಯಾಗಿ ಮುಡಿಯಾಲಾಗದು; ನಿನ್ನನ್ನು ಮಾತ್ರ ಬಿಡಿಯಾಗಿ ಮುಡಿಯಬಹುದು' ಎಂದು ಹೇಳಿ ಅದೇ ಕ್ಷಣದಲ್ಲಿ 'ಜೀವಾತ್ಮನಾಗಿ' ಎಂದು ವಿವರ ನೀಡುತ್ತಾರೆ. ಮುಂದೆ 'ಮುಕ್ತಾತ್ಮನಾಗಿ' ಎಂದು ವ್ಯಾಖ್ಯಾನ ನೀಡುತ್ತಾರೆ. ಇಂಥ ಕಡೆಗಳಲ್ಲಿ ರೂಪಕ ಶಕ್ತಿ ಕುಂಠಿತವಾಗಿ ವಚನಗಳ ಬಂಧ ಶಿಥಿಲವಾದದ್ದೂ ಉಂಟು. ೮೦, ೨೧೭, –ನೇ ವಚನಗಳಲ್ಲಿ ಹಾಗಾಗಿದೆ.

ಒಟ್ಟಂದದಲ್ಲಿ ಸಿದ್ಧಯ್ಯ ಪುರಾಣಿಕರ ಈ 'ವಚನಾರಾಮ' ಅಭ್ಯಾಸ ಯೋಗ್ಯವಾದ ಸಂಕಲನ ಅದರಲ್ಲಿ ಪ್ರತಿಭೆ ಪಾಂಡಿತ್ಯ ಮತ್ತು ಜೀವನಾನುಭವದ ಹದವಾದ ಬೆರಕೆಯಿದೆ. ಬಹಳ ಕಾಲ ಉಳಿಯುವ ನೂರಾರು ವಚನಗಳು ಇಲ್ಲಿವೆ. 'ಆದ್ಯರ ವಚನಗಳಿಗೆ ಆಧುನಿಕ ವಚನಗಳು ಸರಿಯೇ?' ಎಂಬ ಅವರ ಮಾತು ಅವರ ವಿನಯವನ್ನು ತೋರಿಸುತ್ತದೆ. 'ವಚನಾರಾಮ' ನಮ್ಮ ಕಾಲದ ಮಹತ್ವದ ಕೃತಿಗಳಲ್ಲಿ ಒಂದು ಎಂದು ಧಾರಾಳವಾಗಿ ಹೇಳಬಹುದು. ಕನ್ನಡಿಗರು ಇಂಥ ಕೃತಿಯನ್ನು ಕೊಂಡು, ಓದಿ ಧನ್ಯರಾಗಬೇಕು.

□ ⊏

# ಕಾವ್ಯಾನಂದರ ಕಾವ್ಯದಲ್ಲಿ ಪ್ರೇಮ

—ಡಾ|| ಹೆಚ್. ಚಂದ್ರಶೇಖರ

ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಡಾ|| ಹೆಚ್. ಚಂದ್ರಶೇಖರ "ಕಾವ್ಯಾನಂದರ ಕಾವ್ಯದಲ್ಲಿ ಪ್ರೇಮ" ಪ್ರಬಂಧವನ್ನು ಬಹು ರಸವತ್ತಾಗಿ ಮಂಡಿಸಿದರು. ಡಾ|| ಹೆಚ್. ಚಂದ್ರಶೇಖರ ಬೆಂಗಳೂರಿನಲ್ಲಿ ಗಣಿ ಹಾಗೂ ಭೂವಿಜ್ಞಾನ ಇಲಾಖೆಯು ಉಪನಿರ್ದೇಶಕರಾಗಿದ್ದಾರೆ. ಆಸ್ಟ್ರಿಯಾ, ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳನ್ನು ಅಭ್ಯಾಸಕ್ಕಾಗಿ ಸುತ್ತಾಡಿದ್ದಾರೆ. ಭೂವಿಜ್ಞಾನಕ್ಕೆ ಸಂಬಂಧಿಸಿದ ಸುಮಾರು ೬೦ ಪ್ರಬಂಧಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಗೊಂಡಿವೆ. "ಶರಣ ಸಾಹಿತ್ಯ" ಹಾಗೂ "ಫೋಟೋಗ್ರಾಫಿ" ಎಂದರೆ ಇವರಿಗೆ ಪಂಚಪ್ರಾಣ. ನೂರಕ್ಕೂ ಮಿಕ್ಕಿ ಕನ್ನಡದ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಇವರ ಲೇಖನಗಳು ಬೆಳಕನ್ನು ಕಂಡಿವೆ.

ಡಾ|| ಸಿದ್ಧಯ್ಯ ಪುರಾಣಿಕರನ್ನು ಬಹು ಸಮೀಪದಿಂದ ಕಂಡು, ಅವರಿಂದಲೇ ನೆಲೆಗೊಂಡಂತಹ ಡಾ|| ಚಂದ್ರಶೇಖರರು ಪ್ರಸ್ತುತ ಲೇಖನದಲ್ಲಿ "ಪ್ರೇಮ"ವನ್ನು ಇಡಿಯಾಗಿ ನೋಡದೇ ಒಮ್ಮೆಯಾಗಿ ಕಾಣದೇ "ಹೊಸ ಹರೆಯದ ಪ್ರೇಮ", "ನವದಂಪತಿಗಳ ನೋವು ನಲಿವು" "ಪ್ರೇಮ ಕಲಹ" "ಸಂತೃಪ್ತ ಗೃಹಿಣಿ" "ಒಲವೇ ಸರ್ವಸ್ವ" ಮುಂತಾಗಿ ವಿಂಗಡಿಸಿ, ರಸಿಕರಾದ ಸಹೃದಯರ ಬಾಯಲ್ಲಿ—ಎದೆಯಲ್ಲಿ ನೀರೂರುವಂತಹ ದೃಷ್ಟಾಂತಗಳನ್ನಿಲ್ಲಿ ಹೆಣೆದಿದ್ದಾರೆ. ಭೂಮಿಯ ಆಳದಲ್ಲಿ ಎಷ್ಟು ನೀರಿದೆ, ಎಲ್ಲೆಲ್ಲಿ ಏನೇನಿದೆಯೆಂಬುದನ್ನು ಪತ್ತೆ ಹಚ್ಚುವಂತೆ, ಇಲ್ಲಿಯೂ ಸಹ "ಕಾವ್ಯಾನಂದ"ರ ಪ್ರೇಮ ಸಾಹಿತ್ಯದಾಳಕ್ಕಿಳಿದು ಒಲವು—ನಲುವಿನ ಕಾರಂಜಿಯನ್ನೆ ಪುಟಿಸಿದ್ದಾರೆ........

—ಸಂ.

ಕನ್ನಡದ ಅತ್ಯಂತ ಪ್ರಮುಖ ಹಿರಿಯ ಕವಿಗಳಲ್ಲಿ ಕಾವ್ಯಾನಂದರು ಒಬ್ಬರು. ಜಲಪಾತ (೧೯೫೩), ಕರುಣಾ ಶ್ರಾವಣ (೧೯೫೫), ಮಾನಸ ಸರೋವರ (೧೯೫೯), ಕಲ್ಲೋಲ ಮಾಲೆ (೧೯೬೮), ಮಾನವನಾಗು (೧೯೬೪), ಚರಗ (೧೯೮೨), ಹಾಲ್ದೆನೆ (೧೯೯೦) ಮತ್ತು ಮರುಳಸಿದ್ಧನ ಕಂತೆ (೧೯೯೧) ಮೊದಲು ಇವು ಕಾವ್ಯಾನಂದರ ಕಾವ್ಯಕೃತಿಗಳು. ಕಾವ್ಯಾನಂದರ ಕಾವ್ಯವೆಂದರೆ ಗಂಭೀರ ಚಿಂತನೆ, ಸುಂದರ ಪ್ರಕೃತಿಯ ವರ್ಣನೆ, ಅನುಭಾವ ಇತ್ಯಾದಿ ವಿಷಯಗಳಿಂದ ತುಂಬಿದ ಭಾವಗೀತೆಗಳು ಎಂಬುದು ಸಾಮಾನ್ಯರ ಗ್ರಹಿಕೆ. ಇದು ಸ್ವಲ್ಪ ಮಟ್ಟಿಗೆ ನಿಜ; ಆದರೆ ಪೂರ್ತಿ ನಿಜವಲ್ಲ. ಕಾವ್ಯಾನಂದರು ಮೈಸೂರು ಮಲ್ಲಿಗೆಯಂಥ ಕೇವಲ

ಪ್ರೇಮಗೀತೆಗಳ (ಅಥವಾ ದಾಂಪತ್ಯ ಗೀತೆಗಳ) ಸಂಗ್ರಹವನ್ನು ಪ್ರಕಟಿಸಿಲ್ಲವಾದರೂ, ಹಲವಾರು, ಬಹುಶಃ ಒಂದು ಸಂಗ್ರಹಕ್ಕೆ ಸಾಕಾಗುವಷ್ಟು, ಉತ್ತಮ ಪ್ರೇಮ ಮತ್ತು ದಾಂಪತ್ಯ ಗೀತೆಗಳನ್ನು ರಚಿಸಿದ್ದಾರೆ. ಈ ಗೀತೆಗಳಲ್ಲಿ ಬರುವ ಪ್ರೇಮದ ಚಿತ್ರಣವೇ ಈ ಲೇಖನದ ಉದ್ದೇಶ.

**ಹೊಸ ಹರೆಯದ ಪ್ರೇಮ:**

ಹೊಸ ಹರೆಯದ ಹುಡುಗ ಚೆಲುವೆಯನ್ನು ನೋಡಿದಾಗ ಯಾವುದೋ ಚಣದಲ್ಲಿ ಅವನ ಹೃದಯದಲ್ಲಿ ಅವನಿಗರಿವಿಲ್ಲದಂತೆಯೇ ಪ್ರೇಮಾಂಕುರವಾಗುತ್ತಿದೆ. ಆಗ ಏನಾಗಿಯೋ ಇದ್ದ ಹುಡುಗ ಏನೋ ಆಗಿಬಿಡುತ್ತಾನೆ! ಆಗ ಆ ಹುಡುಗ ಹಾಡುವದು ಈ ರೀತಿಯಾಗಿ:

"ಏನೆಂದು ಬಣ್ಣಿಸಲಿ ನೀನು ಮಾಡಿದ ಮೋಡಿ
ಏನಿದ್ದೆ ಏನಾದೆ ನಿನ್ನ ನೋಡಿ"

ಈ ಚೆಲುವೆಯು ತನ್ನ ಒಂದು ನೋಟದಲ್ಲಿ ಯುವಕನ ಜೀವನದಲ್ಲಿರುವ ಏಕತಾನತೆಯನ್ನು ಕಳೆದು "ಸಪ್ತಸ್ವರ ಮಿಶ್ರಣದ ಹೊಸರಾಗ ಮಾಲೆಯನ್ನು ಹಬ್ಬಿಸುತ್ತಾಳೆ. ಯುವಕನ ಕಂಗಳಿಗೆ ಹೊಸ ನೋಟವನ್ನು ನೀಡುತ್ತಾಳೆ. ಅವನ ಹಾಡಿನ ಹೊಲದಿ ಹೊಸ ಬೆಳೆಯನ್ನು ಬೆಳೆಸುತ್ತಾಳೆ, ಅವನ ಬುದ್ಧಿಯ ಜಲದಲ್ಲಿ ಹೊಸ ತಾವರೆಯನ್ನು ಅರಳಿಸುತ್ತಾಳೆ. ಈ ನೀರೆ, ತನ್ನ ಒಂದೇ ಒಂದು ನೋಟದಿಂದ"– ಆದ್ದರಿಂದ ಈ ಪ್ರೇಮಿ ಪ್ರೇಯಸಿಗೆ—

"ಇದಕಾಗಿ ನಾ ನಿನಗೆ ಚಿರಋಣಿಯು ಓ ಚೆಲುವೆ
ನಿನ್ನ ನಾ ಪಡೆಯಲಿ ಪಡೆಯದಿರಲಿ!"

ಎಂದು ಹೇಳುತ್ತಾನೆ. ಈ ಸಾಲುಗಳಲ್ಲಿ ಕವಿಯು ಹದಿಹರೆಯದ ಸುಂದರ ಸುಮಧುರ ಕನಸುಗಳನ್ನು ಚಿತ್ರಿಸುವದಲ್ಲದೆ, ಈ ಕನಸುಗಳ ಸುತ್ತಲಿರುವ ಸಾಮಾಜಿಕ ನಿರ್ಬಂಧಗಳನ್ನು ನವಿರಾಗಿ ಅಷ್ಟೇ ಮಾರ್ಮಿಕವಾಗಿ ಚಿತ್ರಿಸಿದ್ದಾನೆ.

ಈಗ ಪ್ರೇಮಿಗೆ ತನ್ನ ಪ್ರೇಯಸಿಯ ಹೃದಯದಲ್ಲಿಯೂ "ಇಲ್ಲಿ ಕೊರೆಯುವ ನೋವು ಅಲ್ಲಿಯೂ ಇರಬಹುದೆ?" ಎಂಬ ಆಶಾಭರಿತ ಶಂಕೆ ಕಾಡುತ್ತದೆ. "ಜಿಂಕೆಗಣ್ಣಿನ ಚೆಲುವೆ" "ಮೋಹ ಬೀರಿ" ಸವಿ ನೋಟಗಳನ್ನು ತೂರಿದರೂ, ಈ ಹರೆಯದ ಹೈದನಿಗೆ ಆತಂಕ ಕಾಡುತ್ತದೆ. ಆಗ ಅವನು,

"ನಿನ್ನ ನನ್ನವಳೆಂದದ ನ್ಯಾಯವೇ ಕಾಂತೆ?
ನೀನೇ ನಿರ್ಣಯ ಮಾಡು ನಿನ್ನಿಚ್ಛೆಯಂತೆ!" ("ನಿನ್ನ ನೋಡಿ ಬಂದ ಮೇಲೆ")

ಎಂದು ಇನಿಯಳ ಮೊರೆ ಹೋಗುತ್ತಾನೆ. ಆದರೂ ಈ ವಿರಹಿಗೆ ಸಮಾಧಾನವಿಲ್ಲ. "ಬೇಗ ಮುಗುದೆಯ ಬೇಗೆಯ ಬಗೆಯ ಧಗೆಯ ದಿನಗಳು ಮುಗಿಯಲಿ" ಎಂದು ಹಾರೈಸುತ್ತಾನೆ. ಈ ಹಾರೈಕೆಯಲ್ಲಿಯೂ ಅವನ ವಿರಹದ ಕೊನೆಯಾಗಲಿ ಎಂಬ ಆಶೆಯೂ ಸೇರಿದೆ. ಹೇಗಿದೆ ನೋಡಿ ಕವಿಯ ಚಮತ್ಕಾರದ ಮೋಡಿ!

ಪ್ರೇಮಿಗಳನ್ನು ದೂರುವದು, ಕಾಡುವದು, ಕಪ್ಪಕ್ಕೀಡು ಮಾಡುವದು ಮೂಢ ಸಂಪ್ರದಾಯಗಳ ಬಂದಿಯಾದ ಸಮಾಜ ಬಹುಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಶಿಷ್ಟಾಚಾರ. ಅಂಥ ಸಮಾಜಕ್ಕೆ ಉತ್ತರಿಸುವ ಈ ಪರಿ ಎಲ್ಲಾ ಕಾಲದ ಎಲ್ಲಾ ಪ್ರೇಮಿಗಳು ಮೆಚ್ಚುವಂಥದು—

"ಒಳಿತು ಕೆಡುಕನು ಮೀರಿ
ಪುಣ್ಯ ಪಾಪವ ಮೀರಿ
ಸ್ವರ್ಗ ನರಕವ ಮೀರಿ
ನಮ್ಮೆದೆಯ ದಾರಿ" ("ಮುಸುಕು ತೆರೆ")

**ನವ ದಂಪತಿಗಳ ನೋವು-ನಲಿವು:**

ಹತ್ತು ಹಲವು ನೋವುಗಳನ್ನು ಅನುಭವಿಸಿ, ನಲ್ಲನಲ್ಲೆಯರು ಗಂಡ ಹೆಂಡತಿಯಾಗುತ್ತಾರೆ. ಬಡತನದಲ್ಲಿ ಹೂಡಿದ ಹೊಸ ಸಂಸಾರದಲ್ಲಿ ದಂಪತಿಗಳು ಬಗೆಬಗೆಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಮನೆ ನೋಡಾ ಬಡವನದು, ಮನನೋಡಾ ಸಿರಿವಂತನದು ಎಂಬಂಥ ಪರಿಸ್ಥಿತಿ. ಆಗ ಗಂಡ "ಹೊಸ ಹೆಂಡತಿಗೆ" ಹೇಳುವ ರೀತಿ, ಬಹುಶಃ ಎಲ್ಲಾ ನವ ದಂಪತಿಗಳ ಭಾವನೆಗಳಿಗೆ ನುಡಿ ಕೊಟ್ಟಂತಿದೆ:

"ವಡವಿ ವಸ್ತ್ರಾ ಮಾತ್ರ ಕಡೆತನಕ ಕೇಳಬ್ಯಾಡ
ನಮ್ಮವ್ವ ಬಡವಿ, ನಾ ನಿನಗೊಡವಿ, ಬಿಡು ವಸ್ತ್ರದಗೊಡವಿ"

"ಇದು ಇಲ್ಲ, ಅದು ಇಲ್ಲ, ಏನಿಲ್ಲದಿದ್ದರೂ
ಸಂತೋಷವೊಂದುಂಟು ಈ ಚಿಕ್ಕ ಮನೆಯೊಳಗ"

ಹೀಗೆ ಹೊಸ ಹೆಂಡತಿಗೆ ನಲ್ಲ ಒಲವಿನ ಜೊತೆಗೆ ತಿಳಿವನ್ನು ನೀಡಿದ್ದಲ್ಲದೆ,

"ಶಿವನ ದಯೆಯಿದ್ದರೆ ಒಂದಿಲ್ಲ ಒಂದುದಿನ
ಉಪ್ಪರಿಗೆಯಾದೀತು ಅವರ ಈ ಮುರುಕು ಮನೆ"

ಎಂಬ ಆಶೆ ತುಂಬಿದ ಭರವಸೆ ನೀಡುತ್ತಾನೆ. ಆಶಾವಾದವೇ ನಮ್ಮ ಜೀವನವನ್ನು ಮುನ್ನಡೆಸುತ್ತದೆಯಲ್ಲವೆ? ಸುಮಾರು ೫೦ ರ ದಶಕದಲ್ಲಿ ಪ್ರಕಟವಾದ ಈ ಕವನ, ೧೯೬೪ರಲ್ಲಿ ಗೃಹಸ್ಥನಾದ ನನ್ನ ಅನುಭವಕ್ಕೆ ತೀರ ಹತ್ತಿರ! ಇದು ಈ ಕವನದ ಸಾರ್ಥಕತೆಗೆ ಸಾಕ್ಷಿ!!

ಹೊಸ ಬಾಳನ್ನು ಹೂಡುವ ತನ್ನ ಪ್ರೀತಿಯ ಮಗನಿಗೆ, ತಂದೆಯು ತನ್ನ ಕೊನೆಗಾಲದಲ್ಲಿ ನೀಡುವ ಸಂದೇಶ ಹೃದಯ ಕಲುಕುವಂಥದು:

"ನೂರು ಕಷ್ಟವ ನುಂಗಿ ನಿನಗೆ ನಾ ಕಲಿಸಿದೆನು
ನಾನು ಕಟ್ಟಿದ ಬುತ್ತಿ ಎಷ್ಟು ದಿನ ಇರಬಹುದು?
ನಿನ್ನ ಅಂಬಲಿ ನೀನೇ ಗಳಿಸಿಕೋ ಕಂದ!"

**ಪ್ರೇಮ ಕಲಹ:**

ಒಲವು ತುಂಬಿದ ನಲ್ಲೆಯ ಜೊತೆಯಲ್ಲಿ ಹರೆಯದ ಹುಡುಗ ತನ್ನ ಕರ್ತವ್ಯವನ್ನು ಮರೆತು ಅಧರಾಮೃತ ವನ್ನು ಸವಿಯುವದರಲ್ಲಿಯೇ ಸಮಯ ಕಳೆಯುವದು ಸಾಮಾನ್ಯ. ಆಗ ಕಾವ್ಯಾನಂದರ ಕನ್ಯೆ ತನ್ನ ಇನಿಯನಿಗೆ ನೀಡುವ ಪ್ರೀತಿಯ ಜೇನು ತುಂಬಿದ ಎಚ್ಚರಿಕೆಯ ನುಡಿಗಳಿವು:

"ತೋಳ ಸೆಳೆ ಮಂಚದಲೆ ತೂಗದಿರು ನಲ್ಲ
ನಾನೊಲ್ಲೆ ನೀಪರಿಯ ಬರಿದು ಬಾಳಿನ ಬೇಡಿ
ಗಂಡು-ಗಾಂಢೀವವನು ಹಿಡಿದು ನಡೆ ಓನಲ್ಲ
ನಾನು ಬರುವೆನು ಜತೆಗೆ ಹೆಂಗರುಳ ರಥವ ಹೂಡಿ". (ಎರಡು ಚಿತ್ರಗಳು)

ಗಂಡ ಗಾಂಢೀವಿಯಾಗಿ, ಹೆಂಡತಿಯು ಕೃಷ್ಣನಂತೆ ಸಾರಥಿಯಾಗಿ ಬಾಳಿನಲ್ಲಿ ಮುನ್ನಡೆದರೆ ಯಾವ ಕಷ್ಟಗಳು ನಿಲ್ಲಬಲ್ಲವು?

ಗಂಡ ಹೆಂಡಿರ ಮಧ್ಯೆ ಮನಸ್ತಾಪ ಉಂಟಾಗುವದು ಅಪರೂಪವೇನಲ್ಲ. ತನ್ನ ದುಡಿಮೆಯಲ್ಲಿ ಉಂಟಾದ ಕ್ಷಣಿಕ ನಿರಾಶೆ, ತೊಂದರೆಗಳಿಂದ ಬೇಸತ್ತ ಗಂಡ ತಾಳ್ಮೆಗೆಟ್ಟು ಹೆಂಡತಿಯ ಮೇಲೆ ಕೈಮಾಡುತ್ತಾನೆ. ನಂತರ ತನ್ನ ತಪ್ಪಿನ ಅರಿವಾದಾಗ ಈ ರೀತಿಯಾಗಿ ಪಶ್ಚಾತ್ತಾಪ ಪಡುತ್ತಾನೆ—

"ಹೇಗೆ ದುಡಿಯಲಿ ಸತಿಯೆ ನೀನು ಸಹ ಬೇಸರಿಯೆ?
ಹೋಗಲಿಕೆ ಕಡೆತನಕ ಬಂತಿಂದು ಸಿಟ್ಟು,
ಮನ್ನಿಸೆನ್ನನು ಚೆನ್ನೆ ಇನ್ನು ಬಡಿಯೆನು ರನ್ನೆ
ಎಷ್ಟು ನೋಯಿತೊ ನಿನ್ನ ಚೆಲುವ ಕೇದಗೆ ಕೆನ್ನೆ." (ಎರಡು ಚಿತ್ರಗಳು)

ಇಂಥ ಪ್ರೇಮ ಕಲಹಗಳು ಸತಿಪತಿಯರ ಪ್ರೇಮದ ಸಸಿಗೆ ನೀರೆರೆದಂತಾಗುತ್ತದೆ. ಅದಕ್ಕಾಗಿ ನಲ್ಲೆ ಹೇಳುತ್ತಾಳೆ—

"ಪ್ರಣಯ ಜೀವನದಲ್ಲಿ ಹುಸಿ ಕಲಹ ರಸವು
ಪ್ರೇಮಕ್ಕೆ ತುಸು ಅಗಲಿ ಕೂಡುವದೆ ರಸವು." (ರಸ)

ಹೊಸದಾಗಿ ಸಂಸಾರಹೂಡಿದ ಪತಿ ಸಂಜೆಗೆ ಇನಿಯಳಿಗಾಗಿ ತಪ್ಪದೆ ಹೂತರುವ, ತಂದು ಅವಳ ತುರುಬಿನಲ್ಲಿ ಪ್ರೀತಿಯಿಂದ ಮುಡಿಸುವ ಪದ್ಧತಿಯನ್ನು ಇಟ್ಟುಕೊಂಡಿದ್ದಾನೆ. ಆದರೆ ಒಂದು ದಿನ ಯಾವುದೋ ಗಡಿಬಿಡಿಯಲ್ಲಿ ಹೂ ತರುವದನ್ನು ಮರೆತಿದ್ದಾನೆ ಹರೆಯದ ಈ ಎರೆಯ. ಆಗ ಇನಿಯಳನ್ನು ರಮಿಸುವ ಸುಂದರ ಚಿತ್ರ "ಉತ್ತರ"ದಲ್ಲಿದೆ. ಕೋಪಿಸಿಕೊಂಡ ಕನ್ನೆಗೆ "ಹೂಗಳೇಕೆ ಹೂವಿಗೆಂಬೆನು, ಯಾಕೆ ಸುಳ್ಳನು ಹೇಳಲಿ?" ಎಂದು ಹೇಳುತ್ತಾನೆ. ನಲ್ಲೆಯ ಪ್ರತಿಯೊಂದು ಅಂಗದಲ್ಲಿ ಒಂದೊಂದು ಬಗೆಯ ಬಾಡದ ಹೂ ಇರುವಾಗ ಮತ್ತೆ ಅವಳಿಗೇಕೆ ಬಾಡಿ ಹೋಗುವ ಹೂ!! ಕೊನೆಗೆ ಹೇಳುತ್ತಾನೆ—

"ಹೂಗಳೊಡನೆ ಸ್ಪರ್ಧೆ ನಡೆದರೆ
ನೀನೇ ಹೂಗಳ ಜಯಿಸುವಿ!"

ಹೀಗೆ ಹೊಗಳಿದಾಗ ಯಾವ ಹೆಣ್ಣು ಮರುಳಾಗದೆ, ತನ್ನ ಇನಿಯನ ಕೊರಳಿಗೆ "ಕರಶಿರೀಷದ ಮಾಲೆ"ಯನ್ನು ತೊಡಿಸಲಾರಳು!!

ಇಂಥ ಗಂಡು ಹೆಣ್ಣಿನ ಸಂಸಾರವು ಎರಡು ಮುಖ ಒಂದು ಆತ್ಮದಂತೆ ಇರುತ್ತದೆ. ಹೀಗೆ ಪರಸ್ಪರರನ್ನು ಒಲಿದು, ಅರಿತು ಬದುಕುವ ಗಂಡು ಹೆಣ್ಣಿನ ಬಾಳಿನ ಚಿತ್ರವನ್ನು ಕಾವ್ಯಾನಂದರು ಒಂದು ಸುಂದರ ಹಾಗೂ ಸಮರ್ಥರೂಪಕದೊಂದಿಗೆ ಈ ರೀತಿಯಾಗಿ ನೀಡುತ್ತಾರೆ—

"ಗಂಡು ಹೆಣ್ಣಿನ ಬಾಳು ಗಂಡ ಭೇರುಂಡದೊಲು,
ಎರಡು ಮುಖ, ಒಂದಾತ್ಮ, ವೈಮನಗಳು."

**ಸಂತೃಪ್ತ ಗೃಹಿಣಿ:**

ತರುಣಿ ಈಗ ಮಗನನ್ನು ಹೆತ್ತು ತಾಯಿಯಾಗಿ, ನೆರೆಯ ಮನೆಯಾಕೆಯೊಂದಿಗೆ ಪ್ರೀತಿಯ ಗೆಳತಿಯಾಗಿ ಬಾಳುತ್ತಿರುವಾಗ, ಆಕೆಯ ಗಂಡ, ಗೆಳತಿ, ಕಂದ ಹಿಂದಿನಿಂದ ಕದ್ದು ಬಂದು ಕಣ್ಣುಗಳನ್ನು ಮುಚ್ಚಿ "ನಾನಾರು?" ಎಂದು ಕೇಳಿದಾಗ ಈ ಸಂತೃಪ್ತ ಗೃಹಿಣಿ ತೆಗೆವ ಹಿಗ್ಗಿನ ಉದ್ಗಾರ ಹೇಗಿದೆ ನೋಡಿ—

"ಯಾರಾರಿಗುತ್ತರವ ಹೇಳತಾ "ನಾನಾರು?"
ಎಂಬ ಪ್ರಶ್ನೆಗೆ ತಾಯಿ, ಸಾಕಾಯಿತು.
"ನಾನಾರು" ಎನ್ನುವರು "ನೀನಾರು" ಎಂದಿಲ್ಲ—
ಈ ಹಿಗ್ಗು ಕಡೆತನಕ ಬೇಕಾಯಿತು!" (ನಾನಾರು)

ನಿಜ; ಇಂಥ ಹಿಗ್ಗು ಎಲ್ಲಾ ಮಹಿಳೆಯರಿಗೆ ಎಲ್ಲಾ ಕಾಲಕ್ಕೂ ಸಿಕ್ಕರೆಷ್ಟು ಚೆನ್ನ!

ಸಾಮಾನ್ಯವಾಗಿ ಎಲ್ಲರೂ, ಕಾಣದ ಸ್ವರ್ಗ, ಸಿಗದ ಕಲ್ಪವೃಕ್ಷಕ್ಕಾಗಿ ಆಸೆಪಡುತ್ತಾರೆ. ಆದರೆ ನಿಜ ಸುಖವನ್ನು ಬಯಸುವ ಗೃಹಸ್ಥನು ಈ ರೀತಿಯಾಗಿ ಹೇಳುತ್ತಾನೆ:

"ನನಗೆ ಅಮೃತ ಬೇಕಿಲ್ಲ–
ಮಡದಿ ಕಡೆದೀವ ಮಜ್ಜಿಗೆಯೆ ಸಾಕು!
ಸುಧೆಯೆ ಬೇಕೆನುವ ಸುರಸುಂದರಿಯು ಬೇಕಿಲ್ಲ–
ರೊಟ್ಟಿ ತಟ್ಟುವ ಸರಳ ಸತಿಯೆ ಸಾಕು!" (ನನಗೆ ಅಮೃತ ಬೇಕಿಲ್ಲ)

ಇಂಥ ಸತಿಪತಿಗಳಿಂದ ಕೂಡಿದ ಸಂಸಾರವನ್ನು ಕಂಡು ಕವಿಯು ಈ ರೀತಿಯಾಗಿ ಸಂತಸಪಡುತ್ತಾನೆ.

"ಪ್ರೀತಿ ತುಳುಕುವ ಮನೆಯೆ ಸ್ವರ್ಗವು
ಪ್ರೀತಿಪರೆ ದೇವತೆಗಳು
ಘನತರವು ಗಾರ್ಹಸ್ಥ್ಯಶ್ರೀ ಯೋಗವು
ಪ್ರೀತಿಸಿರೆ ದಂಪತಿಗಳು." (ಜಗವೆ ದೇಗುಲ)

**ಒಲವೇ ಸರ್ವಸ್ವ:**

ಭಕ್ತ ಸತಿಯಾಗಿ, ದೇವರನ್ನು ಪತಿಯಾಗಿ ಆರಾಧಿಸುವ, ಪೂಜಿಸುವ ಸತಿ–ಪತಿ ಭಾವದ ವಚನಗಳನ್ನು ಬಸವಣ್ಣ, ಅಕ್ಕಮಹಾದೇವಿ ಇತ್ಯಾದಿ ವಚನಕಾರರು ರಚಿಸಿದ್ದಾರೆ. ವಚನ ಸಾಹಿತ್ಯವನ್ನು ತುಂಬಾ ಆಳವಾಗಿ ಅಧ್ಯಯನ ಮಾಡಿರುವ ಕಾವ್ಯಾನಂದರ ಭಾವಗೀತೆಗಳಲ್ಲೂ ಈ ಬಗೆಯ ಆತ್ಮದ ತುಡಿತವು ತುಂಬಾ ಮಾರ್ಮಿಕವಾಗಿ ಹಾಗೂ ಆತ್ಮೀಯವಾಗಿ "ಹೃದಯದ ಹುಲ್ಲೆ" "ಬರಲಿಲ್ಲ" ಇತ್ಯಾದಿ ಕವನಗಳಲ್ಲಿ ಮತ್ತು "ಮರುಳ ಸಿದ್ಧನ ಕಂತೆ"ಯಲ್ಲಿಯೂ ಚಿತ್ರಿತವಾಗಿದೆ:

"ಬರಲಿಲ್ಲ ಈ ತಟಕೆ ನೀನಾದರೂ
ಬರಲಿಲ್ಲ ಆ ತಟಕೆ ನಾನಾದರೂ ||ಪ||

ಅಗಲಿಕೆಯೆ ಅಗಲಲಿಲ್ಲೇನಾದರೂ
ಹಗಲೊಂದು ಹಲವಾರು ಯುಗವಾದರೂ ||ಅ.ಪ||

ವಿರಹಕ್ಕೆ ಕೊನೆಯುಂಟೆ ಎಂದಾದರೂ
ಪ್ರೇಮಕ್ಕೆ ಬಲವುಂಟೆ ಮುಂದಾದರೂ
..........................................
.......................................... (ಬರಲಿಲ್ಲ)

ಎದೆಯೆಲ್ಲ ಮೃದುವಾಗಿ ಹಣ್ಣಾದರೂ
ಮೈಯೆಲ್ಲ ನವೆ ನವೆದು ಸಣ್ಣಾದರೂ
ಮೈ ಕೂದಲೆಲ್ಲವು ಕಣ್ಣಾದರೂ
ತೋರದಾ ಮುಖಚಂದ್ರ ವಿನ್ನಾದರೂ.......(ಬರಲಿಲ್ಲ)

ಈ ಕವನದ ಪ್ರತಿ ಶಬ್ದದಲ್ಲಿ, ಪ್ರತಿ ಸಾಲಿನಲ್ಲಿ ಮಧುರ ಭಾವನೆಯು ಜಿನುಗುತ್ತದೆ. ಈ ಹಾಡಿನ ಗೇಯಗುಣ ಹೃದಯವನ್ನು ತಟ್ಟುತ್ತದೆ; ಓದುಗನನ್ನು ಹನಿಗಣ್ಣಿನವನ್ನಾಗಿಸುತ್ತದೆ. ಕನ್ನಡದ ಶ್ರೇಷ್ಠ ಗೇಯಗುಣದ ಪ್ರೇಮಗೀತೆಗಳಲ್ಲಿ ಇದೊಂದು ಎಂದರೆ ಉತ್ಪ್ರೇಕ್ಷೆಯಾಗದು. ಈ ಬಗೆಯ ಸತಿ–ಪತಿ ಭಾವ ಕಾವ್ಯಾನಂದರ ಸುಪ್ರಸಿದ್ಧ "ವಚನೋದ್ಯಾನ" ಮತ್ತು "ವಚನ ನಂದನ"ದಲ್ಲಿ ತುಂಬಾ ಪರಿಣಾಮಕಾರಿಯಾಗಿ ವಿಜೃಂಭಿಸಿದೆ.

ಕಾವ್ಯಾನಂದರಿಗೆ ಒಲವೇ ಸರ್ವಸ್ವ; ಅದೇ ಜೀವನಾಧಾರ ಏನೂ ಇರದಿದ್ದರೂ ಪ್ರೀತಿಯೊಂದಿದ್ದರೆ ಸಾಕು. ಅದು ಹೀಗೆ:

"ಇರುವುದೊಂದೇ ಒಲವು
ಮೆರೆವುದೊಂದೇ ಚೆಲುವು
ದೊರೆವುದೊಂದೇ ನಲವು
ಇದೇ ಬಾಳಗೆಲವು."          (ಮುಸುಕು ತೆರೆ)

ಏನಿಲ್ಲದಿದ್ದರೂ
ಪ್ರೀತಿಯೊಂದಿರಲಿ
ಎಂಥ ಕಾಳವೆ ಇರಲಿ
ಜ್ಯೋತಿಯೊಂದಿರಲಿ          (ರೂಪಕ–ಹಾಲ್ದೆನೆ)

ಕಾವ್ಯಾನಂದರ ಪ್ರೇಮ ಅಥವಾ ದಾಂಪತ್ಯ ಗೀತೆಗಳು ರಸಿಕನ ಹೃದಯವನ್ನು "ಹೂವುಗಳ ಹೃದಯವನು ಹೊಂಬಿಸಿಲು ಹೊಕ್ಕಂತೆ" ಹೊಗುತ್ತವೆ: "ಇಬ್ಬನಿಯ ಎದೆಯಲ್ಲಿ ಇನಕಿರಣ ನಕ್ಕಂತೆ" ದಂಪತಿಗಳನ್ನು ನಗಿಸುತ್ತವೆ. ಇದೇ ಈ ಕವನಗಳ ಸಾರ್ಥಕತೆ.

□ □

# ಕಾವ್ಯಾನಂದರ ಚರಿತ್ರ ಸಾಹಿತ್ಯ

—ಡಾ. ಮೃತ್ಯುಂಜಯ ಹೊರಕೇರಿ

ಡಾ|| ಮೃತ್ಯುಂಜಯ ಹೊರಕೇರಿಯವರು ಎಂ.ಎ.,ಪಿಎಚ್.ಡಿ. ಸದ್ಯ ಗುಲಬುರ್ಗಾ ವಿಶ್ವವಿದ್ಯಾಲಯದ ಸೊಂಡೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಪ್ರಾಧ್ಯಾಪಕರು. ಹಾಲಕೆರೆ ಶ್ರೀ ಅನ್ನದಾನೀಶ್ವರ ಶ್ರೀಮಠದ ಸದ್ಭಕ್ತರು. ಸಾಹಿತ್ಯ ಇವರ ಮನೆತನದ ಜನ್ಮಸಿದ್ಧ ಹಕ್ಕು.

"ಕಾವ್ಯಾನಂದರ ಚರಿತ್ರ ಸಾಹಿತ್ಯ" ಎಂಬ ವಿದ್ವತ್‌ಪೂರ್ಣ ಹಾಗೂ ಅಭ್ಯಾಸಯೋಗ್ಯವಾದ ಪ್ರಬಂಧವನ್ನು ಮಂಡಿಸುತ್ತ ಶ್ರೀ ಸಿದ್ಧಯ್ಯ ಪುರಾಣಿಕರು ಚರಿತ್ರೆಗೆ ಸಂಬಂಧಿಸಿದಂತೆ ಬರೆದಂತಹ ಹನ್ನೆರಡು ಕೃತಿಗಳೆಲ್ಲವನ್ನೂ ಅವಲೋಕಿಸಿದ್ದಾರೆ. ಇವರ ವಿಸ್ತಾರವಾದ ಓದು, ವ್ಯಾಪಕ ಅನುಭವ, ನಿರೂಪಣಾ ಸಾಮರ್ಥ್ಯ ಮುಂತಾದವುಗಳು ಈ ಪ್ರಬಂಧದಲ್ಲಿ ನಿದರ್ಶನವಾಗಿವೆಯೇ ಹೊರತು ಪ್ರದರ್ಶನವಾಗಿಲ್ಲ.

ಕಾವ್ಯಾನಂದರ ಪ್ರತಿಯೊಂದು ಚರಿತ್ರ ಸಾಹಿತ್ಯದ ಗ್ರಂಥಗಳ ಮುಖ್ಯಾಂಶಗಳನ್ನು ಮುದ್ದೆ ಮಾಡಿ, ಬುದ್ಧಿಗೆ ಆಹಾರವಾಗಬಲ್ಲ ಬುತ್ತಿ ಕಟ್ಟಿದ್ದಾರಿಲ್ಲಿ. ಊಟದಲ್ಲಿ ತುತ್ತಿನಿಂದ ತುತ್ತಿಗೆ ರುಚಿ ಹೆಚ್ಚುತ್ತ ಹೋದಾಗ ಮಾತ್ರ ಊಟ ಆನಂದದಲ್ಲಿ ಮುಗಿಯುತ್ತದೆ. ಹೀಗೇನೇ ಇಲ್ಲಿ ಇವರ ವಿವರಣೆ ಗ್ರಂಥದಿಂದ ಗ್ರಂಥಕ್ಕೆ ಮೇದುಳಿಗೆ ವಿಚಾರ ಪೂರ್ಣ ತುತ್ತನ್ನೊದಗಿಸುವಂತಿವೆ. ಕಾವ್ಯಾನಂದರ ಹಿರಿಯ ವ್ಯಕ್ತಿತ್ವವನ್ನು ಅವರ ಚರಿತ್ರ ಸಾಹಿತ್ಯದ ಮೂಲಕ ಶೃಂಗಾರಗೊಳಿಸಿದ ಹೆಗ್ಗಳಿಕೆ ಇಲ್ಲಿದೆ.

—ಸಂ.

ಆಗಿನ ಕಾಲದ ಕರ್ನಾಟಕ ಸರಕಾರಿ ಆಡಳಿತ ರಂಗದಲ್ಲಿ ಮಾಸ್ತಿ, ಜಯತೀರ್ಥ ರಾಜಪುರೋಹಿತ ಡಾ. ಎಚ್. ಎಲ್. ನಾಗೇಗೌಡ ಮತ್ತು ಡಾ. ಸಿದ್ಧಯ್ಯ ಪುರಾಣಿಕ ಎಂಬ ಹೆಸರುಗಳು ಬಹುಜನಪ್ರಿಯವಾಗಿದ್ದವು. ಇವರಲ್ಲಿ ನಾಗೇಗೌಡ ಸಿದ್ಧಯ್ಯ ಜೋಡಿ ನಾಗೇಗೌಡ ಮೈಸೂರು ಸೀಮೆಯವರು, ಸಿದ್ದಯ್ಯನವರು ಉತ್ತರ ಕರ್ನಾಟಕದವರು. ಇಬ್ಬರೂ ದಕ್ಷ ಅಧಿಕಾರಿಗಳಾಗಿದ್ದಂತೆ ತಮ್ಮ ಪ್ರವೃತ್ತಿಯಿಂದ ಕನ್ನಡ ನಾಡು-ನುಡಿಯ ಸೇವೆಗೈದು ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ಮರಣೀಯರೆನಿಸಿದವರು. ಈ ಹಿಂದೆ ಬಿ.ಎಲ್. ರೈಸ್, ವಾಲ್ಟರ್ ಎಲಿಯಟ್, ಇ.ಪಿ.ರೈಸ್, ಜೆ.ಎಫ್. ಫ್ಲೀಟ್ ಮುಂತಾದ ಪಾಶ್ಚಾತ್ಯ ಆಡಳಿತಗಾರರು ಹಾಕಿಕೊಟ್ಟ ಪರಂಪರೆಯನ್ನು ಮುಂದುವರಿಸಿಕೊಂಡು ಬಂದವರು.

ಡಾ. ಸಿದ್ಧಯ್ಯ ಪುರಾಣಿಕರು ನಮ್ಮ ಸಾಂಸ್ಕೃತಿಕ ಪರಂಪರೆಯ ಪ್ರಿಯ ಆರಾಧಕರು. ಅವರ ಬದುಕು–ಬರಹ–ಸಾಧನೆ–ಆಡಳಿತ ಅತ್ಯಂತ ವೈಶಿಷ್ಟ್ಯ-ವೈವಿಧ್ಯದಿಂದ ಕೂಡಿದ್ದಾಗಿದೆ. 'ಕಾವ್ಯಾನಂದ' ರೆಂದೇ ಖ್ಯಾತರಾದ ಅವರು ಮೂಲತಃ ಕವಿ, ಕಾವ್ಯದೊಂದಿಗೆ ನಾಟಕ, ಕಾದಂಬರಿ, ಜೀವನಚರಿತ್ರೆ, ಮಕ್ಕಳ ಸಾಹಿತ್ಯ ಮುಂತಾದ ಪ್ರಕಾರಗಳಲ್ಲೂ ಸಾಹಿತ್ಯ ರಚಿಸಿದ್ದು ನಾವೀಗ "ಕಾವ್ಯಾನಂದರ ಚರಿತ್ರ ಸಾಹಿತ್ಯ" ಕುರಿತು ನೋಡೋಣ.

ಚರಿತ್ರೆಗೆ ಸಂಬಂಧಿಸಿದಂತೆ ಶರಣ ಚರಿತಾಮೃತ, ಬಸವಣ್ಣನವರ ಜೀವನ ಹಾಗೂ ಸಂದೇಶ, ಸಿದ್ಧರಾಮ, ಮಹಾದೇವಿ, ಅಲ್ಲಮಪ್ರಭು, ಹರ್ಡೇಕರ ಮಂಜಪ್ಪನವರು, ಮಿರ್ಜಾಗಾಲಿಬ್ ಹೀಗೆ ಪ್ರಾಚೀನರಿಂದ ಹಿಡಿದು ಆಧುನಿಕರ ಜೀವನ ಚರಿತ್ರೆಯನ್ನು ಕುರಿತಂತೆ ಎಂಟು ಕೃತಿಗಳನ್ನು ಬರೆದಿದ್ದಾರೆ. ಭಾರತವೀರ ಆತ್ಮಾರ್ಪಣೆ, ರಜತರೇಖೆ ಎಂಬ ಮೂರು ನಾಟಕಗಳನ್ನು ರಚಿಸಿದ್ದಾರೆ. ತ್ರಿಭುವನಮಲ್ಲ ಎಂಬ ಒಂದು ಕಾದಂಬರಿಯನ್ನು ಬರೆದಿದ್ದಾರೆ. ನಜೀರ ಅಕಬರಾಬಾದಿ ಎಂಬ ಒಂದು ಅನುವಾದಿತ ಕೃತಿಯನ್ನು ಪ್ರಕಟಿಸಿದ್ದಾರೆ. ಚರಿತ್ರೆಗೆ ಸಂಬಂಧಿಸಿದಂತೆ ಒಟ್ಟು ಹನ್ನೆರಡು ಕೃತಿಗಳನ್ನು ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ್ದು ಅವುಗಳನ್ನು ನಾವೀಗ ಅವಲೋಕಿಸೋಣ.

ಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮ, ಮಿರ್ಜಾಗಾಲಿಬ್, ನಜೀರ್ ಅಕಬರಾಬಾದಿ ಇವು ಪರಿಚಯಾತ್ಮಕ ರೀತಿಯಲ್ಲಿ ಅವರವರ ಜೀವನಚರಿತ್ರೆ, ಸಾಧನೆ, ಸಂದೇಶ ಕುರಿತು ಕೃತಿಗಳಾಗಿದ್ದು ಸಾಮಾನ್ಯ ಓದುಗರನ್ನು ಉದ್ದೇಶಿಸಿ ಬರೆದಿದ್ದಾರೆ. ಆತ್ಮಾರ್ಪಣೆ ಮೊದಲ ನಾಟಕ. ರಜತರೇಖೆ ಗೀತಾತ್ಮಕ ನಾಟಕಗಳ ಸಂಕಲನ. ಇವುಗಳನ್ನು ಕೈಬಿಟ್ಟು "ಕಾವ್ಯಾನಂದರ ಚರಿತ್ರ ಸಾಹಿತ್ಯದ" ಗಟ್ಟಿ ಕೃತಿಗಳನ್ನು ಕುರಿತು ಅವಲೋಕಿಸೋಣ.

'ಶರಣ ಚರಿತಾಮೃತ'ವು ಡಾ. ಸಿದ್ಧಯ್ಯ ಪುರಾಣಿಕರ ಮೇರುಕೃತಿ. ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿಗೆ ಇದನ್ನು ರಚಿಸಿಕೊಟ್ಟಿದ್ದು ೧೯೭೦ರಲ್ಲಿ ಪ್ರಕಟಗೊಂಡಿದೆ. ಸಾವಿರ ಪುಟಗಳಿಗೆ ಸಮೀಪದ ಸಮೃದ್ಧ ಸಾಹಿತ್ಯ ಇದರಲ್ಲಿದೆ. ವಯಸ್ಕರ ಅಧ್ಯಯನಕ್ಕೆ ಪೂರಕವಾಗಿ ರಚಿತವಾಗಿದೆ.

ವಿಶ್ವವಿದ್ಯಾಲಯದ ಪಿಎಚ್. ಡಿ. ಪದವಿಗಾಗಿ ಸಿದ್ಧಪಡಿಸುವ ಪ್ರಬಂಧದಂತೆ ಇದನ್ನು ಆಳವಾದ ಮತ್ತು ಶಿಸ್ತಿನಿಂದ ಕೂಡಿದ ಅಧ್ಯಯನಗೈದು ರಚಿಸಲಾಗಿದೆ. ಇದಕ್ಕಾಗಿ ಅವರು ಬಳಸಿಕೊಂಡಿರುವ ೫೭೦ ಆಧಾರಗ್ರಂಥಗಳೇ ಸಾಕ್ಷಿ. ೧೩೫೦ ಶರಣರ ಉಲ್ಲೇಖ ನೀಡುವುದೇ ಪ್ರಮಾಣ. ಇದರಲ್ಲಿ ನೂರಾರು ಶರಣರ ಜೀವನಚರಿತ್ರೆ ನಿರೂಪವಾದುದೇ ನಿದರ್ಶನ. ಆದುದರಿಂದ ಇದೊಂದು ಸಂಶೋಧನಾತ್ಮಕ ಬೃಹತ್ ಗ್ರಂಥವೂ ಹೌದು.

ಸದ್ಯ ಕನ್ನಡದಲ್ಲಿ ಇಷ್ಟೊಂದು ಸಂಖ್ಯೆಯ ಶರಣರನ್ನು ಕುರಿತು ಬರೆದ ಚಾರಿತ್ರಾತ್ಮಕ ಗ್ರಂಥ ಇನ್ನೊಂದಿಲ್ಲ ಹರಿಹರ–ಹಳಕಟ್ಟಿ, ಹಿರೇಮಠರನ್ನು ಒಳಗೊಂಡಂತೆ ಅನೇಕರು ಶರಣರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಇನ್ನೂ ಬರೆಯುತ್ತಲಿದ್ದಾರೆ. ಆದರೆ ಸಾವಿರ ವರುಷಗಳ ದೀರ್ಘಕಾಲದ ಶರಣರನ್ನು ಕಾಲಮಾನದನುಸಾರ ಸೇರಿಸಿ ಬರೆದ ಕೃತಿಯೆಂದರೆ "ಶರಣ ಚರಿತಾಮೃತ"ವೊಂದೇ ಹೀಗಾಗಿ ಇದು ಶರಣರ ಜೀವನ ಚರಿತ್ರೆಯ ಸಮಗ್ರತೆಯನ್ನೊಳಗೊಂಡ ಸಂಪುಟವೆಂದೆನಿಸಿಕೊಳ್ಳುತ್ತದೆ.

ಈ ಕೃತಿ ರಚನೆಯಲ್ಲಿ ಅವರು ಅನುಸರಿಸಿದ ಪಂಚ ಸೂತ್ರಗಳು ಯೋಗ್ಯವಾಗಿವೆ.

೧) ಭಾರತದ ಎಲ್ಲ ಭಾಗಗಳ ಶರಣರೂ ಸೇರ್ಪಡೆಯಾಗಬೇಕು.
೨) ಪ್ರಾರಂಭದಿಂದ ಇಂದಿನವರೆಗೆ ಎಲ್ಲ ಶತಮಾನಗಳ ಶರಣರೂ ಸೇರ್ಪಡೆಯಾಗಬೇಕು.
೩) ಸಾಧ್ಯವಿರುವಷ್ಟು ಶರಣೆಯರೂ ಸಮಾವೇಶವಾಗಬೇಕು.
೪) ಎಲ್ಲ ಕಾಯಕಗಳೂ ಪ್ರತಿನಿಧಿಸಲ್ಪಡಬೇಕು.

೫) ಆಯ್ದುಕೊಂಡ ಚರಿತ್ರೆಗಳು ಪರಮತದೂಷಣೆ ಮೊದಲಾದವುಗಳಿಂದ ನಿರ್ಲಿಪ್ತವಾಗಿರಬೇಕು.[೧]

ಈ ಹಿನ್ನೆಲೆಯಲ್ಲಿ ಹಿರಿಯ ಶರಣ ಮಾದಾರ ಚೆನ್ನಯ್ಯನನ್ನು ಮೊದಲ್ಗೊಂಡ ಈ ಕೃತಿ ಈ ಶತಮಾನದ ಮಹಾನುಭಾವರೆನಿಸಿದ ವೀರಶೈವ ಮಹಾಸಭೆಯ ಸ್ಥಾಪಕರಾದ ಹಾನುಗಲ್ಲ ಕುಮಾರಸ್ವಾಮಿಗಳವರೆಗೆ ಅದರ ವ್ಯಾಪ್ತಿ ಹಬ್ಬಿದೆ.

ಮಂತ್ರಿಗಳು, ಕವಿಗಳು, ಸಂಸಾರಿಗಳು, ಸನ್ಯಾಸಿಗಳು, ಶ್ರೀಮಂತರು, ಬಡವರು,ಪ್ರಾಚೀನರು,ಆಧುನೀಕರು, ಯುವಕರು,ಮುದುಕರು, ಮಹಿಳೆಯರು-ಹೀಗೆ ಎಲ್ಲ ಬಗೆಯ ಅನುಭಾವಿಗಳು ಇದರಲ್ಲಿ ಸೇರ್ಪಡೆಯಾಗಿದ್ದಾರೆ.

ಶರಣರ ಜೀವನ ಚರಿತ್ರೆಯೆಂದರೆ ಪವಾಡಗಳ ಅಂತೆ-ಕಂತೆಗಳ ಸಂತೆಯೆಂಬ ಆರೋಪವು ಇದೆ. ಬಹುತೇಕ ವೀರಶೈವ ಪುರಾಣಗಳು ಈ ಆರೋಪವನ್ನು ಸಾಬೀತುಪಡಿಸುವಂತೆ ರಚಿತವಾಗಿವೆ. "ಇದರಲ್ಲಿ ಉಲ್ಲೇಖಿತವಾಗಿರುವ ಚರಿತ್ರೆಗಳಲ್ಲಿ ಸಾಧ್ಯವಿರುವಷ್ಟು ಪವಾಡಗಳನ್ನುಳಿದು ಮಾನವೀಯಾಂಶಗಳಿಗೆ ಮಹತ್ವ ಕೊಟ್ಟಿದ್ದೇನೆ. ಆದರೆ ಕೆಲವೆಡೆ ಅಪರಿಹಾರ್ಯವಾಗಿ ಪವಾಡಗಳು ಬಂದಿವೆ. ಅವೇ ಬರೆದ ಇಲ್ಲವೆ ಅವರ ಬಗ್ಗೆ ಉಪಲಬ್ಧವಿರುವ ಕೃತಿಗಳಲ್ಲಿ ಪವಾಡಗಳನ್ನುಳಿದು ಚರಿತ್ರೆಯನ್ನು ರೂಪಿಸಲು ಸಾಕಾಗುವಷ್ಟು ಸಾಮಗ್ರಿ ಎಲ್ಲೆಲ್ಲಿ ದೊರೆಯಿತೋ ಅಲ್ಲಲ್ಲಿ ಪವಾಡಗಳನ್ನು ಪೂರ್ತಿಯಾಗಿ ಬಿಟ್ಟು ಚರಿತ್ರೆಯನ್ನು ನೆಯ್ಯಲಾಗಿದೆ"[೨] ಎಂಬ ಧೋರಣೆ ಅನುಸರಿಸಿದ ಡಾ. ಪುರಾಣಿಕರು ವಸ್ತುನಿಷ್ಠತೆಗೆ ಹತ್ತಿರವಾಗಿ ಶರಣರ ಜೀವನ ಚರಿತ್ರೆ ಚಿತ್ರಿಸಿದ್ದಾರೆ. "ಇಲ್ಲಿ ಬರುವ ಅನೇಕ ಜೀವನ ಚರಿತ್ರೆಗಳಲ್ಲಿ ಬಹುಪಾಲು ಭಾವೋಪಯೋಗಿಯಾಗಿರುವ ಪ್ರತಿಮಾ ವಿಧಾನದ ಪ್ರತೀಕಗಳಂತಿವೆ. ಅವುಗಳಲ್ಲಿ ಎಲ್ಲದರಲ್ಲಿಯೂ ಲೋಕ ಸಂವಾದವನ್ನೆ ನಿರೀಕ್ಷಿಸಿ, ವಾಚ್ಯಾರ್ಥದಲ್ಲಿಯೂ ಅವು ಅಕ್ಷರಶಃ ಸತ್ಯಗಳೆಂದು ಭಾವಿಸಿ, ಪವಾಡಗಳನ್ನೆ ಅಧ್ಯಾತ್ಮದ ಪ್ರಗತಿಯ ಲಕ್ಷಣಗಳೆಂದು ತಿಳಿದು ಮೌಢ್ಯದ ಅಧೋಗತಿಗೆ ನಮ್ಮ ಜನತೆ ಇಳಿಯಬಾರದು ಶರಣರ ಜೀವನಚರಿತ್ರೆಯ ತಾತ್ಪರ್ಯವನ್ನು, ಹೃದಯವನ್ನು ದರ್ಶನ ಧ್ವನಿಯನ್ನು ಗ್ರಹಿಸಿ, ಆಧುನಿಕವಾದ ವೈಜ್ಞಾನಿಕ ದೃಷ್ಟಿಯಿಂದಲೂ ವಿಚಾರ ಬುದ್ಧಿಯಿಂದಲೂ ಅವರು ಮುಂದುವರಿದರೆ ಸರ್ವಧರ್ಮ ಸಮಾನತೆಯ ಮೇಲೆ ನಿಂತಿರುವ ಭಾರತ ರಾಷ್ಟ್ರಕ್ಕೆ ಶಾಶ್ವತವೂ, ಸ್ಥಿರವೂ ಆಗಿರುವ ಅಡಿಪಾಯ ಸಿದ್ಧವಾಗುತ್ತದೆ; ಲೋಕಕ್ಕೂ ಮಾರ್ಗದರ್ಶನವೂ ಆಗಬಹುದು"[೩] ಎಂದು ಮಹಾಕವಿ ಕುವೆಂಪು ಆ ಕೃತಿಗೆ ಬರೆದ ಮುನ್ನುಡಿಯಲ್ಲಿ ಓದುಗರಿಗೆ ಮಾರ್ಗದರ್ಶನ ಮಾಡಿರುವುದು ಉಚಿತವಾಗಿದೆ.

ಶರಣರ ಕಾಲ-ಸ್ಥಳ-ಅಂಕಿತ-ಇನ್ನಿತರ ಸಮಸ್ಯೆಗಳ ಬಗೆಗೆ "ಜನಪದ ಸಾಹಿತ್ಯದಿಂದ ಹಿಡಿದು ಶಾಸನಗಳ ವರೆಗೆ ಎಲ್ಲ ಬಗೆಯ ಸಾಹಿತ್ಯವನ್ನು ಬಳಸಿಕೊಂಡಿದ್ದೇನೆ" ಎನ್ನುವ ಪುರಾಣಿಕರು ತಮ್ಮದೇ ಆದ ಅಭಿಪ್ರಾಯ ನೀಡಿದ್ದು ಸಾಧ್ಯವಾದಷ್ಟು ಸಮನ್ವಯತೆಗೆ ಹೆಚ್ಚಿನ ಮಹತ್ವ ನೀಡಿದ್ದಾರೆ. "ಅದು ವಿರೋಧಾಭಾಸಗಳಲ್ಲಿ ಸಮನ್ವಯವನ್ನು ಸಾಮಂಜಸ್ಯವನ್ನು ಕಾಣಲೆಳಸಿದ ದೃಷ್ಟಿ; ವಕ್ರತೆಯಲ್ಲಿಯ ಸರಳತೆಯನ್ನು,ಅಸಹಜತೆಯಲ್ಲಿಯ ಸಹಜತೆಯನ್ನು, ಅಮಾನುಷದಲ್ಲಿಯ ಮಾನವೀಯತೆಯನ್ನು ನೋಡಬಯಸಿದ ದೃಷ್ಟಿ. ಅದು ನೋಡಿ ನಂಬಿದುದೆಲ್ಲ ಸರಿಯೆಂಬ ಜಂಭ ನನಗಿಲ್ಲ. ತಪ್ಪುಗಳನ್ನು ತೋರಿಸಿದರೆ ಒಪ್ಪಿಕೊಳ್ಳಬೇಕೆಂಬ ಹಂಬಲವಿದೆ"[೪] ಎಂಬ ಡಾ. ಪುರಾಣಿಕರ ಮಾತುಗಳಲ್ಲಿ ಸಂಶೋಧಕನ ಪ್ರಾಮಾಣಿಕ ಲಕ್ಷಣಗಳನ್ನು ವಿದ್ವಾಂಸನ ವಿನೀತಸ್ವಭಾವವನ್ನು ಕಾಣಬಹುದು.

ಇದರಲ್ಲಿ ಶರಣರ ಜೀವನಚರಿತ್ರೆಗೆ ಸಂಬಂಧಿಸಿದ ಅರವತ್ಮೂರು ಪ್ರಕರಣಗಳಿವೆ. ಪ್ರತಿಯೊಂದು ಪ್ರಕರಣಕ್ಕೂ ಸುಂದರವಾದ ಶಿರೋನಾಮೆ ನೀಡಿದ್ದಾರೆ. ಉದಾ: ಮರೆಯಲಾಗದ ಮೆರೆಮಿಂಡದೇವ, ಬಾಗಿದ

---

೧. ಶರಣ ಚರಿತಾಮೃತ-ಸಿದ್ಧಯ್ಯ ಪುರಾಣಿಕ ಪುಟ ಬರೆದವನ ಬಿನ್ನಹ-೧೯

೨. ಅದೇ ಪು -೨೦

೩, ಶರಣ ಚರಿತಾಮೃತ ಸಿದ್ಧಯ್ಯ ಪುರಾಣಿಕ ಮುನ್ನುಡಿ ಪು -೧೦

೪. ಅದೇ ಪು -೧೮

ತೆಲೆಯು, ಮುಗಿದ ಕೈ ಬಸವ ನೀರತಾವರೆ ಅಕ್ಕಮಹಾದೇವಿ, ಕಾಯಕದ ಕೈಗನ್ನಡಿ ನುಲಿಯ ಚಂದಯ್ಯ ಇನ್ನೂ ಇತ್ಯಾದಿಗಳು. ಹೀಗೆ ವಿಶೇಷಣ ನೀಡುವುದರ ಮೂಲಕ ಶರಣರ ಜೀವನ ಚರಿತ್ರೆಗೊಂದು ಕಳೆ ಬಂದಿದೆ. ಹಾಗೆಯೇ ಶರಣರ ಜೀವನದ ಮಹತ್ವದ ಘಟನೆಗೆ ಸಂಬಂಧಿಸಿದಂತೆ ರೇಖಾಚಿತ್ರಗಳನ್ನು ನೀಡಲಾಗಿದ್ದು ಸಾಮಾನ್ಯ ಓದುಗರ ಮೇಲೆ ಪ್ರಭಾವ ಬೀರುವಂತಿವೆ.

ಡಾ. ಸಿದ್ಧಯ್ಯ ಪುರಾಣಿಕರ ಶೈಲಿ ನವಿರಾದುದು; ಕವಿಹೃದಯವುಳ್ಳದ್ದು. ಹೇಳಬೇಕಾದುದನ್ನು ವಿವರವಾಗಿ, ಸರಳವಾಗಿ ತಿಳಿಯುವಂತೆ ಹೇಳುತ್ತಾರೆ. ಇದರಿಂದ ಕೇಳುಗರಿಗೂ ಓದುಗರಿಗೂ ಅವರು ಬರೆದುದು ಅರ್ಥವಾಗುತ್ತದೆ. ಸಾಮಾನ್ಯ ಓದುಗ ಅವರ ಮನದಲ್ಲಿದ್ದಾನೆ. ಆ ನಿಟ್ಟಿನಲ್ಲಿಯೇ ಅವರ ಬರಹ ಸಾಗಿಬಂದಿದೆ.

"ಇಲ್ಲೊಂದು ದಾರಿಯಿದೆ, ಶರಣರ ದಾರಿ. ಇದೊಂದು ನೇರವಾದ, ನಿರ್ಭಯವಾದ ನಿಸ್ಸಂದಿಗ್ಧವಾದ, ಅಡ್ಡಿ-ಆತಂಕಗಳಿಲ್ಲದ ದಾರಿ; ಸುಲಭವಾದ, ಸುಗಮವಾದ ಸುರಕ್ಷಿತವಾದ ದಾರಿ; ಬೇಗ ಗುರಿಮುಟ್ಟಿಸುವ ಶಂಭು ಶರಣರ ನಂಬುಗೆಯ ದಾರಿ. ಸರಿದೋರಿದರೆ ಇದನ್ನೊಮ್ಮೆ ತುಳಿದು ನೋಡಿ" ೧ ಎಂಬುದು ಅವರ ಈ ಗ್ರಂಥ ರಚನೆಯ ಉದ್ದೇಶವಾಗಿದೆ. ಅವರು ತೋರಿದ ದಾರಿ ಸರಿಯಾಗಿದೆ. ನಮ್ಮ ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳಲು ಇದು ಸಹಾಯಕವಾಗಿದೆ. ಶರಣರ ಅನುಭಾವದ ಬದುಕು ಆದರ್ಶನೀಯವಾಗಿದೆ; ಅನುಕರಣೀಯವಾಗಿದೆ. ವೈದಿಕರಿಗೆ ಭಗವದ್ಗೀತೆ ಇರುವಂತೆ ವೀರಶೈವರಿಗೆ ಇದೊಂದು ಶಿವಗೀತೆಯಾಗಿದೆಯೆನ್ನಬಹುದು. ಆದುದರಿಂದಲೇ ಕಾವ್ಯರೂಪದಲ್ಲಿರುವ ಶಿವಶರಣರ ಜೀವನ ಚರಿತೆಗಳನ್ನು ಪುರಾಣ-ಪ್ರವಚನಗಳನ್ನು ಏರ್ಪಡಿಸಿ ವಾಚಿಸಿದಂತೆ ಗದ್ಯದಲ್ಲಿರುವ ಈ 'ಶರಣ ಚರಿತಾಮೃತ'ವನ್ನು ಪುರಾಣ-ಪ್ರವಚನಗಳಿಗೂ ಬಳಸಿಕೊಳ್ಳುತ್ತಾರೆ. ಇದರಿಂದಾಗಿ ಈ ಕೃತಿಯ ಮಹತ್ವ ಹೆಚ್ಚಿದೆ. ಆದುದರಿಂದಲೇ ಇದನ್ನು ಗದ್ಯ ಮಹಾಕಾವ್ಯ **(Epic Prose)** ಎಂದು ಕರೆಯಬೇಕಾಗುತ್ತದೆ. ಡಾ. ಸಿದ್ಧಯ್ಯ ಪುರಾಣಿಕರ ಈ ಕೃತಿ ಶ್ರೀ ಸಾಮಾನ್ಯನಿಗೆ ಬಾಳಗೀತೆ, ಶಿವಭಕ್ತರಿಗೆ ಶಿವಗೀತೆ, ಕನ್ನಡ ಸಾಹಿತ್ಯಕ್ಕೆ ಗದ್ಯಗೀತೆಯಾಗಿ ಇಂದಿಗೂ ತನ್ನ ಮಕರಂದವನ್ನು ಬೀರುತ್ತದೆ. ಈ ಬೃಹತ್ಕೃತಿಯನ್ನು ಕುರಿತು ಪ್ರತ್ಯೇಕ ಅಧ್ಯಯನ ಗೈಯ್ಯಬೇಕಾದುದು ಅಗತ್ಯವಾಗಿದೆ.

ಕಾವ್ಯಾನಂದರ ಚರಿತ್ರ ಸಾಹಿತ್ಯಕ್ಕೆ ಸಂಬಂಧಿಸಿದ ಮಹತ್ವದ ಕೃತಿಗಳಲ್ಲಿ ಭಾರತವೀರ ನಾಟಕವೂ ಒಂದು. ಏಳುನೂರು ಆನೆಗಳನ್ನು ಪ್ರಪಾತಕ್ಕೆ ತಳ್ಳಿಸಿ ಕೊಂದವನೂ, ರಕ್ತದ ನದಿ ಹರಿಯುವುದನ್ನು ಕಾಣಬೇಕೆಂದವನೂ, ಮಹಾಕ್ರೂರಿಯೂ, ದುಷ್ಟನೂ ಆದ ಹೂಣ ದೊರೆ ಮಿಹಿರಕುಲನನ್ನು ಮಗದಾದನಿಪತಿ ಬಾಲಾದಿತ್ಯ ಕೊಂದು ಬೌದ್ಧ ಭಿಕ್ಷುಗಳನ್ನು ಮತ್ತು ಭಾರತದ ಅಖಂಡತೆಯನ್ನು ಕಾಪಾಡುವುದೇ ಈ ನಾಟಕದ ವಸ್ತುವಾಗಿದೆ. "ಸಿದ್ಧಯ್ಯ ಪುರಾಣಿಕರು ಭಾರತವೀರ ನಾಟಕವನ್ನು ಇತಿಹಾಸಕ್ಕೆ ಚ್ಯುತಿಯಾಗದಂತೆ ರಚಿಸಿದ್ದಾರೆ. ಈ ಪ್ರಯತ್ನದಲ್ಲಿ ಸಾಫಲ್ಯವನ್ನೂ ಪಡೆದಿದ್ದಾರೆ. ಮಿಹಿರಕುಲ, ಬಕ ನರಸಿಂಹಗುಪ್ತ ಬಾಲಾದಿತ್ಯ ಯಶೋಧರ್ಮ ರಾಜಮಾತೆ-ಮುಂತಾದವರು ಐತಿಹಾಸಿಕ ವ್ಯಕ್ತಿಗಳು. ನಾಟಕದಲ್ಲಿ ಚಿತ್ರಿತವಾಗಿರುವ ಘಟನೆಗಳೆಲ್ಲವೂ ಐತಿಹಾಸಿಕ ಸಂಗತಿಗಳೇ. ಕಥೆಯ ಓಟಕ್ಕೆ ಚ್ಯುತಿಬಾರದಂತೆ, ಘಟನೆಗಳ ಹಂದರಕ್ಕೆ ಪೂರಕವಾಗುವಂತೆ ಕೆಲವೊಂದು ಸಂಗತಿಗಳನ್ನು ಲೇಖಕರು ಕಲ್ಪಿಸಿಕೊಂಡಿದ್ದಾರೆ. ಕಥೆ ಮುನ್ನಡೆಯಲು ಸಹಕಾರಿಯಾಗುವಂಥ ಕಾಲ್ಪನಿಕ ಪಾತ್ರಗಳನ್ನೂ ತಂದಿದ್ದಾರೆ. ಇವೆಲ್ಲದರ ಬೆಸುಗೆ ಹದವಾಗಿ ಕೂಡಿಕೊಂಡಿದ್ದು ನಾಟಕದ ಹೆಣಿಗೆ ರಮ್ಯವಾಗಿ ಬಂದಿದೆ." ೨ ಎಂಬ ಶ್ರೀನಿವಾಸ ಕೊರಟ ಇವರ ಪ್ರಶಂಸೆ ಸ್ವಾಗತಾರ್ಹವಾಗಿದೆ. ಇದೊಂದು ಐತಿಹಾಸಿಕ ಹಾಗೂ ರಾಷ್ಟ್ರೀಯ ನಾಟಕವಾಗಿದ್ದು ಇದರ ರಚನೆಯ ಹಿನ್ನೆಲೆ ಕುತೂಹಲಕರವಾಗಿದೆ.

"೧೯೬೨ ಅಕ್ಟೋಬರ ೨೦ನೆಯ ದಿನಾಂಕ. ಇದ್ದಕ್ಕಿದ್ದಂತೆ ಹಿಮಾಲಯದ ಶಾಂತಿ ಕದಡಿ ಸಿಡಿಮದ್ದಿನ ನಾತ ಹರಡಿತು. ನೀಫಾ ಲದ್ದಾಖಗಳಲ್ಲಿ ಚೀಣ ಚೀಣಿಯರ ಯುದ್ಧ ದಾಹ ಸ್ನೇಹದ ಹೃದಯಕ್ಕೇ ಗುಂಡಿಟ್ಟು ಹೊಡೆಯಿತು. ವಿಶ್ವದ ಇತಿಹಾಸದಲ್ಲಿಯೇ ಇಂಥ ವಿಶ್ವಾಸಘಾತದ ಪ್ರಸಂಗಗಳು ವಿರಳ. ಈ ಘಟನೆ ನಡೆದ

---

೧) ಶರಣ ಚರಿತಾಮೃತ-ಸಿದ್ಧಯ್ಯ ಪುರಾಣಿಕ-ಹಿಮ್ಮಾತು ಪು-೮೩೫

೨) ಕಾವ್ಯಾನಂದ-ಅಭಿನಂದನ ಗ್ರಂಥ ಪು-೫೭೦

ಎರಡು ದಿನಗಳಲ್ಲಿಯೇ ರಾಷ್ಟ್ರನಾಯಕ ಪಂಡಿತ ಜವಾಹರಲಾಲ ನೆಹರು ಅವರು ಭಾರತದ ವಾರ್ತಾ ಮಂತ್ರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದಾಗ ಉಪಸ್ಥಿತನಾಗಿರುವ ಭಾಗ ನನಗೆ ಲಭಿಸಿತು. ರಾಷ್ಟ್ರದ ಧಮನಿಗಳಲ್ಲಿ ವಿದ್ಯುದೂರ್ಮಿಗಳು ಸರ್ತಿಸತೊಡಗಿದಾಗ ಆ ಅವಿಸ್ಮರಣೀಯ ಪ್ರಸಂಗ ಮನದ ಮೇಲೆ ತನ್ನ ವಜ್ರದ ಮುದ್ರೆಯನ್ನು ಮೂಡಿಸಿತು. ರಾಷ್ಟ್ರ ರಕ್ಷಣೆಯ ಪ್ರಯತ್ನಗಳಿಗೆ ನೆರವಾಗಬಲ್ಲ ನಾಟಕವೊಂದು ಬರೆಯಬೇಕೆಂಬ ಸಂಕಲ್ಪ ಆಗಲೇ ಉದಿಸಿತು ಮನದಲ್ಲಿ" ೧ ಎಂದು ಈ ನಾಟಕಕ್ಕೆ ಉಂಟಾದ ಪ್ರೇರಣೆಯನ್ನು ತಿಳಿಸಿದ್ದಾರೆ.

"ಲೇಖಕರು ಎಲ್ಲ ಐತಿಹಾಸಿಕ ಚೌಕಟ್ಟನ್ನು ಮೀರಿ ಘಟನೆಗಳನ್ನು ನಡೆಸಿಲ್ಲ. ದೊರಕುವ ಅಲ್ಪ ಸಂಗತಿಗಳ ಆಧಾರದ ಮೇಲೆ ಕೆಲವು ಬಾರಿ ಸೂಚನೆಗಳ ಮೇಲೆ ಉನ್ನತ ಪ್ರತಿಭೆಯಿಂದ ಮಾತ್ರ ಸಾಧ್ಯವಾಗಬಹುದಾದ ಒಂದು ಶ್ರೇಷ್ಠ ಐತಿಹಾಸಿಕ ನಾಟಕವನ್ನು ರಚಿಸಿದ್ದಾರೆ."೨ ಎಂಬ ಇದೊಂದೇ ಮಾತು ಇಡೀ ನಾಟಕದ ವಿಮರ್ಶೆಯನ್ನು ಮಾಡಿದಂತಾಗುತ್ತದೆ.

ಈ ನಾಟಕವು ರಾಷ್ಟ್ರೀಯ ಭಾವೈಕ್ಯದ ಸಂಕೇತವಾಗಿದೆ. ಇಂದೂ ಸಹ ಈ ನಾಟಕ ಸಮಕಾಲೀನ ಪ್ರಜ್ಞೆಯಿಂದ ಒಡಗೂಡಿದ್ದು ಭಾರತೀಯರ ವಾಸ್ತವ ಬದುಕಿಗೆ ಹತ್ತಿರವಾಗಿದೆ. ವೈರದಿಂದ ವೈರದ ದಮನ ಸಾಧ್ಯವಿಲ್ಲ. ರಾಷ್ಟ್ರಭಕ್ತಿಯನ್ನು ತಕ್ಕಡಿಯಲ್ಲಿಟ್ಟು ತೂಗಲಾಗುವುದಿಲ್ಲ. ಭಾರತ ಅವಿಭಾಜ್ಯವಾದುದು; ಅಖಂಡವಾದುದು. ಸ್ವಾತಂತ್ರ್ಯ ಶೂರರ ಸೊತ್ತು; ಹೇಡಿಗಳ ತುತ್ತಲ್ಲ; ಸ್ವಾತಂತ್ರ್ಯವೇ ಸ್ವರ್ಗ; ಪಾರತಂತ್ರವೇ ನರಕ. ಧರ್ಮ ರಕ್ಷಿಸಿದವರನ್ನು ಧರ್ಮ ರಕ್ಷಿಸುತ್ತದೆ. ಈ ಮುಂತಾದ ಘೋಷಣೆಗಳು, ಧೋರಣೆಗಳು ನಾಟಕದುದ್ದಕ್ಕೂ ಎದ್ದು ಕಾಣುತ್ತಿದ್ದು ಇದೊಂದು ರಾಷ್ಟ್ರಭಕ್ತಿಯಿಂದ ಬರೆದ ಭಾರತ ಮಾತೆಯ ಭಕ್ತನ ಭಕ್ತಿಯ ಕಾಣಿಕೆಯೆಂದು ನಾವು ತಿಳಿಯಬೇಕಾಗುತ್ತದೆ. ಇದು ರಂಗ ಪ್ರಯೋಗ ಪ್ರದರ್ಶನಗಳಿಗೆ ಭಿನ್ನವಾಗಿದ್ದರೂ ಉತ್ತಮ ಓದುಗಬ್ಬವಾಗಿದೆ. ರಾಷ್ಟ್ರೀಯತೆಯ ಸಂಕೇತ ಸ್ವರೂಪವಾಗಿದೆ; ಸಂದರ್ಭೋಚಿತ ಸಾಹಿತ್ಯವುಳ್ಳದ್ದಾಗಿದೆ.

ಡಾ. ಪುರಾಣಿಕರ 'ತ್ರಿಭುವನಮಲ್ಲ' ಎಂಬ ಕೃತಿ ಶಕಪುರುಷ ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಸುತ್ತ ಹೆಣೆದ ಐತಿಹಾಸಿಕ ಕಾದಂಬರಿಯಾಗಿದೆ. ಮೂಲತಃ ಕವಿಯಾದ ಅವರು ಕಾದಂಬರಿ ರಚನೆಗೆ ಅಳುಕಿನಿಂದಲೇ ಕೈಹಾಕಿ 'ಮೊದಲ ಒಲವಿಗೆ ಮದುವೆಗೆ ಮೊದಲೇ ಸೋಡಚೀಟಿ' ನೀಡುವಂತೆ ಕಾದಂಬರಿ ಪ್ರಕಾರದಿಂದ ದೂರವುಳಿದರು. ಹೀಗಾಗಿ 'ತ್ರಿಭುವನಮಲ್ಲ' ಪುರಾಣಿಕರ ಏಕೈಕ ಕಾದಂಬರಿಯಾಗಿದೆ.

ಚಾಲುಕ್ಯ ಸೋಮೇಶ್ವರನಿಗೆ ಸೋಮೇಶ್ವರ, ವಿಕ್ರಮಾದಿತ್ಯ, ಜಯಸಿಂಹ ಎಂಬ ಮೂವರು ಮಕ್ಕಳು. ಅವರಲ್ಲಿ ವಿಕ್ರಮಾದಿತ್ಯ ಪರಾಕ್ರಮಶಾಲಿ. ತಂದೆಯ ನಿಧನಾನಂತರ ಮಗ ಸೋಮೇಶ್ವರ ಸಿಂಹಾಸನವನ್ನೇರಿದ. ತಾರುಣ್ಯದಲ್ಲಿ ಶಸ್ತ್ರಪ್ರದರ್ಶನದಲ್ಲಿ ಸೋಮೇಶ್ವರ ವಿಕ್ರಮಾದಿತ್ಯನ ಬಗೆಗೆ ಅಸೂಯೆ ತಾಳಿದ್ದರೂ ವಿಕ್ರಮಾದಿತ್ಯ-ಜಯಸಿಂಹರು ಅಣ್ಣನಿಗೆ ವಿಧೇಯರಾಗಿದ್ದರು. ಆದರೆ ಸೋಮೇಶ್ವರ ತನ್ನ ಸ್ವಾರ್ಥಕ್ಕೆ ರಾಜ್ಯದ ಹಿತವನ್ನು ಬಲಿಕೊಡುವುದನ್ನರಿತ ವಿಕ್ರಮಾದಿತ್ಯ ಅಣ್ಣನನ್ನು ಸೋಲಿಸಿ ಚಾಲುಕ್ಯ ರಾಜ್ಯ ಸಿಂಹಾಸನವನ್ನೇರಿ ರಾಜ್ಯ ರಕ್ಷಿಸಿದ. ಜನರ ಮನಗಳಿಸಿದ. ಒಂದಾದ ಮೇಲೊಂದರಂತೆ ವಿಜಯ ಪಡೆದು ಶಕಪುರುಷನೆನಿಸಿದ. ವಿಕ್ರಮಾದಿತ್ಯನನ್ನು "ಕರ್ನಾಟಕ ನಾಡವೀರ"ನನ್ನಾಗಿ ಚಿತ್ರಿಸುವುದೇ ಕಾದಂಬರಿಕಾರರ ಉದ್ದೇಶವಾಗಿದೆ. ಭಾರತದ ಒಂದೊಂದು ಪ್ರದೇಶದಲ್ಲಿ ಒಬ್ಬೊಬ್ಬ ನಾಡವೀರ ನಿರ್ಧರಿತನಾಗಿ ಆಯಾ ಪ್ರದೇಶದವರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾನೆ. ಮಹಾರಾಷ್ಟ್ರಕ್ಕೆ ಶಿವಾಜಿ, ರಾಜಸ್ಥಾನಕ್ಕೆ ರಾಣಾಪ್ರತಾಪಸಿಂಹ, ಆಂಧ್ರಕ್ಕೆ ಕೃಷ್ಣದೇವರಾಯ, ತಮಿಳುನಾಡಿಗೆ ರಾಜರಾಜಚೋಳ— ಹೀಗೆ ಎಲ್ಲ ನಾಡವೀರರು ನಿರ್ಧರಿತವಾಗಿರುವಾಗ ಕರ್ನಾಟಕದ ನಾಡವೀರನಾರೆಂಬುದು ನಿಚ್ಚಳವಾದಂತಿಲ್ಲ. ಈ ಕೃತಿಯಲ್ಲಿ ಆರನೆಯ ವಿಕ್ರಮಾದಿತ್ಯನೇ ಕನ್ನಡಿಗರ ನಾಡವೀರನೆಂಬ ರೀತಿಯಲ್ಲಿ ಅವನನ್ನು ಚಿತ್ರಿಸಲಾಗಿದೆ ೩ ಎಂದಿದ್ದಾರೆ. ಕರ್ನಾಟಕದಲ್ಲಿ ನಾಡವೀರರಿಗೆ ಕೊರತೆಯಿಲ್ಲ. ಕದಂಬರ ಮಯೂರವರ್ಮ

---

೧) ಭಾರತವೀರ-ಸಿದ್ದಯ್ಯ ಪುರಾಣಿಕ ಪುಟ-೪

೨) ಕಾವ್ಯಾನಂದ ಅಭಿನಂದನ ಗ್ರಂಥ ಪು-೫೭೦

೩) ತ್ರಿಭುವನಮಲ್ಲ-ಬರೆದುದೇಕೆ ಪು-೨

ಚಾಲುಕ್ಯರ ಇಮ್ಮಡಿಪುಲಕೇಶಿ, ರಾಷ್ಟ್ರಕೂಟರ ಅಮೋಘವರ್ಷ, ಹೊಯ್ಸಳ ಬಲ್ಲಾಳರು ಕರ್ನಾಟಕದ ನಾಡವೀರರೇ ಆಗಿದ್ದಾರೆ.

ಇದು ಐತಿಹಾಸಿಕ ಕಾದಂಬರಿಯಾಗಿ ಓದುಗನನ್ನು ಗತವೈಭವಕ್ಕೆ ಕರೆದೊಯ್ಯುತ್ತದೆ. ವಿಕ್ರಮಾದಿತ್ಯನ ಆರಾಧನೆಗೆ ತೊಡಗಿಸುತ್ತದೆ. ಕಾವ್ಯಮಯ ಭಾಷೆಯಿಂದಾಗಿ ವರ್ಣನೆಯು ವೈಭವವಿದೆ. ಚಾಲುಕ್ಯ ಕುಮಾರ ನನ್ನು ಕುರಿತು "ಮೂವರು ಮುಕ್ಕಣ್ಣನ ಮೂರು ಕಣ್ಣುಗಳಂತಿದ್ದರು. ಅವನ ಸೋಮಲೋಚನದಂತೆ ಸೌಮ್ಯವದನನಾಗಿದ್ದ ಸೋಮೇಶ್ವರ. ಅವನ ಸೂರ್ಯನಯನದಂತೆ ತೇಜಪುಂಜರಂಜಿತನಾಗಿದ್ದ ವಿಕ್ರಮಾದಿತ್ಯ; ಅವನ ಅಗ್ನಿ ನೇತ್ರದಂತೆ ಉಗ್ರವದನನಾಗಿದ್ದ ಜಯಸಿಂಹ."೧ ವರ್ಣಿಸುವ ರೀತಿ ಭಾವಪೂರ್ಣವಾಗಿದೆ. ಶಸ್ತ್ರವಿದ್ಯಾಪ್ರದರ್ಶನಕ್ಕೆ ಸಂಬಂಧಿಸಿದಂತೆ "ಮೂವರೂ ಒಬ್ಬರಾದ ಮೇಲೊಬ್ಬರು ಒಂದಾದ ಮೇಲೊಂದು ಶಸ್ತ್ರವಿದ್ಯಾಕೌಶಲ್ಯವನ್ನು ತೋರಿಸಿದರು. ಬಾಣಪ್ರಯೋಗ, ಕತ್ತಿವರಸೆ, ಈಟಿಯ ಎಸೆತ, ಡಿಂಕಣ, ಮರುಳ, ಶತಘ್ನಿ, ಭಲ್ಲೆಯ ಕುಸ್ತ, ಸಬಳ, ಚಾಕು, ಪಾಶ, ಬಿಸುವಲೆ, ಜೊತ್ತಿಗೆ, ತೋರುವಗ್ಗ, ಜವದಂಡೆ, ಸೂಲೀಣಿ, ನೆಲಗುಮ್ಮ, ಮುದ್ಗರ, ಮುಸಲೆ, ಎಟ್ಟುಗಲ್ಲು, ಏರುಗಲ್ಲು ಇತ್ಯಾದಿ ಅನೇಕ ಪ್ರಕಾರಗಳ ಆಯುಧಗಳ ಚಮತ್ಕಾರಗಳು ಒಂದೊಂದಾಗಿ ಪ್ರದರ್ಶಿತವಾದವು"೨ ಎಂದು ವಿವರಣಾತ್ಮಕವಾಗಿ ರೂಪಿಸುವಲ್ಲಿ ಅವರ ಅಧ್ಯಯನ ಪೂರ್ಣವಾಗಿ ಈ ಐತಿಹಾಸಿಕ ಕಾದಂಬರಿ ಬರೆದಿರುವರೆಂಬುದು ಸ್ಪಷ್ಟ.

"ಐತಿಹಾಸಿಕ ಕಾದಂಬರಿಕಾರನಿಗೆ ಇತಿಹಾಸದ ವೈಚಾರಿಕತೆಯೊಂದು ಅಗತ್ಯ. ಚರಿತ್ರೆ ವಿವರಣೆಗಳ ಸಂತೆಯಲ್ಲ; ಚರಿತ್ರೆಯನ್ನು ಓದುವುದು ಎಂದರೆ ವಿವರಗಳು, ಸಂಗ್ರಹಣೆ ಅಷ್ಟೆ ಅಲ್ಲ, ಇತಿಹಾಸ ಕಲಿಸುವ ಪಾಠ ನಮಗೆ ಮುಖ್ಯ."೩ ಈ ದೃಷ್ಟಿಯಿಂದ ನೋಡಿದಾಗ ಇಂಥ ಒಂದು ಕೊರತೆ ಎದ್ದು ಕಾಣುತ್ತದೆ. ಕಾದಂಬರಿಕಾರರು ವಿಕ್ರಮಾದಿತ್ಯನ ಆರಾಧಕರಾಗಿದ್ದಾರೆ. ಆ ಮನೋಭಾವ, ಆ ಭಾಷೆ ಕಾದಂಬರಿಯುದ್ದಕ್ಕೂ ಹರಿದು ಬಂದಿದೆ. ಆದುದರಿಂದ ಈ ಕಾದಂಬರಿಯಲ್ಲಿ ಸಿದ್ಧಪಡಿಸಿದ ಶೈಲಿ (Stylinzd)ಯನ್ನೆ ಕಾಣುತ್ತೇವೆ. ರಾಜ್ಯ ರಕ್ಷಣೆ, ಸಮಷ್ಟಿಹಿತ, ಸರ್ವಧರ್ಮ ಗೌರವಿಸುವಿಕೆ ವಿಕ್ರಮಾದಿತ್ಯನ ಮೌಲ್ಯಗಳಾಗಿರುವುದರಿಂದ "ರಾಷ್ಟ್ರದ ಸಂದರ್ಭದಲ್ಲಿ ಕಾದಂಬರಿ ಒಂದು ಅಗತ್ಯವನ್ನು ಪೂರೈಸುತ್ತದೆ. ಈ ಅಗತ್ಯವಾದರೂ ಅಲ್ಪವಾದು ದಲ್ಲ."೪ ಈ ದೃಷ್ಟಿಯಿಂದ ಶ್ರೀ ಸಿದ್ಧಯ್ಯ ಪುರಾಣಿಕರ 'ತ್ರಿಭುವನಮಲ್ಲ ಕಾದಂಬರಿಗ ಬೆಲೆಯುಂಟು' ಎಂಬ ಪ್ರಶಂಸೆಯ ಮಾತನ್ನು ನಾವು ಒಪ್ಪಲೇಬೇಕು.

'ಬಸವಣ್ಣನವರ ಜೀವನ ಹಾಗೂ ಸಂದೇಶ' ಡಾ. ಪುರಾಣಿಕರ ಸತ್ಯಶೋಧನ ಕೃತಿ. ಈ ಕೃತಿರಚನೆಯ ಪೂರ್ವದಲ್ಲಿ ಬಸವಣ್ಣನವರನ್ನು ಕುರಿತು ರಚಿತವಾದ ಕೃತಿಗಳೆಲ್ಲವನ್ನೂ ಸಂಗ್ರಹಿಸಿ ಅಧ್ಯಯನಗೈದು ಸರಿಯಾದು ದನ್ನು ಒಪ್ಪಿ, ಆಭಾಸಗಳನ್ನು ನಿರಾಕರಿಸಿ, ಸಂದೇಹ ಸಮಸ್ಯೆಗಳಿಗೆ ತಮ್ಮದೇ ಆದ ಖಚಿತ ಉತ್ತರ ನೀಡಿದ್ದಾರೆ. ಬಸವಣ್ಣನವರ ಜನನ, ಉಪನಯನ, ವಿದ್ಯಾಭ್ಯಾಸ, ಮಂಗಳವಾಡಕ್ಕೆ ಪ್ರಯಾಣ, ಕರಣಿಕವೃತ್ತಿ, ದಂಡನಾಥ ಪದವಿ ಅನುಭವಮಂಟಪದ ಸ್ಥಾಪನೆ, ಕಲ್ಯಾಣಕ್ಕೆ ಪಯಣ, ಕೂಡಲಸಂಗಮದಲ್ಲಿ ಐಕ್ಯವಾದುದು—ಹೀಗೆ ಬಸವಣ್ಣನವರ ಜೀವನದ ಪ್ರಮುಖ ಘಟನೆಗಳನ್ನು ಕಾಲಸಹಿತ ನಿರೂಪಿಸುತ್ತಿದೆ. ಅವರು ನಿರೂಪಣೆಗೆ ಬಳಸಿದ ಪುರಾವೆಗಳು, ಪ್ರಮಾಣಗಳು, ಆಧಾರಗಳು ಸಕಾರಣಯುಕ್ತವಾಗಿದ್ದರೂ ಅದು ಸರ್ವಸಮ್ಮತ ಅಭಿಪ್ರಾಯವಾಗುವದಿಲ್ಲ. ಡಾ. ಪುರಾಣಿಕರು ಸಹ ತಮ್ಮದೇ ಅಭಿಪ್ರಾಯ ಖಚಿತ, ಸರಿ ಅಂತಿಮ ಎಂದು ಹೇಳುವುದಿಲ್ಲ.

---

೧) ಅದೇ ಪು—೧೩

೨) ಅದೇ ಪು—೧೨

೩) ಕಾವ್ಯಾನಂದ—ಅಭಿನಂದನ ಗ್ರಂಥ ಪು—೫೫೭

೪) ಕಾವ್ಯಾನಂದ-ಅಭಿನಂದನ ಗ್ರಂಥ ಪು-೫೫೫

ಈ ಕೃತಿಯಲ್ಲಿ ಬರುವ 'ಹೊಸಧರ್ಮದೃಷ್ಟಿ' ಎಂಬ ಅಧ್ಯಾಯ ಮಹತ್ವಪೂರ್ಣವಾದದ್ದು. ವಾದ-ವಿವಾದಗಳಿಂದ ಮುಕ್ತವಾಗಿ ಬಸವಣ್ಣನ ವೈಚಾರಿಕ ಜಾಡನ್ನು ಹಿಡಿದು ಇದು ಸಾಗಿಬರುತ್ತದೆ. ಹಾಗೆಯೇ 'ಸಾಂಸ್ಕೃತಿಕ ಕ್ರಾಂತಿ' ಪ್ರಮುಖ ಅಧ್ಯಾಯ. "ಧರ್ಮ, ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಹಿತ್ಯಕ ಮುಂತಾದ ಯಾವುದೇ ಕ್ರಾಂತಿ ಯಶಸ್ವಿಯಾಗಬೇಕಾದರೆ ಅದಕ್ಕೆ ಪೂರಕವಾಗಿ ತಾರಕವಾಗಿ ಸಾಂಸ್ಕೃತಿಕ ಕ್ರಾಂತಿಯೊಂದು ಅದರೊಡನೆಯೇ ಸಹಕಾಲಿಕವಾಗಿ ನಡೆಯಬೇಕಾಗುತ್ತದೆ" ಎಂಬ ಡಾ. ಪುರಾಣಿಕರ ಅಭಿಪ್ರಾಯ ಅರ್ಥಪೂರ್ಣವಾದುದು. ಇನ್ನು ಬಸವಣ್ಣನವರ ಸಂದೇಶ ಕುರಿತಾದ ಅಧ್ಯಾಯ ವಚನಗಳ ವಿವೇಚನೆಯಿಂದ ವಿಮರ್ಶಾತ್ಮಕವಾಗಿ ಕೂಡಿದ್ದು ಮುಕ್ತ ವಿಚಾರಗಳನ್ನು ಒಳಗೊಂಡಿದೆ.

ಯಾವುದೇ ಮಹಾತ್ಮರ ಜೀವನವಾದರೂ ಒಂದಿಲ್ಲೊಂದು ಟೀಕೆಯಿಂದ ಕೂಡಿರುತ್ತದೆ. ಇದಕ್ಕೆ ಬಸವಣ್ಣನವರ ಜೀವನ ಹೊರತಾಗಿಲ್ಲ. ಆದರೆ ಆ ಟೀಕೆಗಳಿಗೆ ಸಮರ್ಪಕ ಉತ್ತರಗಳನ್ನು ಡಾ. ಪುರಾಣಿಕರ ಕೃತಿ ನೀಡುತ್ತದೆ. ಬಸವಣ್ಣ ಮತ್ತು ಆತನ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಡಾ. ಪುರಾಣಿಕರ ಕೃತಿಯತ್ತ ಒಮ್ಮೆ ಹೊರಳಿ ನೋಡುವುದು ಅಗತ್ಯ. ಈ ಕೃತಿಯೊಂದನ್ನೆ ಕುರಿತು ಪ್ರತ್ಯೇಕವಾದ ಅಧ್ಯಯನ ಅಗತ್ಯವಾಗಿದೆ.

ಹರ್ಡೇಕರ್ ಮಂಜಪ್ಪನವರನ್ನು ಕುರಿತು ಪುರಾಣಿಕರು ಕೃತಿ ರಚಿಸಿದ್ದಾರೆ. ಅವರು ಮಂಜಪ್ಪನವರ ಆಶ್ರಮದಲ್ಲಿದ್ದು ತಮ್ಮ ಬದುಕನ್ನು ರೂಪಿಸಿಕೊಂಡವರು. ಹೀಗಾಗಿ ಈ ಕೃತಿಯನ್ನು ಅತ್ಯಂತ ಶ್ರದ್ಧೆಯಿಂದಲೇ ಬರೆದಿದ್ದಾರೆ. ಈ ಕೃತಿ ಕುರಿತು ಶಾಂತರಸರು ಹೇಳಿದ ಮಾತುಗಳನ್ನಿಲ್ಲಿ ಉಲ್ಲೇಖಿಸಬಹುದು. "ಸ್ವಾತಂತ್ರ್ಯವನ್ನು ಮಂಜಪ್ಪನವರು ಎಂದೂ ಬಿಟ್ಟುಕೊಟ್ಟವರಲ್ಲ. ಇನ್ನೊಬ್ಬರ ಪ್ರಭಾವಕ್ಕೊಳಗಾಗಿ ತಮ್ಮ ವಿಚಾರಗಳಿಗೆ ತಿಲಾಂಜಲಿಯನ್ನು ಕೊಟ್ಟವರೂ ಅಲ್ಲ. ಪುನರ್ಜನ್ಮದ ಬಗೆಗೆ ಗಾಂಧೀಜಿಯವರ ವಿಚಾರಗಳನ್ನು ಅವರು ಒಪ್ಪಲಿಲ್ಲ. ಹಾಗೆಂದು ಇನ್ನೊಬ್ಬರ ವೈಚಾರಿಕ ಸ್ವಾತಂತ್ರ್ಯಕ್ಕೆ ಅವರು ಧಕ್ಕೆ ತರಲಿಲ್ಲ. ಇನ್ನೊಬ್ಬರ ವಿಚಾರಕ್ಕೆ ಅಗೌರವ ತೋರಿಸಲಿಲ್ಲ. ಆದರೆ ರಾಷ್ಟ್ರಕ್ಕೆ ಅಹಿತವಾದುದನ್ನು, ಸಮಾಜಕ್ಕೆ ಕಂಟಕವಾದುದನ್ನು ಖಂಡಿಸದೇ ಇರಲಿಲ್ಲ. ಅವರ ಸಾಹಿತ್ಯ ನಿಜವಾದ ರಾಷ್ಟ್ರಪ್ರೇಮವನ್ನು ಜನರಲ್ಲಿ ಹುಟ್ಟಿಸಿತು. ಸಮಾಜಸೇವಕರಾಗಿ, ಪತ್ರಿಕಾಕರ್ತರಾಗಿ, ಸತ್ಯಾಗ್ರಹಿಗಳಾಗಿ ಸಾಹಿತಿಗಳಾಗಿ, ಬಸವತತ್ವಾನುಯಾಯಿಯಾಗಿ ಮಂಜಪ್ಪನವರು ಹೊಸ ಹುಟ್ಟಿಗೆ ಕಾರಣರಾದವರು. ಇಂಥ ಅವರ ಜೀವನಚರಿತ್ರೆಯನ್ನು ಪುರಾಣಿಕರು ಸೊಗಸಾಗಿ ನಿರೂಪಣೆ ಮಾಡಿದ್ದಾರೆ"೧ ಶಾಂತರಸರ ವಿಮರ್ಶಾತ್ಮಕ ಅಭಿಪ್ರಾಯ ಸ್ಪಷ್ಟವಾದುದು.

ಡಾ. ಪುರಾಣಿಕರ ಈ ಎಲ್ಲ ಕೃತಿಗಳನ್ನು ಅವಲೋಕಿಸಿದರೆ ಒಂದು ಗಟ್ಟಿ ಅಂಶ ಅವರ ಕೃತಿಗಳಲ್ಲಿ ಹಾಸು ಹೊಕ್ಕಾಗಿದೆ. ಅವರ ರಾಷ್ಟ್ರಪ್ರೇಮ ವಿಶ್ವಮಾನವ ತತ್ವ ವಿಶಾಲವಾದುದು? ಮಹಾನುಭಾವರ ಬಗೆಗೆ ಗೌರವಾದರಗಳಿವೆ. ಸಂಗೀತ-ಸಾಹಿತ್ಯ-ಶಿಲ್ಪದ ಬಗೆಗೆ ಸಹೃದಯನ ಅಭಿರುಚಿಯಿದೆ. ಇತಿಹಾಸದ ಬಗೆಗೆ ಆಳವಾದ ಚಿಂತನೆಯಿದೆ. ಸಮಾಜದ ಬಗೆಗೆ ಕಳಕಳಿಯಿದೆ. ಧರ್ಮ-ಸಂಸ್ಕೃತಿಗಳ ಬಗೆಗೆ ಅತ್ಯಂತ ಅಭಿಮಾನವಿದೆ. ಶರಣರ ಬಗೆಗೆ ಭಕ್ತಿ ಗೌರವವಿದೆ. ಡಾ. ಪುರಾಣಿಕರನ್ನು ಕುರಿತು ಬೇಂದ್ರೆಯವರು ಹೇಳಿದ ಮಾತನ್ನು ಇಲ್ಲಿ ಉಲ್ಲೇಖಿಸಬಹುದು. "ಸಿದ್ಧಯ್ಯನವರ ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಲ್ಲಿಯೇ ದುಂದುಭಿಸುತ್ತಿದ್ದವು. ಪ್ರಾಯದ ಪ್ರಥಮ ಗ್ರಾಸದಲ್ಲಿಯೇ ಅವರು ಶರಣರ ಸಾಹಿತ್ಯವನ್ನು ಮುಕ್ಕಿದರು; ದೇಶಸೇವಾ ತತ್ಪರರಾದವರ ಸಂಗಸಹವಾಸದಲ್ಲಿ ಕಾಲಕಳೆದರು. ಅವರು ಮಾಡಿದ ವಿದ್ಯಾಭ್ಯಾಸವು ಅವರ ಹೃದಯದವರೆಗೆ ಪ್ರವೇಶ ಮಾಡಿತು. ಇದೆಲ್ಲದರ ಪರಿಣಾಮವೆಂದರೆ ಅವರಲ್ಲಿ ಭಾವನೆಯ ವಾಯುವೇಗವೂ, ಬುದ್ಧಿಯ ಅಗ್ನಿಗುಣವೂ ಸೇರಿಕೊಂಡುದು, ಅಗ್ನಿಪುತ್ರಿಗೆ ವಾಯುಪುತ್ರನ ಯುತಿಯಾದಾಗ ಕುರುಕ್ಷೇತ್ರವೂ ಚಿಕ್ಕದಾಯಿತೆಂಬುದನ್ನು ಕನ್ನಡದ ಕವಿ ರನ್ನನು ತನ್ನ ರೌದ್ರರಸಭರಿತ 'ಗದಾಯುದ್ಧ'ದಲ್ಲಿ

---

೧) ಕಾವ್ಯಾನಂದ-ಅಭಿನಂದನ ಗ್ರಂಥ ಪು-೫೪

ಬಣ್ಣಿಸಿದ್ದಾನೆ. ಕನ್ನಡ ಕಂದ ಕಾವ್ಯಾನಂದರು ಇಪ್ಪತ್ತನೆಯ ಶತಮಾನದ ವಿಶ್ವಗ್ರಾಸಿಯಾದ ಜ್ವಾಲಾ ಮಾಲೆಯಲ್ಲಿ ಕಂಡ ಕಾಲದ ಘೋರ ರೂಪವನ್ನು ಅನೇಕ ಮುಖವಾಗಿ ಬಣ್ಣಿಸಿದ್ದಾರೆ."೧ ಬೇಂದ್ರೆಯವರ ಈ ಮಾತು ಕಾವ್ಯಾನಂದರ ಇಡೀ ಬದುಕು-ಬರಹವನ್ನು ಕುರಿತು ಹೇಳಿದ ವಾಸ್ತವ ವಾಣಿಯಾಗಿದೆ.

'ನನ್ನ ನಿನ್ನೆಗಳೊಡನೆ ಕಣ್ಣುಮುಚ್ಚಾಲೆ' ಎಂಬ ಅವರ ಆತ್ಮಚರಿತ್ರೆ ಕಾವ್ಯಾನಂದರ ಅಭಿನಂದನ ಗ್ರಂಥದಲ್ಲಿ ಪ್ರಕಟವಾಗಿದೆ. ಇದು ಸಹ ಅವರ ಚರಿತ್ರ ಸಾಹಿತ್ಯದಲ್ಲಿಯೇ ಸೇರುತ್ತದೆ. ನನ್ನ ತಾಯಿಯ ಮಡಿಲು ಎಂಬ ಅಧ್ಯಾಯದಿಂದ ಆರಂಭವಾಗುವ ಅವರ ಆತ್ಮಚರಿತ್ರೆ 'ಭಾಗ್ಯ ನನ್ನದು' ಎಂಬ ಅಧ್ಯಾಯದೊಂದಿಗೆ ಮುಕ್ತಾಯವಾಗುತ್ತದೆ. ಅವರ ಜೀವನದಲ್ಲಿ ಬರುವ ನೂರಾರು ಊರುಗಳು, ಸಾವಿರಾರು ಜನರು, ಹಲವಾರು ಘಟನೆಗಳು, ನೋವು ನಲಿವು ಹೀಗೆ ಹತ್ತಾರು ಪ್ರಸಂಗಗಳನ್ನು ರಸವತ್ತಾಗಿ, ಮುಕ್ತವಾಗಿ, ಸರಳವಾಗಿ ಪ್ರಾಮಾಣಿಕವಾಗಿ ಚಿತ್ರಿಸಿದ್ದಾರೆ.

ಶಾಂತರಸರ ಮಾತುಗಳೊಂದಿಗೆ ಈ ಪ್ರಬಂಧವನ್ನು ಮುಗಿಸಬಹುದು. "ಪುರಾಣಿಕ ಸಿದ್ಧಯ್ಯನವರ ಜೀವನ ಚರಿತ್ರೆಗಳ ಶೈಲಿ ಪ್ರೌಢವಾದುದು. ವಾಕ್ಯದಿಂದ ವಾಕ್ಯಕ್ಕೆ ಮುಂದುವರಿಯುವಾಗ ಓದುಗನಿಗೆ ಸೊಗಸೆನಿಸುತ್ತದೆ. ಆದರೆ ಅವರ ಒಂದು ದೌರ್ಬಲ್ಯವನ್ನು ಹೇಳಲಿಕ್ಕಾಗದು. ಶಬ್ದದಾರಿದ್ರವಿದ್ದವ ಭಾವವನ್ನು ವಿಚಾರವನ್ನು ಸಮರ್ಥಿಸುವಲ್ಲಿ ಕೆಟ್ಟ ರೀತಿಯಿಂದ ಸೋಲುತ್ತಾನೆ. ಶಬ್ದ ಸಂಪತ್ತುಳ್ಳವ ಒಮ್ಮೊಮ್ಮೆ ಧಾರಾಳತನದಿಂದ ಸೋಲುವ ಪ್ರಸಂಗ ತಂದುಕೊಳ್ಳುತ್ತಾನೆ. ಅನೇಕ ಕಡೆ ಶಬ್ದಗಳ ಧಾರಾಳತನದಿಂದ ಪುರಾಣಿಕರ ಶೈಲಿ ಝಗ್ಗನೆ ಮಿಂಚಿದರೂ ಸೋಲುವ ಪ್ರಸಂಗಗಳು ಇಲ್ಲದಿಲ್ಲ. ಸರಳವಾದುದು, ಬಿಗಿಯಾಗಿ, ಸುಲಭವಾದುದು ಜಿಗುಟಾಗಿ ಹೋಗದೇ ಇಲ್ಲ. ಅಲಂಕಾರಿಕ ಭಾಷೆಯಿಂದ ಶಬ್ದಗಳು ಬುಗ್ಗೆಯಾಗಿ ಚಿಮ್ಮುವುದರಿಂದ ಅರ್ಥಮುರಿದುಕೊಳ್ಳುವುದುಂಟು. ಆದರೆ ಇದೇ ಧಾರಾಳತನ ಒಮ್ಮೊಮ್ಮೆ ಅರ್ಥ ಸಂಪತ್ತಿಯನ್ನು ಹೆಚ್ಚುಮಾಡುವುದೂ ಉಂಟು. ಈ ವೈಚಿತ್ರ್ಯ ಇವರ ಶೈಲಿಯ, ಇವರ ಭಾಷೆಯ ಒಂದು ವಿಶೇಷ ಗುಣ." ೨

ಕವಿಯಾಗಿ ಕಾವ್ಯದ ಸವಿಯುಣ್ಣಿಸಿದ ಡಾ. ಪುರಾಣಿಕರ ಗದ್ಯ ಸಹ ಹೊಸಗನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾಗಿ ಮೂಡಿ ಬಂದಿದೆ. ಅವರ ಗದ್ಯ ಕಾವ್ಯಮಯವಾದ ಭಾಷೆಯಿಂದ ಕೂಡಿದುದಾಗಿದೆ. ಅವರ ಕಾವ್ಯೇತರ ಸಾಹಿತ್ಯ ಸಹ ಗಮನಾರ್ಹವಾದುದು.

□ □

---

೧) ಅದೇ ಪು-೪೭೦

೨) ಕಾವ್ಯಾನಂದ-ಅಭಿನಂದನ ಗ್ರಂಥ ಪು-೫೫೧

# ಸಿದ್ಧಯ್ಯ ಪುರಾಣಿಕರ ಮಕ್ಕಳ ಸಾಹಿತ್ಯ*

ಗು. ವಿ. ವಿ. ಸ್ನಾತಕೋತ್ತರ ಕೇಂದ್ರ
ಕೃಷ್ಣದೇವರಾಯನಗರ–ಸೊಂಡೂರು

—ಡಾ|| ಶಾಂತಿನಾಥ ದಿಬ್ಬದ
ಕನ್ನಡ ಅಧ್ಯಾಪಕರು

ಡಾ|| ಶಾಂತಿನಾಥ ದಿಬ್ಬದ ಎಂ. ಎ. ಪಿಎಚ್. ಡಿ. ಅವರು ಗುಲಬುರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಸೊಂಡೂರಿನಲ್ಲಿ ಕನ್ನಡ ಪ್ರಾಧ್ಯಾಪಕರು. ವಿಚಾರ ಸಂಕಿರಣದಲ್ಲಿ ಭಾಗವಹಿಸಿ 'ಸಿದ್ಧಯ್ಯ ಪುರಾಣಿಕರ ಮಕ್ಕಳ ಸಾಹಿತ್ಯ'ವೆಂಬ ಪ್ರಬಂಧವನ್ನು ಓದಿದರು.

ಕಾವ್ಯಾನಂದರು ಮಕ್ಕಳಿಗಾಗಿಯೇ ರಚಿಸಿದ ನಾಟಕಗಳು, ಕವನಗಳು, ಕಥೆಗಳು ಮುಂತಾದವುಗಳ ಪಾತ್ರ ಚಿತ್ರಣ, ಸನ್ನಿವೇಶ–ಸಂದರ್ಭ, ಭಾವ–ಭಾಷೆ–ಲಯಗಳನ್ನು ಇಲ್ಲಿ ವಿವರಿಸಿದ್ದಾರೆ. ಪ್ರಬುದ್ಧರೆದುರಿಗೆ ಮಕ್ಕಳ ಸಾಹಿತ್ಯವನ್ನು ಮಂಡಿಸುವದು, ವಿವರಿಸುವದು ಅಷ್ಟೊಂದು ಸುಲಭವಲ್ಲವಾದರೂ ಡಾ|| ಶಾಂತಿನಾಥ ದಿಬ್ಬದ ಅವರು ಮಕ್ಕಳ ಸಾಹಿತ್ಯದಲ್ಲಿನ ಆಳವಾದ ಅಭ್ಯಾಸ ಹಾಗೂ ಪುಟ್ಟ–ಪುಟ್ಟ ಸಾಲುಗಳಲ್ಲಿ ಅಡಗಿದ ಧ್ವನಿಪೂರ್ಣತೆಯನ್ನು ವಿವರಿಸುವದರೊಂದಿಗೆ ಹಲವೆಡೆಗೆ ವಿಮರ್ಶೆಯ ಖಡ್ಗವನ್ನೂ ಝಳಪಿಸಿದ್ದಾರೆ. ಜನರಂಜನೀಯವಾಗಿ ಸರಳ ಭಾಷೆಯಲ್ಲಿ ಹೇಳುವ ಹಿರಿಮೆ ಡಾ|| ಶಾಂತಿನಾಥರ ಸೊತ್ತಾಗಿದೆ.

"ಒಂದು ನಾಡನ್ನು ನಿರ್ಮಿಸುವಲ್ಲಿ ಮಕ್ಕಳ ಪಾತ್ರ ತುಂಬ ಹಿರಿದು. ಅಂಥ ಸಮರ್ಥ ಮಕ್ಕಳನ್ನು ನಿರ್ಮಿಸುವಲ್ಲಿ ಸಾಹಿತ್ಯದ ಪಾತ್ರ ಇನ್ನೂ ಹಿರಿದು. ಶ್ರೀ ಸಿದ್ಧಯ್ಯ ಪುರಾಣಿಕರು ಒಂದರಿಂದ ಇನ್ನೊಂದನ್ನು ಸಾಧಿಸಿದ ಸಾಧಕರು" ....ಎಂದಿದ್ದಾರೆ.

—ಸಂ.

'ಕಾವ್ಯಾನಂದ'ರೆಂಬ ಕಾವ್ಯನಾಮದಲ್ಲಿ ಕಾವ್ಯ, ಕಥೆ. ನಾಟಕ, ವಿಮರ್ಶೆ, ವಚನ, ಅನುವಾದ ಮೊದಲಾದ ಕ್ಷೇತ್ರಗಳಲ್ಲಿ ಗಮನಾರ್ಹ ಕೃಷಿ ಮಾಡಿದ ನಾಡಿನ ಹಿರಿಯ ತಲೆಮಾರಿನ ಕವಿಗಳಾದ ಡಾ|| ಸಿದ್ಧಯ್ಯ ಪುರಾಣಿಕರು 'ಮಕ್ಕಳ ಸಾಹಿತಿ'ಗಳೂ ಹೌದೆಂಬ ವಿಷಯ ಅನೇಕ ಜನರಿಗೆ ತಿಳಿದಿರಲಿಕ್ಕಿಲ್ಲ. ದೊಡ್ಡವರಿಗಾಗಿ ಬರೆಯುವ ಗಂಭೀರ ಪ್ರವೃತ್ತಿಯ ಅನೇಕ ಜನರು ನಮ್ಮಲ್ಲಿದ್ದಾರೆ. ಹಾಗೆಯೇ ಮಕ್ಕಳಿಗಾಗಿ ಬರೆಯುವ ಸುಕೋಮಲ ಪ್ರವೃತ್ತಿಯ ಅನೇಕ ಜನರೂ ನಮ್ಮಲ್ಲಿದ್ದಾರೆ. ಆದರೆ ಸಿದ್ಧಯ್ಯ ಪುರಾಣಿಕರು ಈ ಎರಡೂ ಪ್ರವೃತ್ತಿಗಳನ್ನು ಸಮರಸವಾಗಿ ಸಮೀಕರಿಸಿಕೊಂಡಿರುವುದು ಆಶ್ಚರ್ಯವೇ ಸರಿ.

*ಪುರಾಣಿಕರ ಕೃತಿಗಳನ್ನು ಸಕಾಲಕ್ಕೆ ಒದಗಿಸಿ ಸಹಕರಿಸಿದ ಶ್ರೀ ಶಿ. ಸು. ಸಂಗಮೇಶ ಅವರಿಗೆ ಕೃತಜ್ಞತೆಗಳು.

ಪುರಾಣಿಕರು ಬಹುಭಾಷಾವಿಶಾರದರು. ಕನ್ನಡ, ಇಂಗ್ಲೀಷ್, ಸಂಸ್ಕೃತ, ಉರ್ದು, ಮರಾಠಿ, ಪರ್ಶಿಯನ್ ಮೊದಲಾದ ಭಾಷೆಗಳನ್ನು ಬಲ್ಲ ಅವರ ಅಭ್ಯಾಸದ ಕ್ಷೇತ್ರ ಹಾಗೂ ಕಾವ್ಯಕೃತಿಗೆ ಅಗತ್ಯವಾದ ಮೂಲ ಸಾಮಗ್ರಿಯ ಪ್ರಮಾಣಗಳು ಸ್ವಾಭಾವಿಕವಾಗಿ ವಿಶಾಲವಾಗಿವೆ. ಇನ್ನೊಂದು ಕುತೂಹಲದ ಸಂಗತಿಯೆಂದರೆ ಪುರಾಣಿಕರು ಓದಿದ್ದು ಉರ್ದುವಿನಲ್ಲಿ, ಬರೆದದ್ದು ಕನ್ನಡದಲ್ಲಿ! ಪುರಾಣಿಕರದು ಬಹುಮುಖ ವ್ಯಕ್ತಿತ್ವ. ಅವರೊಬ್ಬ ಸಾಹಿತಿ, ವಿಮರ್ಶಕ, ಅನುಭಾವಿ, ಆಡಳಿತಗಾರ, ವಾಗ್ಮಿ, ಸ್ನೇಹಪರ ಜೀವಿ, ಎಲ್ಲಕ್ಕೂ ಮಿಗಿಲಾಗಿ ಅವರೊಬ್ಬ ಮೌಲ್ಯವಾದಿ ಮಾನವ. ಈ ಅರ್ಥದಲ್ಲಿ ಅವರೊಬ್ಬ ಸವ್ಯಸಾಚಿ.

'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬುದೊಂದು ಮಾತು ನಮ್ಮ ಪ್ರಾಚೀನ ಕಾವ್ಯಕ್ಷೇತ್ರದಲ್ಲಿತ್ತು. ಅದರಂತೆಯೇ ಮಕ್ಕಳ ಸಾಹಿತ್ಯ ರಚಿಸುವುದೂ ಕಾವ್ಯಗಳನ್ನು ಒಂದರ್ಥದಲ್ಲಿ ನಿಕಷಕ್ಕೆ ಒಡ್ಡಿದಂತೆಯೇ ಸರಿ ಎಂದು ನನಗನಿಸುತ್ತದೆ. ಮಕ್ಕಳ ಪರಿಸರ, ಸಂಸ್ಕಾರ, ಮನೋವಿಜ್ಞಾನಗಳನ್ನರಿತು ಅವರ ಮಟ್ಟಕ್ಕನುಸಾರ ವಾಗಿ ಸಾಹಿತ್ಯ ರಚಿಸುವುದು ಅಷ್ಟು ಸುಲಭದ ಕೆಲಸವಲ್ಲ. ಇಂಥ ಕಷ್ಟದ ಕೆಲಸವನ್ನು ಪುರಾಣಿಕರು ತಮ್ಮ ಅದ್ಭುತ ಕಾವ್ಯಪ್ರತಿಭೆ ಹಾಗೂ ಅದರ ಸ್ಥಿತಿಸ್ಥಾಪಕತ್ವ ಗುಣಗಳ ಬಲದಿಂದ ಲೀಲಾಜಾಲವಾಗಿ ಪೂರೈಸಿದ್ದಾರೆ ಎನ್ನಬಹುದು.

"Every nation gets the Government, Teachers and criminals it deserves" ಎಂಬ ಮಾತು ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಚಲಿತವಾಗಿದೆ. ಈ ಪಟ್ಟಿಯನ್ನು ಬೆಳೆಸಿ, "Every nation gets the children it deserves" ಎಂದೂ ಹೇಳಬಹುದೆಂದು ನನಗನ್ನಿಸುತ್ತದೆ. ಒಂದು ನಾಡನ್ನು ನಿರ್ಮಿಸುವಲ್ಲಿ ಮಕ್ಕಳ ಪಾತ್ರ ತುಂಬ ಹಿರಿದು. ಅಂಥ ಸಮರ್ಥ ಮಕ್ಕಳನ್ನು ನಿರ್ಮಿಸುವಲ್ಲಿ ಸಾಹಿತ್ಯದ ಪಾತ್ರ ಇನ್ನೂ ಹಿರಿದು. ಶ್ರೀ ಸಿದ್ಧಯ್ಯ ಪುರಾಣಿಕರು ಒಂದರಿಂದ ಇನ್ನೊಂದನ್ನು ಸಾಧಿಸಿದ ಸಾಧಕರೆಂದು ಈ ಸಂದರ್ಭದಲ್ಲಿ ಹೇಳಬಹುದಾಗಿದೆ. ಅವರು ಸಾಹಿತ್ಯದಿಂದ ಮಕ್ಕಳನ್ನು ರೂಪಿಸಿದ್ದಾರೆ. ಆ ಮಕ್ಕಳಿಂದ ನಾಡಿನ ಭವಿಷ್ಯ ರೂಪುಗೊಳ್ಳುವಂತೆ ಶ್ರಮಿಸಿದ್ದಾರೆ.

ಪುರಾಣಿಕರದು ಮುಖ್ಯವಾಗಿ ಮೌಲ್ಯಪ್ರಸಾರಕ ಮತ್ತು ಉಪದೇಶಪರವಾದ ಸಾಹಿತ್ಯ. 'ಕಾಂತಾಸಮ್ಮಿತ ತಯೋಪದೇಶಯುಜೇ' ಎಂಬ ಕಾವ್ಯಪ್ರಯೋಜನವನ್ನು ಪುರಾಣಿಕರ ಸಾಹಿತ್ಯದ ಶಬ್ದ ಶಬ್ದಗಳಲ್ಲಿಯೂ ಗುರುತಿಸಬಹುದಾಗಿದೆ. ಪ್ರೀತಿಯಿಂದ ನಯವಾಗಿ ಉಪದೇಶಿಸುವ ಕಾಂತೆಯ ಪರಿ ಅವರ ಸಾಹಿತ್ಯದ್ದು.

ತಾವು ಮಕ್ಕಳಿಗಾಗಿ ಸಾಹಿತ್ಯ ಸೃಷ್ಟಿಸಬೇಕಾಗಿ ಬಂದ ಸಂದರ್ಭವನ್ನು ಪುರಾಣಿಕರು ತಮ್ಮ 'ಗಿಲ್ ಗಿಲ್ ಗಿಲಗಿಚ್ಚಿ' ಕೃತಿಯ 'ನಾಲ್ಕು ಮಾತು'ಗಳಲ್ಲಿ ಸ್ಮರಿಸಿಕೊಂಡಿದ್ದಾರೆ. ತಮ್ಮಲ್ಲಿ ಮಕ್ಕಳಿಗಾಗಿ ಬರೆಯಬಲ್ಲ ಪರಿಣತಿಯಿದೆಯೆಂಬುದನ್ನು ಗುರುತಿಸಿದ ಇಬ್ಬರು ಮಹನೀಯರು ಪ್ರೊ. ಡಿ. ಕೆ. ಭೀಮಸೇನರಾಯರು ಮತ್ತು ದಿ. ಮಾನ್ವಿ ನರಸಿಂಗರಾಯರು ಎಂಬುದನ್ನು ಪುರಾಣಿಕರು ಅಭಿಮಾನದಿಂದ ತಿಳಿಸಿದ್ದಾರೆ.

ಪುರಾಣಿಕರ ಮಕ್ಕಳ ಸಾಹಿತ್ಯದ ಬೀಜರೂಪ ಪ್ರಕಟವಾದದ್ದು ೧೯೫೫ ರಲ್ಲಿ; ಹೈದರಾಬಾದಿನ ಸಹಜೀವ ಪ್ರಕಾಶನದವರು ಪ್ರಕಟಿಸಿದ 'ವಿಕಾಸವಾಣಿ' ಎಂಬ ಕೃತಿಯಲ್ಲಿ ಎನ್ನಬಹುದು. ಅದು ಮಕ್ಕಳಿಗಾಗಿ ರಚನೆಗೊಂಡ ಕೃತಿಯಲ್ಲವಾದರೂ ಅದರಲ್ಲಿಯ ಕೆಲವು ಕವನಗಳಲ್ಲಿ ಮಕ್ಕಳ ಸಾಹಿತ್ಯದ ಎಲ್ಲ ಲಕ್ಷಣಗಳೂ ಇರುವುದನ್ನು ಗುರುತಿಸಬಹುದು. ಸಂಕಲನದ ಮೊದಲ ಕವನ 'ಮುಂದಕ್ಕೆ ಸಾಗು' ಹಾಗೂ 'ನಮ್ಮ ನವ್ಯ ಭಾರತ' ಎಂಬ ಕವನಗಳೇ ಈ ಮಾತಿಗೆ ಸಾಕ್ಷಿ. ಉತ್ಸಾಹ ಹಾಗೂ ಮಹತ್ವಾಕಾಂಕ್ಷೆಗಳು ಈ ಕವನಗಳ ಸ್ಥಾಯಿ. 'ಮುಂದಕ್ಕೆ ಸಾಗು' ಕವನದ ಕೆಲವು ಸಾಲುಗಳನ್ನು ನೋಡಿ–

"ಮುಂದಕ್ಕೆ ಮುಂದಕ್ಕೆ ಮುಂದಕ್ಕೆ ಸಾಗು
ಭಾರತದ ನಿರ್ಮಾಣದಲ್ಲಿ ಭಾಗಿಯಾಗು

ಇಟ್ಟಿಗೆಯ ಸುಟ್ಟು ಸಾಲೆಗಳ ಕಟ್ಟು
ಒಡ್ಡುಗಳ ಹಾಕು ಕೆರೆಗಳನು ಕಟ್ಟು
ವನವನ್ನು ಬೆಳೆಸು ಮರಗಳನು ನೆಟ್ಟು
ಭಾರತವ ಬೆಳೆಸು ಶ್ರಮದಾನ ಕೊಟ್ಟು
....ನಿನ್ನ ಉದ್ಧಾರಕ್ಕೆ ನೀನು ಸಿದ್ಧನಾಗು
ಮುಂದಕ್ಕೆ ಮುಂದಕ್ಕೆ ಮುಂದಕ್ಕೆ ಸಾಗು"

'ಕಟ್ಟಬನ್ನಿ ಗೆಳೆಯರೆ' ಎಂದು ಆರಂಭವಾಗುವ ಅದೇ ಸಂಕಲನದ 'ನಮ್ಮ ನವ್ಯ ಭಾರತ' ಎಂಬ ಪದ್ಯದ ಕೆಲವು ಸಾಲುಗಳು ಹೀಗಿವೆ-

ಕಟ್ಟಬನ್ನಿ ಗೆಳೆಯರೆ। ನಮ್ಮ ನವ್ಯ ಭಾರತ
ಭವ್ಯ ದಿವ್ಯ ಭಾರತ। ಸರ್ವಶಕ್ತಿ ಭಾರತ
ಸತ್ಯ ಪ್ರೀತಿ ಶಿವಪಥ। ನಡೆಯೆ ರಾಷ್ಟ್ರದೀ ರಥ
ಕಡಿದು ವಿಘ್ನ ಪರ್ವತ। ಕಟ್ಟು ನವ್ಯ ಭಾರತ॥

ಇವೆರಡೂ ಪದ್ಯಗಳ ಭಾವ, ಭಾಷೆ, ಲಯ ಹಾಗೂ ಪುಟ್ಟ ಪುಟ್ಟ ಸಾಲುಗಳು ಮಕ್ಕಳಿಗಾಗಿ ಹೇಳಿ ಮಾಡಿಸಿದಂತಿವೆ. ಆಗತಾನೆ ಸ್ವಾತಂತ್ರ್ಯ ಪಡೆದ ಭಾರತದ ಪುನರ್ನಿರ್ಮಾಣದ ಹಂಬಲವನ್ನು ಮಕ್ಕಳ ಎಳೆಯ ಮನಸ್ಸುಗಳಲ್ಲಿ ತುಂಬುವುದು ಈ ಕವನಗಳ ಉದ್ದೇಶವಾಗಿದೆ.

ಮುಂದೆ ಪುರಾಣಿಕರು ಮಕ್ಕಳಿಗಾಗಿಯೇ ಕೆಲವು ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಮಹತ್ವದ ಕೃತಿಗಳನ್ನಿಲ್ಲಿ ಹೆಸರಿಸಲಾಗಿದೆ:

'ತುಪ್ಪಾರೊಟ್ಟಿ ಗೇ ಗೇ ಗೇ' -೧೯೬೪
'ಗಿಲ್ ಗಿಲ್ ಗಿಲಗಿಚ್ಚಿ' -೧೯೭೮
'ತಿರುಗಲೆ ತಿರುಗಲೆ ತಿರುಗುಯ್ಯಾಲೆ' -೧೯೮೦
'ಬಣ್ಣ ಬಣ್ಣದ ಓಕುಳಿ' -೧೯೮೭

ಇವು ನಾಲ್ಕು ಕವನ ಸಂಕಲನಗಳು.

'ನ್ಯಾಯ ನಿರ್ಣಯ' ಎಂಬುದು (೧೯೮೭) ಮಕ್ಕಳಿಗಾಗಿಯೇ ರಚಿಸಲಾದ ಕಿರುನಾಟಕ. 'ಮಕ್ಕಳ ಲೋಕಸಂಚಾರ' ಎಂಬುದು (೧೯೮೯) ಧಾರಾವಾಹಿಗಳ ಸಂಕಲನ. ಇವಲ್ಲದೆ 'ದೇಶಕೊಂದೆ ಬಾವುಟ' ಮೊದಲಾದ ಇನ್ನೂ ಕೆಲವು ಕೃತಿಗಳನ್ನು ಅವರು ರಚಿಸಿದ್ದು ಅವು ನನಗೆ ಲಭ್ಯವಾಗಲಿಲ್ಲ.

ತಾವು ಬರೆದ ಮಕ್ಕಳ ಸಾಹಿತ್ಯವನ್ನು ತಮ್ಮ ಮಕ್ಕಳಿಗೇ ಓದಲು ಕೊಟ್ಟು ಅವರ ಪ್ರತಿಕ್ರಿಯೆಯನ್ನು ಗಮನಿಸಿದ ಪುರಾಣಿಕರಿಗೆ ಈ ಸಂದರ್ಭದಲ್ಲಿ ಅವರ ಮಕ್ಕಳೇ ವಿಮರ್ಶಕರು ಹಾಗೂ ಮಾರ್ಗದರ್ಶಿಗಳು. ವಿಮರ್ಶೆಯ ದೃಷ್ಟಿಯಿಂದ ಇದು ಸರಿಯಾದ ಕ್ರಮ ಕೂಡ ಹೌದು. ಆ ಪ್ರಸಂಗವನ್ನು ತಮ್ಮ 'ತುಪ್ಪಾ ರೊಟಿ ಗೇ ಗೇ ಗೇ' ಸಂಕಲನದಲ್ಲಿ ಪುರಾಣಿಕರು ಹೀಗೆ ದಾಖಲಿಸಿದ್ದಾರೆ: "ಇವುಗಳನ್ನು ಬರೆಯುವಾಗ ಒರೆಗಲ್ಲಾಗಿ ಇದು ಚೆನ್ನಾಗಿದೆ, ಇದು ಚೆನ್ನಾಗಿಲ್ಲ ಎಂದು ತೀರ್ಪು ಕೊಟ್ಟವರು ನಿಮ್ಮಂತೆ ಎಳೆಯರಾಗಿರುವ ನನ್ನ ಮಕ್ಕಳು ವಿಜಯಲಕ್ಷ್ಮಿ, ಶಿವಗೀತ, ಭಾರತಿಯರು. ಅವರಿಗೆ ಒಪ್ಪಿತವಾದವುಗಳನ್ನೇ ಇದರಲ್ಲಿ ಸೇರಿಸಿರುವೆನಾದ ಕಾರಣ ನಿಮಗೂ ಇವು ಒಪ್ಪಿತವಾಗುವುವೆಂದು ನಂಬಿದ್ದೇನೆ" ಎಂಬ ಅವರ ಮಾತುಗಳು ಅವರ ಪ್ರಾಮಾಣಿಕತೆ ಹಾಗೂ ವಿಮರ್ಶನ ಪ್ರಜ್ಞೆಗಳಿಗೆ ಸಾಕ್ಷಿಗಳಾಗಿವೆ. ಮಕ್ಕಳಿಗಾಗಿ ರಚಿತವಾಗುವ ಸಾಹಿತ್ಯಕ್ಕೆ ಮಕ್ಕಳೇ ಯೋಗ್ಯ ವಿಮರ್ಶಕರೆಂಬ ಪುರಾಣಿಕರ ಭಾವ ಸ್ತುತ್ಯಾರ್ಹವಾಗಿದೆ.

'ತುಪ್ಪಾ ರೊಟ್ಟಿ ಗೇ ಗೇ ಗೇ' ಸಂಕಲನವನ್ನು ಬೆಂಗಳೂರಿನ ಸಹಕಾರಿ ಪ್ರಕಾಶನದವರು ಪ್ರಕಟಿಸಿದ್ದು ಇದರಲ್ಲಿ ೨೦ ಕವನಗಳಿವೆ. ಇವೆಲ್ಲ ಮಕ್ಕಳ ಬುದ್ಧಿವಿಕಸನಕ್ಕೆ ಅಗತ್ಯವಾದ ಸಾಮಗ್ರಿಗಳನ್ನೊಳಗೊಂಡಿವೆ. 'ಗಿಲ್ ಗಿಲ್ ಗಿಲಗಿಚ್ಚಿ' ಎಂಬ ಸಂಕಲನವನ್ನು ವಿಜಾಪುರದ ಭಾರತಿ ಸಾಹಿತ್ಯ ಭಂಡಾರದವರು ಪ್ರಕಟಿಸಿದ್ದು ಇದರಲ್ಲಿ ೧೫ ಕವನಗಳಿವೆ. ಇವು ಹೆಚ್ಚಾಗಿ ನಾಡು-ನುಡಿಗಳ ಪ್ರೇಮಕ್ಕೆ ಪೋಷಕವಾಗಿವೆ. ಪುರಾಣಿಕರ ಮೂರನೆಯ ಕವನ ಸಂಕಲನ 'ತಿರುಗಲೆ ತಿರುಗಲೆ ತಿರುಗುಯ್ಯಾಲೆ.' ಇದರ ಪ್ರಕಾಶಕರೂ ವಿಜಾಪುರದ ಭಾರತಿ ಸಾಹಿತ್ಯ ಭಂಡಾರದವರೇ. ಇದರಲ್ಲಿ ೧೪ ಕವನಗಳಿದ್ದು ಕನ್ನಡಪರವಾದ ಅಭಿಮಾನ ಹಾಗೂ ಮಕ್ಕಳ ಮಹತ್ವಾಕಾಂಕ್ಷೆಗಳನ್ನು ಸಾರಿ ಹೇಳುತ್ತವೆ. 'ಬಣ್ಣ ಬಣ್ಣದ ಓಕುಳಿ'ಯೆಂಬ ನಾಲ್ಕನೆಯ ಕವನ ಸಂಕಲನದ ಪ್ರಕಾಶಕರು ತಿಪಟೂರಿನ ನಿರ್ಮಲ ಪ್ರಕಾಶನದವರು. ಇದರಲ್ಲಿ ೨೦ ಕವನಗಳಿವೆ. ಇವಲ್ಲದೆ 'ನ್ಯಾಯ ನಿರ್ಣಯ' ಎಂಬ ಮಕ್ಕಳ ನಾಟಕವನ್ನು ಹಾಗೂ 'ಮಕ್ಕಳ ಲೋಕಸಂಚಾರ' ಎಂಬ ಧಾರಾವಾಹಿಗಳ ಸಂಗ್ರಹವನ್ನು ವಿಜಾಪುರದ ಭಾರತೀ ಸಾಹಿತ್ಯ ಭಂಡಾರದವರೇ ಪ್ರಕಟಿಸಿದ್ದಾರೆ.

ಈಗ ಈ ಎಲ್ಲ ಕೃತಿಗಳ ಕೆಲವು ಉದಾಹರಣೆಗಳನ್ನು ನೋಡುವ ಮೂಲಕ ಪುರಾಣಿಕರ ಸಾಹಿತ್ಯದ ಆಶಯ, ಸ್ವರೂಪ ಹಾಗೂ ಸಾರ್ಥಕತೆಗಳನ್ನು ಗುರುತಿಸಬಹುದಾಗಿದೆ:

'ತುಪ್ಪಾ ರೊಟ್ಟಿ ಗೇ ಗೇ ಗೇ' ಇದು ಕೇಂದ್ರದ ಬಹುಮಾನ ಪಡೆದ ಕೃತಿ. ಇದರಲ್ಲಿಯ 'ಕೊಡು ಖಡ್ಗವ ಕೈಗೆ' ಎಂಬ ಕವನ ಭಾರತ–ಚೈನಾ ಗಡಿಸಮಸ್ಯೆಯನ್ನು ಕುರಿತಾದದ್ದು. 'ಹಿಂದೂ-ಚೀನೀ ಭಾಯಿ ಭಾಯಿ' ಎಂದು ಬಾಯಲ್ಲಿ ಹೇಳುತ್ತಲೇ ಬೆನ್ನಲ್ಲಿ ಚೂರಿ ಇರಿದ ಅಂದಿನ ಚೀನಾ ದೇಶದ ದುಷ್ಟನೀತಿಗೆ ಸಂಬಂಧಿಸಿದ ಭಾರತೀಯ ಬಾಲಕನೊಬ್ಬನ ಪ್ರತಿಕ್ರಿಯೆ ಈ ಕವನದ ವಸ್ತುವಾಗಿದ್ದು ಮಕ್ಕಳಲ್ಲಿ ಅನನ್ಯ ರಾಷ್ಟ್ರಪ್ರೇಮ ತುಂಬಬಲ್ಲ ಕವನ ಇದಾಗಿದೆ.

'ಕೊಡು ಖಡ್ಗವ ಕೈಗೆ ತಾಯೆ। ಕೊಡು ಕೋವಿಯ ಕೈಗೆ
ತೋರಿಸುವೆನು ನನ್ನಯ ಕೈ। ಆ ಚೌ-ಎನ್-ಲೈಗೆ'

–ಎಂದು ಆವೇಶಭರಿತವಾಗಿ ಆರಂಭವಾಗುವ ಈ ಪದ್ಯ ಉದ್ದಕ್ಕೂ ಆವೇಶವನ್ನು ಉಳಿಸಿಕೊಂಡು ಹೋಗಿದೆ.

'ಚೀಣೀಯರ ಸೊಕ್ಕಿಳಿಸದೆ ನಾ ನಿದ್ರಿಸಲಾರೆ
ನಾ ಕಲಿಸುವೆನು ಪಾಠವನು ಆ ಹಳದಿಯ ನಾಯ್ಗೆ
ಹಾಲುಣಿಸಿದ ಕೈ ಕಚ್ಚಿದ ಈ ಹಳದಿಯ ಹಾವ
ಸೀಳುವೆನು ಹೂಳುವೆನು ತಡೆಯುವವನಿದನಾವ'

ಮಕ್ಕಳ ಚಿತ್ತವೃತ್ತಿಯಲ್ಲಿ ಸಹಜವಾಗಿರುವ ಉತ್ಸಾಹ–ಆವೇಶ–ಭಾವಗಳನ್ನು ಪುರಾಣಿಕರು ಇಲ್ಲಿ ಸ್ಥಾಯಿಯಾಗಿ ಬಳಸಿದ್ದು, ಇದು ಅವರು ಮಕ್ಕಳ ಮನಸ್ಸನ್ನು ಚೆನ್ನಾಗಿ ಅರಿತಿದ್ದಾರೆಂಬುದನ್ನು ಸಾಬೀತುಪಡಿಸುತ್ತದೆ. ಇಲ್ಲಿಯ ಲಯ ಹಾಗೂ ದೀರ್ಘಸ್ವರಗಳಿಂದ ಕೂಡಿದ ಶಬ್ದಗಳು ಕವನದ ಭಾವಕ್ಕೆ ಹಾಗೂ ಗಾಂಭೀರ್ಯಕ್ಕೆ ಪೋಷಕವಾಗಿವೆ.

ಈ ಸಂಕಲನದ ಇನ್ನೊಂದು ಗಮನಾರ್ಹ ಪದ್ಯ 'ಬಾಲಕನ ಬಯಕೆ.' ತನ್ನ ಮನದಲ್ಲಿ ಮೂಡಿದ ಸಂಕಲ್ಪವೊಂದನ್ನು ಸಾಧಿಸಲು ಆತ ತನ್ನ ತಾಯಿಯ ಪ್ರೇರಣೆ ಪಡೆಯುತ್ತಿದ್ದಾನೆ. ರಶಿಯದ ಮೊದಲ ಗಗನಯಾತ್ರಿ ಯೂರಿ ಗಗರಿನ್ ಹಾಗೆ, ಮೊದಲ ಮಹಿಳಾಯಾತ್ರಿ ವೆಲೆಂಟಿನಾ ಅವರ ಹಾಗೆ ತಾನೂ ಗಗನಯಾತ್ರೆ ಕೈಕೊಳ್ಳುವ ಸಂಕಲ್ಪ ಆ ಬಾಲಕನದು. ಅಂತೆಯೇ ಆತ–

'ನಾನೂ ಕ್ಷಿಪಣಿಯ ಹತ್ತುವೆನು।
ಪೃಥ್ವಿಯ ಸುತ್ತಲೂ ಸುತ್ತುವೆನು।
ಬಾಲರ ಬಾವುಟ ಎತ್ತುವೆನು॥'

ಎಂದು ಆತ ತಾಯಿಯಲ್ಲಿ ನಿವೇದಿಸಿಕೊಳ್ಳುತ್ತಿದ್ದಾನೆ. ಆದರೆ ಹೀಗೆ ಗಗನಯಾತ್ರೆ, ಚಂದ್ರಲೋಕ ಪ್ರಯಾಣ ಮಾಡುವವರನ್ನು ಕಂಡು ಅಸಮಾಧಾನಗೊಳ್ಳುವ ಕೆಲವು ಬಾಲಕರೂ ಇದ್ದಾರೆ. ಅವರಲ್ಲಿ ಒಬ್ಬ 'ಮಗುವಿನ ಮೊರೆ' ಎಂಬ ಕವನದ ಮೂಲಕ ತನ್ನ ತಾಯಿಯ ಮುಂದೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾನೆ. ಅಂತೆಯೇ ಆತ ಚಂದ್ರಲೋಕದೊಳಿನ್ನು ಮನೆಯ ಕಟ್ಟುವರಂತೆ.

ಇರುವೊಬ್ಬ ಚಂದ್ರನನು ಅಂದಗೆಡಿಸುವರೆ ? ಎಂದು ಪ್ರಶ್ನಿಸುತ್ತಾನೆ. ತನ್ನ ಹಲವಾರು ಸಂದೇಹಗಳನ್ನು ಆತಂಕದ ಭಾವಗಳನ್ನು ವ್ಯಕ್ತಪಡಿಸಿದ ಆ ಬಾಲಕ ಕೊನೆಗೆ 'ಇಲ್ಲಿ ಸಲ್ಲದ ಜನರು ಅಲ್ಲಿ ಸಲ್ಲುವರೆಂತು' ಎಂದೂ ಪ್ರಶ್ನಿಸಿ ಬಿಡುತ್ತಾನೆ. ಬಾಲಕನ ವಯೋಗುಣಕ್ಕೆ ಸಹಜವಲ್ಲದ ಮಾತು ಇದೆಂದು ಅನ್ನಿಸಿದರೂ ಇಂಥ ಮಾತು-ಗಳನ್ನು ಸೇರಿಸಿರುವುದರ ಹಿಂದಿನ ಕವಿಯ ಸಾಹಿತ್ಯದ ಗುರಿಯನ್ನು ಗಮನಿಸಿದಾಗ ನಮ್ಮ ಅನಿಸಿಕೆ ನಿರಾಧಾರವಾಗಿ ಬಿಡುತ್ತದೆ. ಇದೇ ಸಂಕಲನದ 'ನನ್ನ ಕುದುರೆ' ಹಾಗೂ 'ಹಣ್ಣು ಮಾರುವವನ ಹಾಡು' ಎಂಬ ಕವನಗಳು ಅಭ್ಯಾಸ ಯೋಗ್ಯವಾಗಿವೆ.

ಪರಿಸರದ ಸಮತೋಲನವನ್ನು ಕಾಪಾಡಿಕೊಳ್ಳಲು ಹೆಣಗುತ್ತಿರುವ ಇಂದಿನ ದಿನಮಾನಕ್ಕೆ ಅತ್ಯಂತ ಪ್ರಸ್ತುತವೆನ್ನಿಸುವ ಇನ್ನೊಂದು ಪದ್ಯ, 'ತುಪ್ಪಾ ರೊಟ್ಟಿ ಗೇ ಗೇ ಗೇ' ಸಂಕಲನದಲ್ಲಿದೆ. ಅದರ ಹೆಸರ 'ಶಾಲೆಯ ವನ'.

'ಶಾಲೆಯ ಒಳಗೆ ಬಾಲರು ಬೆಳೆಯಲಿ
ತಮ್ಮ ತಮ್ಮೊಳಗೆ ಹೆಣಗದಲೆ
ಬೆಳೆಯಲಿ ಹೊರಗೆ ಶಾಲೆಯ ವನವು
ಒಂದೂ ಸಸಿಯು ಒಣಗದಲೆ'........

ಈ ಸದ್ಭಾವದೊಂದಿಗೆ ಶಾಲಾ ಬಾಲಕರು ಬೆಳೆಸಿದ ಹೂವುಗಳ ಸದುಪಯೋಗ ಹೇಗಿದೆ ನೋಡಿ:

'ಹೂಗಳು ಬಿಟ್ಟರೆ ದೇವರಿಗೇರಿಸಿ
ವಿದ್ಯಾಬುದ್ಧಿಯ ಬೇಡುವೆವು
ಹಣ್ಣುಗಳಾದರೆ ಎಲ್ಲರು ಸೇವಿಸಿ
ಹರ್ಷದಿಂದ ಕುಣಿದಾಡುವೆವು'

ತಮ್ಮ ತಮ್ಮ ಶಾಲೆಯ ಉದ್ಯಾನಗಳನ್ನು ತಾವೇ ಬೆಳೆಯಿಸುವ ಮೂಲಕ ಬಾಲಕರು ಎಳೆವಯಸ್ಸಿನಲ್ಲಿಯೇ ಪರಿಸರ ಪ್ರೇಮವನ್ನು ಮೂಡಿಸಿಕೊಳ್ಳಬೇಕೆಂಬುದು ಈ ಕವನದ ಆಶಯವಾಗಿದೆ.

'ಗಿಲ್ ಗಿಲ್ ಗಿಲಗಿಚ್ಚಿ' ಎಂಬ ಸಂಕಲನದ 'ಕನ್ನಡಿಗರಾಗಿ ಬಾಳೋಣ' ಎಂಬ ಪದ್ಯವು ಐಕ್ಯಭಾವದ ಸಂದೇಶ ಸಾರುತ್ತದೆ.

ನಾವು ಹುಟ್ಟಿರುವ ಕುಲವೇನಿರಲಿ
ಕನ್ನಡ ಕುಲವನೆ ಅಪ್ಪೋಣ
ಕನ್ನಡನಾಡೊಳಗಿರುವವರೆಲ್ಲ
ಕನ್ನಡಿಗರೆಂದು ಒಪ್ಪೋಣ
ವೇಷವು ಬೇರೆ ಭೂಷಣ ಬೇರೆ
ಭಾಷೆಯು ಒಂದೇ ಕನ್ನಡವು
ಕನಸಿನೊಳಿಹುದೂ ಮನಸಿನೊಳಿಹುದೂ
ನನಸಿನೊಳಿಹುದೂ ಕನ್ನಡವು

'ಕನ್ನಡ ಕಲಿಸದ ವಿದ್ಯಾಲಯಗಳೆ
ಕನ್ನಡ ಬಳಸದ ಸರಕಾರ
ಕನ್ನಡ ತೀರ್ಪನು ಕೊಡದ ಕೋರ್ಟುಗಳೆ
ನಿಮಗಿದೊ ನಮ್ಮಯ ಧಿಕ್ಕಾರ'

ಎಂಬ ಸಾಲು ಸಾಲಿನಲ್ಲಿಯೂ ನಾಡುನುಡಿಗಳ ಕುರಿತಾದ ಪ್ರೇಮ ವ್ಯಕ್ತವಾಗಿದೆ.

ಇದೇ ಸಂಕಲನದ 'ಮಿಠಾಯಿ ಮಕ್ಕಳೆ' ಅಂತ್ಯಪ್ರಾಸ ಹಾಗೂ ತಿಳಿಯಾದ ಭಾಷೆಯ ದೃಷ್ಟಿಯಿಂದ ವಿಶಿಷ್ಟವಾಗಿದೆ:

'ಮಿಠಾಯಿ ಮಕ್ಕಳೆ| ಕೊಳ್ಳಿರಿ ಈಗಳೆ
ಬಿಟ್ಟರೆ ಮತ್ತಿವು ಸಿಗಲಿಕ್ಕಿಲ್ಲ| ಇವುಗಳ ಬೆಲೆಯೂ ಹೆಚ್ಚಿಲ್ಲ'

ನಾವೂ ಕೂಡ ಮಕ್ಕಳ ವಯಸ್ಸಿಗೆ ಇಳಿದು ಓದಿದಾಗ ಇಂಥ ಪದ್ಯಗಳು ನಮಗೆ ಹೆಚ್ಚು ಆಕರ್ಷಕವಾಗಿ ಕಂಡು ಬರುತ್ತವೆ.

'ತಿರುಗಲೆ ತಿರುಗಲೆ ತಿರುಗುಯ್ಯಾಲೆ' ಸಂಕಲನದ ಪದ್ಯ 'ಕಲಿಸಲಿ ಕನ್ನಡ'ವು ಮಕ್ಕಳಲ್ಲಿ ರಾಷ್ಟ್ರಪ್ರೇಮ ತುಂಬುವ ಉತ್ಕೃಷ್ಟ ಪದ್ಯವಾಗಿದೆ:

ಅ ಆ ಇ ಈ ಕಲಿಸುವ ಮೊದಲೇ| ಎ ಬಿ ಸಿ ಡಿ ಕಲಿಸುವರು
ಅಪ್ಪಾ ಅವ್ವಾ ಎನ್ನುವ ಮೊದಲೇ| ಮಮ್ಮಿ ಡ್ಯಾಡಿ ಎನಿಸುವರು|

ಎಂಬಲ್ಲಿಯ ಪರಿತವಾದ ವ್ಯಂಗ್ಯ ಸ್ವಾಭಾವಿಕವಾಗಿ ಓದುಗರನ್ನು ಸೆಳೆದು ಬಿಡುತ್ತದೆ. ಇದೇ ಸಂಕಲನದ 'ಭರತ ಭೂಮಿ ಕರುನಾಡು' ಎಂಬ ಪದ್ಯವೂ ಇಂಥ ಉದ್ದೇಶದಿಂದಲೇ ಪ್ರೇರಿತವಾದದ್ದು:

'ಭರತಭೂಮಿಯನುಳಿದು| ಕನ್ನಡನಾಡು ಇಲ್ಲ
ಕರ್ನಾಟಕವ ಬಿಟ್ಟು| ಭಾರತವು ಇಲ್ಲ
ನಮ್ಮ ತಾಯಿಯ ತಾಯಿ| ಭಾರತಾಂಬೆ
ಭಾರತಿಗೆ ಭೂಷಣಗಳು ಕರ್ನಾಟಕಾಂಬೆ'

ಎಂಬ ಸಾಲುಗಳಲ್ಲಿಯ ಭಾವ ನಿಜಕ್ಕೂ ಸ್ತುತ್ಯವಾದದ್ದು. ನಮ್ಮಲ್ಲಿ ಕರ್ನಾಟಕತ್ವ ಹಾಗೂ ಭಾರತೀಯತ್ವ ಗಳೆರಡೂ ಸಮರಸವಾಗಿ ಬೆರೆತಿರಬೇಕೆಂಬ ಔಚಿತ್ಯಪೂರ್ಣ ವಿಚಾರ ಇಲ್ಲಿದೆ.

ಈ ಸಂಕಲನದ 'ತಾಯಿ' ಎಂಬ ಪದ್ಯವು ತಾಯಂದಿರನ್ನೂ ಮಕ್ಕಳು ಕಾಣಬೇಕಾದ ರೀತಿಯನ್ನು ಬೋಧಿಸುತ್ತದೆ:

ಅರ್ಜುನನೇನೋ ಬಹಳ ದೊಡ್ಡವನು| ವಿಶ್ವರೂಪವನು ನೋಡಿದನು
ನಾನು ಸಣ್ಣವನು ದೇವರ ನಾನು| ತಾಯಿಯ ರೂಪದಿ ನೋಡುವೆನು
ಕಾಣದ ದೇವರ ಕಂಡವರಾರೊ| ಕಾಣುವ ದೇವರು ತಾಯಿಯೇ
ಕಲ್ಲುದೇವರು ಕೊಡುವುದು ಏನೋ| ಎಲ್ಲ ಕೊಡುವವಳು ತಾಯಿಯೇ
ಅಕ್ಷರ ಕಲಿಸುವ ಮೊದಲನೆ ಗುರುವು| ನಡೆನುಡಿ ತಿದ್ದಲು ನಯಕಾರಿ
ಬಾಲಕತನದ ಮೃದು ಹಾಲುಗಲ್ಲಿನಲಿ| ಮನುಜನ ಕೆತ್ತುವ ರೂವಾರಿ'

ಎಂಬ ಈ ಕವನ ಏಕಕಾಲದಲ್ಲಿ ಮಕ್ಕಳಿಗೂ ಪ್ರೌಢರಿಗೂ ಮೆಚ್ಚಿಕೆಯಾಗುವ ಯೋಗ್ಯತೆಯನ್ನು ಪಡೆದಿದೆ. ಷಟ್ಪದಿಯ ಲಯದಲ್ಲಿ ಸಾಗುವ ಇದರ ಲಯ, ಅದಕ್ಕೆ ತಕ್ಕ ಹಾಗೆ ಬಳಸಲಾದ ಸಣ್ಣ ಸಣ್ಣ ಶಬ್ದಗಳು, ಒಳಗಡೆ ಹುದುಗಿರುವ ವಿಶಾಲಾರ್ಥ ಹೀಗೆ ಅನೇಕ ಕಾರಣಗಳಿಂದ ಈ ಕವನ ಪುರಾಣಿಕರ ಮಕ್ಕಳ ಸಾಹಿತ್ಯ ಕೃಷಿಯಲ್ಲೇ ವಿಶಿಷ್ಟವಾಗಿದೆಯೆನ್ನಿಸುತ್ತದೆ.

ಇದೇ ಸಂಕಲನದ 'ನೀ ಮುಂದಿದ್ದರೆ ಸೋಲೇ ಇಲ್ಲ' ಎಂಬ ಕವನವೂ ಮಾತೃಪ್ರೇಮವನ್ನು ಪ್ರತಿಪಾದಿಸುತ್ತದೆ.

ಪುರಾಣಿಕರ ನಾಲ್ಕನೆಯ ಕವನ ಸಂಕಲನ 'ಬಣ್ಣ ಬಣ್ಣದ ಓಕುಳಿ!' ಇದರ ಮೊದಲ ಕವನ 'ಮಕ್ಕಳ ಹಕ್ಕು' ಎಂಬುದು ಮಕ್ಕಳಲ್ಲಿ ನಾಗರಿಕ ಪ್ರಜ್ಞೆ ಮೂಡಿಸಲು ಪ್ರೇರಕವಾಗಿದೆ. ಮಕ್ಕಳಿಗೆ ಎಲ್ಲರ ಅಕ್ಕರೆ-ಪೋಷಣೆ, ಪೌಷ್ಟಿಕ ಆಹಾರ, ಶುಚಿಯಾದ ಉಡುಗೆ, ಚೊಕ್ಕವಿದ್ಯೆ, ತಕ್ಕ ಪರಿಸರ, ಆಟಪಾಟ ಇವೆಲ್ಲವೂ ಅತ್ಯಗತ್ಯ. ಇವನ್ನು ಒದಗಿಸುವುದು ಹಿರಿಯರ ಕರ್ತವ್ಯವಾದರೆ, ಇವುಗಳನ್ನು ಕೇಳಿ ಪಡೆಯುವ ಹಕ್ಕು ಬಾಲಕರದಾಗಿದೆ. ಕೃತಿಯಲ್ಲಿ ಸಂದರ್ಭೋಚಿತವಾಗಿ ಬಿಡಿಸಲಾಗಿರುವ ವರ್ಣಮಯ ಚಿತ್ರಗಳು ಬಾಲಕರ ಮನಸ್ಸನ್ನು ಬೇಗ ಸೆಳೆಯಲು ಸಹಕಾರಿಯಾಗಿವೆ.

'ನೆಹರೂ ಚಾಚಾ' ಎಂಬುದು ಈ ಸಂಕಲನದ ಇನ್ನೊಂದು ವಿಶಿಷ್ಟ ಪದ್ಯ. ಸಂಕಲನದಲ್ಲಿಯ ಕೆಲವು ಚುಟುಕುಗಳು ಮತ್ತು ಸರಪಳಿಗಳು ಪುರಾಣಿಕರ ಸಾಹಿತ್ಯದ ಲಯದ ವೈವಿಧ್ಯತೆಗೆ ಸಾಕ್ಷಿಗಳಾಗಿವೆ.

ಇನ್ನೂ ಮಕ್ಕಳಿಗಾಗಿಯೇ ಪುರಾಣಿಕರು ರಚಿಸಿದ 'ನ್ಯಾಯ ನಿರ್ಣಯ' ಎಂಬ ನಾಟಕದ ಬಗ್ಗೆ ಕೆಲವು ಮಾತುಗಳು: ಅರೇಬಿಯನ್ ನೈಟ್ಸ್ ಕಥೆಯನ್ನಾಧರಿಸಿ ರಚಿಸಿದ ನಾಟಕ ಇದಾಗಿದ್ದು, ತಮ್ಮ ದೇಶದ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸುವ ಬಗದಾದಿನ ಬಾಲಕರು ಇದರ ನಾಯಕರು. ಜಕಿ, ಜಾಕೋಬ್, ಜಯು, ಜಾರ್ಜ್ ಮತ್ತು ಅಲಿ ಎಂಬವರೇ ಆ ಬಾಲಕರು ಅಲಿ ಎಂಬಾತನಿಗೆ ಸ್ವಪ್ನದಲ್ಲಿ ಅಲ್ಲಾ ಬಂದು ಮಕ್ಕಾಕ್ಕೆ ಬರುವಂತೆ ಆಜ್ಞಾಪಿಸುತ್ತಾನೆ. ಆತ ಪ್ರಯಾಣ ಹೊರಡುವ ಮುನ್ನ ತನ್ನಲ್ಲಿದ್ದ ಹೆಚ್ಚಿನ ಹಣವನ್ನು ತನ್ನ ವಿಶ್ವಾಸಪಾತ್ರನಾದ ಓರ್ವ ವರ್ತಕನ ಬಳಿಯಲ್ಲಿಡಲು ನಿರ್ಧರಿಸಿ ಹಣವನ್ನಿಡುವ ವಿಷಯ ಆ ವರ್ತಕನಿಗೆ ತಿಳಿಯದಂತೆ ಒಂದು ಹಣ್ಣಿನ ಬುಟ್ಟಿಯ ತಳದಲ್ಲಿ ನಾಣ್ಯಗಳನ್ನಿಟ್ಟು ಆ ಬುಟ್ಟಿಯನ್ನು ವರ್ತಕನಲ್ಲಿಟ್ಟು ತಾನು ಮಕ್ಕಾಕ್ಕೆ ಹೋಗುತ್ತಾನೆ. ಕೆಲದಿನಗಳಾದ ಮೇಲೆ ಆ ವರ್ತಕನ ಹೆಂಡತಿ ಗರ್ಭಿಣಿಯಾಗುತ್ತಾಳೆ. ಅವಳಿಗೆ ಜೇತೂನ ಹಣ್ಣು ತಿನ್ನುವ ಬಯಕೆಯಾಗುತ್ತದೆ. ವರ್ತಕನು ತನ್ನ ಸ್ನೇಹಿತನಿಟ್ಟಿದ್ದ ಬುಟ್ಟಿಯಲ್ಲಿಯ ಹಣ್ಣುಗಳನ್ನು ನೆನಪಿಸಿಕೊಂಡು ತರಲಿಕ್ಕೆ ಹೋದಾಗ ಅದರಡಿಯಲ್ಲಿ ನಾಣ್ಯಗಳಿರುವುದು ತಿಳಿದು ಅವುಗಳನ್ನು ತೆಗೆದಿಟ್ಟು ತನ್ನ ಹೆಂಡತಿಗೆ ಹಣ್ಣುಗಳನ್ನು ತಂದು ಕೊಡುತ್ತಾನೆ. ಪರರ ಹಣ್ಣುಗಳನ್ನು ತರುವ ಗಂಡನ ಕೃತ್ಯವನ್ನು ಹೆಂಡತಿ ಸಹಿಸುವುದಿಲ್ಲ.ಆದರೂ ವರ್ತಕ ಲೋಭದಿಂದ ಗೆಳೆಯನ ಹಣವನ್ನು ಅಪಹರಿಸುತ್ತಾನೆ.

ನಂತರ ಅಲಿ ಮಕ್ಕೆಯಿಂದ ತಿರುಗಿ ಬರುತ್ತಾನೆ. ವರ್ತಕನಿಂದ ಪೆಟ್ಟಿಗೆ ಪಡೆದು ಮನೆಗೆ ಹೋಗಿ ನೋಡಿದರೆ ಅದರಲ್ಲಿಯ ನಾಣ್ಯಗಳು ಮಾಯವಾಗಿವೆ! ತಿರುಗಿ ಬಂದು ವರ್ತಕನಲ್ಲಿ ನಾಣ್ಯಗಳ ವಿಚಾರವಾಗಿ ಕೇಳುತ್ತಾನೆ. ಆಗ ವರ್ತಕ ಏನೂ ಅರಿಯದವನಂತೆ ನಟಿಸುತ್ತಾನೆ. ತರುವಾಯ ಅಲಿ ಎಂಬಾತ ಕಳುವಾದ ತನ್ನ ನಾಣ್ಯಗಳ ಬಗ್ಗೆ ದೊರೆಯಲ್ಲಿ ದೂರು ಸಲ್ಲಿಸುತ್ತಾನೆ. ದೊರೆಗೆ ಈ ನ್ಯಾಯವನ್ನು ನಿರ್ಣಯಿಸುವುದು ಕಷ್ಟವಾಗುತ್ತದೆ. ಅದನ್ನರಿತ ಬಾಲಕರು ತಾವೊಂದು ನಾಟಕವನ್ನಾಡುವ ನೆಪಮಾಡಿ ಆ ನ್ಯಾಯವನ್ನು ಹೇಗೆ ನಿರ್ಣಯಿಸ ಬೇಕೆಂಬುದನ್ನು ತಿಳಿಸಿ ಕೊಡುತ್ತಾರೆ. ಅವರ ವಿಚಾರವನ್ನಾಧರಿಸಿ ದೊರೆ ಆ ದುಷ್ಟ ವರ್ತಕನಿಗೆ ಶಿಕ್ಷೆ ವಿಧಿಸುತ್ತಾನೆ ಹಾಗೂ ಬಾಲಕರಿಗೆ ಬಹುಮಾನಗಳನ್ನಿತ್ತು ಸತ್ಕರಿಸುತ್ತಾನೆ. ಇದಿಷ್ಟು ನಾಟಕದ ಸಂಕ್ಷಿಪ್ತ ಸಾರ.

ಬಾಲಕರಿಗೆ ಸರಿಯಾದ ಸಮಗ್ರ ಶಿಕ್ಷಣ, ಬುದ್ಧಿಯ ಹಾಗೂ ಭಾವಜೀವನದ ತಿಳುವಳಿಕೆ ನೀಡಬೇಕೆಂಬುದು ನಾಟಕದ ಪ್ರಧಾನ ಆಶಯ.

ತಮ್ಮ ದೇಶದ ಇತಿಹಾಸ ನಿರ್ಮಿಸುವ ಪಣ ತೊಡುವ ಬಾಲಕರ 'ನಮಗೆ ಮೀರಿದುದು ಯಾವುದಿದೆ? ನಮ್ಮ ಸಾಹಸಕೆ ಎಲ್ಲಿ ಕೊನೆ?

ಸಕಲ ಲೋಕವೆ ನಮ್ಮ ಮನೆ, ನಾವು ಬಾಲರು
ಒಳ್ಳಿದವರಿಗೆ ಮುಡುಪೆಮ್ಮಯ ನೆರವು

ಆಗದು ನಮಗೆ ಕೆಡುಕರ ಇರವು
ಬರದಿರಲಿಲ್ಲಿಗೆ ನ್ಯಾಯದ ಬರವು, ನಾವು ಸುಶೀಲರು'

ಎಂಬ ಗೀತೆಯೊಂದಿಗೆ ನಾಟಕ ಆರಂಭವಾಗುತ್ತದೆ.

ಮಕ್ಕಳಲ್ಲಿ ನಾವು ಅಗತ್ಯವಾಗಿ ತುಂಬಬೇಕಾದ ಕೆಲವು ಒಳ್ಳೆಯ ವಿಚಾರಗಳನ್ನು ನಾಟಕವು ಒಳಗೊಂಡಿದೆ. ಉದಾ-'ಜಾಕೋಬ್ ಎಂಬಾತ ತನ್ನ ಬಲೆಗೆ ಮತ್ತೆ ಕೊಳೆತ ಮೀನೇ ಬಿದ್ದೀತು' ಎಂಬ ಶಂಕೆಯಿಂದ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದಾಗ ಅವನಿಗೆ ಜಕಿ ಎಂಬ ಇನ್ನೊಬ್ಬ ಬಾಲಕ ಬುದ್ಧಿ ಹೇಳುತ್ತಾನೆ. ಆ ಪ್ರಸಂಗದಲ್ಲಿ ಬರುವ 'ನಿನ್ನ ಯಹೂದಿ ಬುದ್ಧಿ ಎಲ್ಲಿಗೆ ಹೋಗುತ್ತೆ ಜಾಕೋಬ ಕೊಳೆತ ಮೀನು ಕೆರೆಯಲ್ಲಿಯೇ ಕೊಳೆಯುತ್ತಿರಲಿ, ಒಳ್ಳೆಯ ಮೀನು ಹಿಡಿದೊಯ್ದು ತಿಂದರಾಯಿತು' ಎನ್ನುವಂತಿದೆ ನೀನು ಆದರೆ ನೆನಪಿರಲಿ, ಒಂದೇ ಒಂದು ಕೊಳೆತ ಮೀನವೂ ಸಾಕು-ಕೆರೆಯನ್ನೆಲ್ಲ ದುರ್ಗಂಧಗೊಳಿಸಲು, ಆದುದರಿಂದ ಕೊಳೆತ ಮೀನುಗಳನ್ನು ಕೆರೆಯಿಂದ ತೆಗೆಯುವುದೊಂದೆ ಪವಿತ್ರ ಕರ್ತವ್ಯ. ಒಳ್ಳೆಯ ಮೀನುಗಳನ್ನು ಹಿಡಿದೊಯ್ಯುವವರಿಗೆ ಕೊರತೆಯೆಲ್ಲಿ?....ಎಲ್ಲರೂ ತಮಗೆ ಮಾತ್ರ ಒಳ್ಳೆಯ ಮೀನು ಸಿಕ್ಕರೆ ಸಾಕೆಂಬ ಸ್ವಾರ್ಥವನ್ನು ನೋಡುವವರೇ ಹೊರತು ಸಮಾಜದ ಹಿತಕ್ಕಾಗಿ ಹಾಗೂ ಕೆರೆಯ ಸ್ವಚ್ಛತೆಗಾಗಿ ಅಲ್ಲಿರುವ ಕೊಳೆತ ಮೀನುಗಳನ್ನು ಹೊರ ಹಾಕುವವರು ಯಾರೂ ಇಲ್ಲ ಎಂಬ ದೊಡ್ಡ ವಿಚಾರ ಆ ಬಾಲಕನ ಮಾತಿನಲ್ಲಿದೆ. ಅದಕ್ಕೆ ಪ್ರತಿಯಾಗಿ 'ಭರತ ಭೂಮಿಗೆ ತಕ್ಕ ಮಾತನಾಡಿದೆ ಜಯ' ಎಂದು ಜಕಿ ಎಂಬಾತ ಹೇಳುವಾಗಲಂತೂ ಓದುಗರಲ್ಲಿ ಭಾರತೀಯ ಸಂಸ್ಕೃತಿಯ ಹಿರಿಮೆಯು ಅಗಾಧಭಾವ ಎದೆ ತುಂಬಿ ಬರುತ್ತದೆ.

ತಮ್ಮ ನಗರವೆಂಬ ಕೆರೆಯಲ್ಲಿರುವ ದುಷ್ಟರೆಂಬ ಕೊಳೆತ ಮೀನುಗಳನ್ನು ಹೊರಹಾಕುವುದು ಆ ಬಾಲಕರ ಸಂಕಲ್ಪವಾಗಿದೆ. ಅಂತೆಯೇ ಜಕಿ ಹೇಳುತ್ತಾನೆ: 'ಕಿರಿಯರು ತಮಗೆ ಗೌರವ ತೋರಿಸಬೇಕೆನ್ನುವ ಹಿರಿಯರು ಆ ಗೌರವಕ್ಕೆ ತಕ್ಕವರಾಗಿರ ಬೇಡವೇ'? ಎಂದು ಮಕ್ಕಳ ಬುದ್ಧಿಗೆ ಸರಿಹೊಂದುವ ಪ್ರಶ್ನೆಯನ್ನು ಎತ್ತುತ್ತಾನೆ. 'ಹಿರಿಯರ ಚಾಳಿ ಕಿರಿಯರಿಗೆ, ಹಿರಿಯರಲ್ಲಿಲ್ಲದ ನ್ಯಾಯ ನೀತಿಗಳು ಕಿರಿಯರಲ್ಲಿ ಬರುವುದೆಲ್ಲಿಂದೂ'? ಎಂಬ ಆ ಬಾಲಕರ ಪ್ರಶ್ನೆಯು ತಮ್ಮ ಸಮಾಜದ ಹಿರಿಯರ ದೋಷಗಳನ್ನು ಪ್ರಶ್ನಿಸುವ ಹಾಗೂ ವಿಮರ್ಶಿಸುವ ಮಟ್ಟವನ್ನು ತಲುಪಿದೆ.

ಇದೇ ರೀತಿ ನಾಟಕದ ಬೇರೆ ಬೇರೆ ಸಂದರ್ಭಗಳಲ್ಲಿ ಬಂದಿರುವ ಕೆಲವು ನೀತಿ ಪಾಠಗಳು ಗಮನಾರ್ಹ ವಾಗಿವೆ: ತನ್ನ ಹೆಂಡತಿಗೆ ಅನ್ಯರ ಹಣ್ಣುಗಳನ್ನು ಕೊಡಲು ಮುಂದಾದ ವರ್ತಕನನ್ನು ಕುರಿತು ಆ ಹೆಂಡತಿ ಆಡಿದ ಮಾತನ್ನೂ ಗಮನಿಸಿ, 'ಮಾನ ಹೋದ ಮೇಲೆ ಮರಣ ಬಂದ ಹಾಗಲ್ಲವೆ?' ಅವಳ ಈ ಮಾತು ನಮ್ಮ ಎಳೆಯರ ಮನಸ್ಸುಗಳ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ. ಆ ಸಂದರ್ಭದಲ್ಲಿ ಹೆಂಡತಿ ಗಂಡನಿಗೆ 'ಮಿತ್ರ ದ್ರೋಹ ಮಾಡದಿರಿ, ನೀತಿ ನಿಯಮಗಳನ್ನು ಗಾಳಿಗೆ ತೂರದಿರಿ' ಎಂದು ಉಪದೇಶಿಸುವ ಪ್ರಸಂಗ ಇನ್ನೂ ಪರಿಣಾಮಕಾರಿಯಾಗಿದೆ.

ವರ್ತಕ ಕಳ್ಳತನ ಮಾಡುವಾಗ ಹೊರಗೆ ಬಂದು ಅದನ್ನು ನೋಡಿದ ಬಾಲಕರು ಹಾಡುವ ಹಾಡು ನಾಟಕದ ಧ್ಯೇಯವಾಕ್ಯದಂತಿದೆ:

'ನಂಬಿದವರ ಕುತ್ತಿಗೆ ಕೊಯ್ಯುವ| ಕೆಡುಕರೆ ನೆನಪಿಡಿರಿ
ಯಾರೇ ನೋಡಲಿ, ನೋಡದಿರಲಿ ನೀ| ಗೈದ ಪಾತಕವನು
ಎಲ್ಲ ನೋಡುವವನೊಬ್ಬನಿಹನು ನೀ| ಮರೆಯ ಬೇಡ ಇದನು'

ಎಂಬ ಮಾತುಗಳು ತುಂಬ ಧ್ವನಿಪೂರ್ಣವಾಗಿವೆ.

ಅಲಿ ಹಾಗೂ ಆತನ ಮಿತ್ರರು ಮಕ್ಕಾಯಾತ್ರೆಯ ಸಂದರ್ಭದಲ್ಲಿ ತಾವು ಕಂಡ ನಾಡುಗಳ ಬಗ್ಗೆ ಮಾತನಾಡುವಾಗ ನಾಟಕಕಾರರು ಆ ನಾಡುಗಳ ಪಟ್ಟಿಯಲ್ಲಿ ಭಾರತದ ಹೆಸರನ್ನು ಸೇರಿಸಿದ್ದು ಅದರ ಉದ್ದೇಶ

ಸ್ಪಷ್ಟವಾಗಿಯೇ ಇದೆ. 'ಭಾರತವನ್ನು ನೋಡಿದ ಮೇಲೆ ನಮಗೆ ಇನ್ನೇನನ್ನೂ ನೋಡುವ ಆಶೆಯೇ ಉಳಿಯದಾಯಿತು, ಎಂಥ ಸುಂದರ ಸಮೃದ್ಧ, ಸಂಪದ್ಭರಿತ ದೇಶ, ಎಂಥ ಸ್ಫುರದ್ರೂಪಿಗಳಾದ ಸುಸಂಸ್ಕೃತ ಜನರು ಭಾರತವು ಭೂಲೋಕದ ಸ್ವರ್ಗಲೋಕವೇ ಸರಿ' ಎಂಬ ಅಲಿಯ ಮಾತುಗಳು ಭಾರತವನ್ನು ಕುರಿತಾದ ಆದರಾಭಿಮಾನಗಳನ್ನು ಸಹಜವಾಗಿ ಹೊಮ್ಮಿಸಿದ್ದು, ಈ ಪ್ರಸಂಗ ಎಳೆಯ ಓದುಗರ ಮನಸ್ಸಿನ ಮೇಲೆ ರಾಷ್ಟ್ರಾಭಿಮಾನದ ಬಲವಾದ ಮುದ್ರೆಯನ್ನೊತ್ತುತ್ತದೆ.

'ನ್ಯಾಯವೆ ಆಡಳಿತದ ಅಡಿಗಲ್ಲು, ನ್ಯಾಯದ ಬಲವೆ ಬಲ ಎಲ್ಲೆಲ್ಲೂ' ಎಂಬ ಬಾಲಕರ ಹಾಡು ನಾಟಕದ ಕೇಂದ್ರ ವಿಚಾರವಾಗಿದೆ.

ನಾಟಕದ ಕೊನೆಯ ಹಂತದಲ್ಲಿ ಬರುವ ದೊರೆಯ ಜೊತೆಗಿನ ಬಾಲಕರ ಸಂವಾದ ಪ್ರಸಂಗವನ್ನು ನಾವು ಗಮನಿಸಬೇಕು. ಎಲ್ಲರೂ ಎಲ್ಲವನ್ನು ಕಲಿಯುವುದು ಶಾಲೆಯಲ್ಲಿ ಎಂಬುದು ನಮ್ಮೆಲ್ಲರ ತಪ್ಪು ತಿಳುವಳಿಕೆ. ಅದನ್ನು ನಾವು ಹೋಗಲಾಡಿಸಬೇಕು. ಮಕ್ಕಳಿಗೆ ಎಲ್ಲವನ್ನು ತಿಳಿದುಕೊಳ್ಳುವ ಕಲಿತುಕೊಳ್ಳುವ ಮುಕ್ತ ಅವಕಾಶ ಕೊಡಬೇಕು ಎಂಬ ಸಂದೇಶ ಈ ಪ್ರಸಂಗದಲ್ಲಿದೆ. 'ಎಲ್ಲರೂ ಎಲ್ಲವನ್ನು ಕಲಿಯುವುದು ಶಾಲೆಯಲ್ಲಿ ಅಲ್ಲವೆ'? ಎಂಬ ಖಲೀಫನ ಪ್ರಶ್ನೆಗೆ ಒಬ್ಬ ಬಾಲಕ ಕೊಡುವ ಉತ್ತರ ಹೇಗಿದೆ ನೋಡಿ: 'ದೊರೆಗಳು ಅವಿನಯವನ್ನು ಕ್ಷಮಿಸಬೇಕು. ನಾವು ನಮ್ಮ ಶಾಲೆಗಳಲ್ಲಿ ನೋಡುವುದು ನಮ್ಮ ಉಪಾಧ್ಯಾಯರ ಬಿಗಿದ ಮೊಗವನ್ನು ಕೇಳುವುದು ಅವರು ಹಿಂದೆ ಕಲಿತು ಇಂದು ಹೇಳುವುದನ್ನು ಶಾಲೆಯ ನಾಲ್ಕು ಗೋಡೆಗಳ ನಡುವೆ ನಮಗೆ ದೊರೆಯುವುದು ಬಹಳ ಪರಿಮಿತದ ಅರಿವು ದೊರೆಗಳೇ'

ಈ ಬಾಲಕನ ವಿಚಾರ ನಮ್ಮ ಇಂದಿನ ಶಿಕ್ಷಣ ಕ್ಷೇತ್ರವನ್ನು ವಿಮರ್ಶಾತ್ಮಕವಾಗಿ ಪರಿಚಯಿಸಿಕೊಡುತ್ತದೆ. ಆಗ ಖಲೀಫ 'ಕಲಿಯುವ ಬಾಲಕರು ಜನಜೀವನಕ್ಕೆ ಹತ್ತಿರದಲ್ಲಿದ್ದು ಕಲಿಯಬೇಕು, ಹಸ್ತಿದಂತದ ಗೋಪುರದಲ್ಲಿದ್ದು ಅಲ್ಲ. ಬಹಳ ಸಮಂಜಸ ಸೂತ್ರವಿದು' ಎಂಬ ನಿರ್ಣಯಕ್ಕೆ ಬಂದಿರುವುದು ನಮಗೆಲ್ಲ ಮಾರ್ಗದರ್ಶಿಯಾಗಿದೆ.

'ಬಾಲಕರು ಸೋಲದಿರಬೇಕಾದರೆ ಹುಡುಗರಿರುವಾಗಲೇ ಹೋರಾಟವನ್ನು ಮೈಗೂಡಿಸಿಕೊಳ್ಳಬೇಕು' 'ನಾವು ನಾಳೆಯ ನಾಗರಿಕರೆಂಬ ಪ್ರಜ್ಞೆಯಿಂದ ನಗರದ ಬಗ್ಗೆ ಆಡಳಿತದ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ' ಎಂಬೆಲ್ಲ ಮಾತುಗಳು ಎಳೆಯ ಮಕ್ಕಳಿಗೆ ತುಂಬ ಪ್ರಯೋಜನಕಾರಿಯಾಗಿವೆ.

ನಾಟಕದ ಕೊನೆಗೆ ಬರುವ 'ನಾಡಿನ ನರದಲಿ ನೆತ್ತರು ನಾವು ನಾಡಿನ ಬಳ್ಳಿಯಲಿ ನಾವೇ ಹೂವು ನಾಳಿನ ಕನಸಿನ ಅರ್ಥವು ನಾವು ಬಾಲರು' ಎಂಬ ಪದ್ಯ ಮೇಲಿನ ಮಾತಿಗೆ ಪೂರಕವಾಗಿದೆ.

ಒಟ್ಟಾರೆ 'ನ್ಯಾಯನಿರ್ಣಯ'ವು ಒಂದು ಯಶಸ್ವೀ ನಾಟಕವಾಗಿದೆ. ತಿಳಿಯಾದ ಭಾಷೆ, ಮೇಳಗೀತೆಗಳು ಉಪದೇಶಪರ ಮಾತುಗಳು, ದೃಶ್ಯಗಳ ರೇಖಾಚಿತ್ರ ಇವೆಲ್ಲ ಈ ನಾಟಕದ ವೈಶಿಷ್ಟ್ಯಗಳಾಗಿವೆ. ಆದರೆ ಪಾತ್ರಗಳ ಮಾತುಗಳು ಕೆಲವೊಮ್ಮೆ ಬಹಳ ಉದ್ದವಾಗಿದ್ದು, ಸಣ್ಣ ಮಕ್ಕಳಿಗೆ ನಾಟಕದ ಪ್ರಯೋಜನದ ದೃಷ್ಟಿಯಿಂದ ಇದು ತೊಂದರೆದಾಯಕ ಎನ್ನಿಸುತ್ತದೆ.

'ಮಕ್ಕಳ ಲೋಕ ಸಂಚಾರ'ವೆಂಬುದು ಶುಕವನ, ಸಮುದ್ರಲೋಕ, ಕಾಡುಮನೆ, ವಾಲ್ಟ್‌ಡಿಸ್ನಿ ಲೋಕ, ಗ್ರ್ಯಾಂಡ್ ಕ್ಯಾನನ್, ಲೂರೇ ಗುಹೆಗಳು, ಬಹುದೊಡ್ಡ ವಿಜ್ಞಾನವ್ಯೂಹ, ನಯಾಗರ ನೀರುಬೀಳು, ಮೊದಲಾದ ಕಿರು ಧಾರಾವಾಹಿಗಳ ಸಂಕಲನವಾಗಿದೆ. ಇದೂ ಕೂಡ ಸಚಿತ್ರ ಕೃತಿಯಾಗಿದೆ. ಇಲ್ಲಿಯ ಧಾರಾವಾಹಿಗಳೆಲ್ಲ ಅನೇಕ ಜಾಗತಿಕ ಮಟ್ಟದ ಮಾಹಿತಿಗಳಿಂದ ಕೂಡಿದ್ದು ಮಕ್ಕಳ ಜ್ಞಾನವಿಕಾಸಕ್ಕೆ ಪ್ರೇರಕಗಳಾಗಿವೆ.

ಶುಕವನವೆಂಬುದು ಅಮೇರಿಕೆಯ ಫ್ಲೋರಿಡ್ ರಾಜ್ಯದಲ್ಲಿ ಮಿಯಾಮಿ ನಗರದ ಬಳಿಯಿರುವ ಗಿಳಿಯ ಬಸದ ವರ್ಣನೆ. ಇದು ಮಕ್ಕಳಿಗೆ ನಾವೂ ಪಕ್ಷಿಗಳನ್ನು ಸಾಕಬೇಕೆಂಬ ಹಂಬಲವನ್ನು ಮೂಡಿಸುವಂತಿದೆ.

ಹೀಗೆಯೇ ಕಾಡುಮನೆ, ಸಮುದ್ರಲೋಕ ಹಾಗೂ ಉಳಿದ ಲೇಖನಗಳು ಹಲವಾರು ವಿಸ್ಮಯಕಾರಿ ವಿಷಯಗಳನ್ನು ತಿಳಿಸಿಕೊಡುತ್ತದೆ. ಅದರಲ್ಲಿ 'ವಾಲ್ಟ್ ಡಿಸ್ನಿಲೋಕ'ವಂತೂ ಓದುಗರ ಮುಂದೆ ಬೇರೊಂದು ಪ್ರಪಂಚ-ವನ್ನೇ ತೆರೆದು ತೋರಿಸುತ್ತದೆ.ಅದ್ಭುತ ಕನಸುಗಾರ ವಾಲ್ಟ್ ಡಿಸ್ನಿ ಮಕ್ಕಳ ಮೊದಲನೆಯ ಮಾಯಾಬಜಾರವನ್ನು ಪ್ರಾರಂಭಿಸಿದ್ದು ೧೯೫೫ ರಲ್ಲಿ, ಕ್ಯಾಲಿಫೋರ್ನಿಯಾ ರಾಜ್ಯದ ಅನ್‌ಹೀಮ್ ಎಂಬ ನಗರದಲ್ಲಿ ಎಂಬ ವಿಷಯ ನಮ್ಮಲ್ಲಿ ಬಹಳಷ್ಟು ಜನರಿಗೆ ಗೊತ್ತಿಲ್ಲ. ಇದನ್ನು ತಿಳಿಸಿಕೊಡುತ್ತ 'ವರ್ಷಕ್ಕೆ ಒಂದು ಕೋಟಿಗಿಂತಲೂ ಹೆಚ್ಚು ಸಂಖ್ಯೆಯ ಪ್ರಯಾಣಿಕರು ಅಲ್ಲಿ ಬಂದು ಹೋಗುತ್ತಾರೆಂಬ ಆಶ್ಚರ್ಯದ ಸಂಗತಿಯನ್ನು ಪುರಾಣಿಕರು ತಿಳಿಸುತ್ತಾರೆ. ಮುಂದೆ ೧೯೭೧ ರಲ್ಲಿ ಅವರಿಂದಲೇ ಓರ್ಲ್ಯಾಂಡೊ ನಗರದ ಸಮೀಪ ಮತ್ತೊಂದು ಡಿಸ್ನಿಲೋಕ ಹುಟ್ಟಿದ್ದು ಇವೇ ಮೊದಲಾದ ಅನೇಕ ವಿಷಯುಗಳನ್ನು ಲೇಖಕರು ತಿಳಿಸಿಕೊಡುತ್ತಾರೆ. ಅಲ್ಲಿ ಒಳಗೇನಿದೆಯೆಂಬುದನ್ನು ವಿವರಿಸಲು 'ಹತ್ತು ಹೊತ್ತಗೆಗಳು ಸಾಲವು' ಎನ್ನುವ ಪುರಾಣಿಕರು 'ಅಲ್ಲಿ ಏನಿದೆ ? ಎಂಬ ಪ್ರಶ್ನೆಗೆ ಏನಿಲ್ಲ ? ಎಂಬ ಮರು ಪ್ರಶ್ನೆಯೇ ಉತ್ತರ' ಎಂದು ಹೇಳುತ್ತಾರೆ. ಅವರ ಈ ಶೈಲಿ ಆ ಲೋಕದ ವಿಸ್ಮಯವನ್ನು ಸಮರ್ಥ ರೀತಿಯಲ್ಲಿ ಪರಿಚಯಿಸಿಕೊಡುತ್ತದೆ. ಒಟ್ಟಾರೆ ಇಲ್ಲಿಯ ಲೇಖನಗಳೆಲ್ಲ ಮಕ್ಕಳಿಗೆ ಕೂತಲ್ಲೇ ವಿಶ್ವವನ್ನು ಪರಿಚಯಿಸಿಕೊಡಬಲ್ಲವಾಗಿವೆ.

ಇಲ್ಲಿ ಪರಿಚಯಿಸಲಾದ ಕೃತಿಗಳು ಪುರಾಣಿಕರ ಸಾಹಿತ್ಯದ ವೈವಿಧ್ಯತೆಗೆ ಸಾಕ್ಷಿಗಳೇ ಹೊರತು ಇದೇ ಅವರ ಉತ್ಕೃಷ್ಟ ಸಾಹಿತ್ಯವೆಂದಲ್ಲ. ಇವಿಷ್ಟರ ಮೇಲಿಂದಲೇ ಅವರ ಇಡೀ ಸಾಹಿತ್ಯಶಕ್ತಿಯನ್ನು ಅಳೆಯಲಿಕ್ಕಾಗದು. ಏಕೆಂದರೆ ಇಲ್ಲಿಯ ಕವನಗಳಿಗೆ ಒಂದು ನಿರ್ದಿಷ್ಟ ಉದ್ದೇಶವಿದೆ. ಹಾಗಾಗಿ ಕವಿ ಇಲ್ಲಿ ತನ್ನ ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ಕಾವ್ಯ ರಚಿಸಿಲ್ಲವೆಂದೇ ಹೇಳಬೇಕು. ಇಂಥ ಸಂದರ್ಭಗಳಲ್ಲಿ ಕವಿ ತನ್ನ ಪ್ರತಿಭೆಗೆ ಕಡಿವಾಣ ಹಾಕಿಕೊಳ್ಳಬೇಕಾಗುತ್ತದೆ. ವಿಷಯವ್ಯಾಪ್ತಿಗೊಂದು ವಲಯವನ್ನು ಗೊತ್ತುಮಾಡಿಕೊಳ್ಳಬೇಕಾಗುತ್ತದೆ. ಭಾಷೆಗೆ ವಿಶೇಷ ಸರಳತೆ, ಲಾಲಿತ್ಯ, ಪ್ರಾಸಬದ್ಧತೆಗಳನ್ನು ತಂದುಕೊಳ್ಳಬೇಕಾಗುತ್ತದೆ. ಇವಲ್ಲ ಒಂದು ರೀತಿಯಿಂದ ಮಕ್ಕಳ ಸಾಹಿತ್ಯಕ್ಕಿರುವ ಗುಣಗಳೇ ಆಗಿದ್ದರೂ ಇನ್ನೊಂದು ರೀತಿಯಿಂದ ಪ್ರೌಢ ಕವಿಯ ಸಹಜಕಾವ್ಯ ಪ್ರತಿಭೆಗೆ ತೊಡಿಸಿರುವ ಸಂಕೋಲೆಗಳೂ ಆಗಿವೆಯೆಂಬುದನ್ನು ಪುರಾಣಿಕರ ಮಕ್ಕಳ ಸಾಹಿತ್ಯದ ವಿಮರ್ಶೆಯ ಸಂದರ್ಭದಲ್ಲಿ ಗುರುತಿಸಬೇಕಾಗುತ್ತದೆ.

ಅರ್ಥಪೂರ್ಣ ಶೀರ್ಷಿಕೆಗಳು, ವರ್ಣಮಯ ಚಿತ್ರಗಳು ಮಕ್ಕಳ, ಮನೋಗುಣಕ್ಕೆ ಒಗ್ಗುವ ವಿಚಾರಗಳು, ಒಂದೆಡೆ ಶಿಕ್ಷಣ ಇನ್ನೊಂದೆಡೆ ಮನರಂಜನೆ ನೀಡುವ ಆಶಯ, ಸರಳ ಭಾಷೆ, ಚಮತ್ಕಾರ, ಗೇಯಗುಣ, ಪ್ರಾಸಬದ್ಧತೆಯಿಂದ ಕೂಡಿದ ಶೈಲಿ, ವಿಶ್ವಜ್ಞಾನ, ವಿಜ್ಞಾನ, ಆರೋಗ್ಯ, ಪರಿಸರ ನೈತಿಕತೆ, ರಾಷ್ಟ್ರಾಭಿಮಾನ ಭಾಷಾಭಿಮಾನ, ಗುರುಹಿರಿಯರಲ್ಲಿ ಭಕ್ತಿ ತೋರುವುದು ಇತ್ಯಾದಿ ಮೌಲ್ಯಪ್ರಸಾರ ಹೀಗೆ ಹಲವು ಹತ್ತು ಗುಣಗಳು ಪುರಾಣಿಕರ ಮಕ್ಕಳ ಸಾಹಿತ್ಯದಲ್ಲಿದ್ದು, ಮಕ್ಕಳ ಸಾಹಿತಿಗಳ ಸಾಲಿನಲ್ಲಿ ಪುರಾಣಿಕರಿಗೆ ವಿಶೇಷ ಸ್ಥಾನವನ್ನು ದೊರಕಿಸಿಕೊಟ್ಟಿವೆಯೆನ್ನಬಹುದು.

ಈಗ ಶ್ರೀ ಸಿದ್ಧಯ್ಯ ಪುರಾಣಿಕ ಅವರು ೭೫ ಕ್ಕೆ ಕಾಲಿಡುತ್ತಿದ್ದಾರೆ. ಅವರ ಕುರಿತಾದ ವಿಚಾರಸುಕಿರಣವನ್ನು ಏರ್ಪಡಿಸಿರುವ ನರೇಗಲ್ಲಿನ ಮಹಾವಿದ್ಯಾಲಯವು ೨೫ ಕ್ಕೆ ಕಾಲಿಡುತ್ತಿದೆ. ಮುಂದೆ ನಿಮ್ಮ ಮಹಾವಿದ್ಯಾಲಯವು ತನ್ನ ಸುವರ್ಣಮಹೋತ್ಸವವನ್ನು ಆಚರಿಸುವ ಹೊತ್ತಿಗೆ ಪುರಾಣಿಕರು ಶತಾಯುಷಿಗಳಾಗುತ್ತಾರೆ. ಮತ್ತೆ ನಿಮ್ಮ ಮಹಾವಿದ್ಯಾಲಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಪುರಾಣಿಕರ ಜನ್ಮಶತಮಾನೋ-ತ್ಸವವನ್ನು ಅದ್ದೂರಿಯಿಂದ ಆಚರಿಸುವ ಸೌಭಾಗ್ಯ ನಮ್ಮ-ನಿಮ್ಮೆಲ್ಲರದಾಗಲಿ ಎಂದು ಅಪೇಕ್ಷಿಸುತ್ತೇನೆ.

□□

[ ೨೮–೯–೯೨ನೇ ಸೋಮವಾರ ನರೇಗಲ್ಲಿನಲ್ಲಿ ಜರುಗಿದ ಕಾವ್ಯಾನಂದರ ೭೫ ನೇ ಹುಟ್ಟುಹಬ್ಬ ಮತ್ತು ಅವರ ಮೂರನೇ ವಚನ ಸಂಕಲನ 'ವಚನಾರಾಮ'ದ ಪ್ರಕಟಣೆಯ ಸಂದರ್ಭದಲ್ಲಿನ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ]

# ಕಾವ್ಯಾನಂದರ ವಚನ ಸಾಹಿತ್ಯ

—ಟಿ. ಆರ್. ಚಂದ್ರಶೇಖರ

ಶ್ರೀ ಟಿ. ಆರ್. ಚಂದ್ರಶೇಖರ ಎಂ.ಎ. ಅವರು ಹೊಸಪೇಟೆಯ ವಿಜಯನಗರ ಕಾಲೇಜಿನ ಅರ್ಥಶಾಸ್ತ್ರದ ಪ್ರಾಧ್ಯಾಪಕರು. "ಕಾವ್ಯಾನಂದರ ವಚನ ಸಾಹಿತ್ಯ"ದ ಮೇಲೆ ಇವರಿಗಿರುವ ಆಳವಾದ ಅಭ್ಯಾಸ–ಅನುಭವಗಳು ಉಲ್ಲೇಖಾರ್ಹವಾದವುಗಳು. ಸಾಹಿತ್ಯವೊಂದು ಕಲೆ, ಕಲೆ ಎಲ್ಲರನ್ನೂ ಕೈ ಮಾಡಿ ಕರೆಯುತ್ತದೆಯಂತೆ, ಆದರೆ ಕೆಲವರನ್ನೇ ಆಯ್ದುಕೊಳ್ಳುತ್ತದೆಯಂತೆ. ಹಾಗೇನೇ ಸಾಹಿತ್ಯ ಪ್ರೊ|| ಚಂದ್ರಶೇಖರರನ್ನು ಸಿಲೆಕ್ಟ ಮಾಡಿದೆಯೆಂದರೆ ಅತಿಶಯೋಕ್ತಿಯಲ್ಲ.

ಪ್ರಸ್ತುತ ಪ್ರಬಂಧದಲ್ಲಿ ೧೨ ನೇ ಶ.ದ. ಶರಣರಂತೆ ಕಾವ್ಯಾನಂದರೂ ಅಂಧಶ್ರದ್ಧೆ–ಮೌಢ್ಯತೆಗಳನ್ನು ಖಂಡಿಸಿದ್ದನ್ನು; ಆಷಾಡಭೂತಿತನವನ್ನು ದೂರ ತಳ್ಳಿದ್ದನ್ನೂ; ಮಾನವನ ಬದುಕಿನ ಹೋರಾಟದ ಚಿತ್ರಣಗಳನ್ನೂ, ಸ್ವಾತಂತ್ರ್ಯದ ಪುರಸ್ಕಾರ, ಗುಲಾಮಗಿರಿಯ ಬಗೆಗಿನ ತಿರಸ್ಕಾರ, ಜಾತ್ಯಾತೀತ ದೃಷ್ಟಿಕೋನ, ಸರ್ವೋದ್ಧಾರ, ಸಮಾಜ ವಿಡಂಬನೆ ಮುಂತಾದವುಗಳನ್ನು ಕಾವ್ಯಾನಂದರ ವಚನಗಳೊಂದಿಗೆ ಉದಾಹರಿಸಿದ್ದಾರೆ.

ಕಾವ್ಯಾನಂದರ ವಚನಗಳು ಕೋಮಲವಾದರೂ ಆಕ್ರೋಶದ ಕಿಡಿಕಾರಿ ಕ್ರಾಂತಿಯ ಕಹಳೆಯನ್ನೂದಬಲ್ಲವು ಎಂಬುದನ್ನು ಭಾಷೆಯ ಚಮತ್ಕಾರವನ್ನೂ ಓದುಗನ ಚಿತ್ತದಲ್ಲಿ ಅಚ್ಚೊತ್ತುವಂತೆ, ಮನಸ್ಸಿಗೆ ನಾಟುವಂತೆ ಲೇಖಕರು ಹೇಳಿದ್ದಲ್ಲಿ ಗಮನಾರ್ಹವಾದುದು.

—ಸಂ.

ಗುಡಿಸಲುಗಳಿಗೆ ಬಾಯಿ ಬಂದಿದೆಯೀಗ
ಅನ್ಯಾಯದ ಬಾಯಿ ಮುಚ್ಚಲೇ ಬೇಕಿನ್ನು !
ಬರಿ ಹೊಟ್ಟೆಗಳ ಸಿಟ್ಟು ರಟ್ಟೆ ಗಿಳಿಯುತ್ತಿದೆಯೀಗ
ಬುಟ್ಟುಗಳ ಸೊಕ್ಕು ಇಳಿಯಲೇ ಬೇಕಿನ್ನು !
ಎಲುವು ಗೂಡುಗಳಿಂದ ವಿಲಯಾಗ್ನಿ ಸಿಡಿಯಲಿದೆ
ಬಲದ ಕೋಟೆಗಳೆಲ್ಲ ಭಸ್ಮವಾಗಲೇ ಬೇಕಿನ್ನು

ಸ್ವತಂತ್ರಧೀರ ಸಿದ್ಧೇಶ್ವರ,
ಕುರಿಗಳಿಗೂ ಇರಿವಶಕ್ತಿ ಬಂದಿದೆಯೀಗ
ತೋಳಗಳ ಸದ್ದು ಅಡಗಲೇ ಬೇಕಿನ್ನು (ವ.ನಂ. ೩೧೦)

* * * *

ವಚನ ಸಾಹಿತ್ಯವೆಂದ ಕೂಡಲೆ ನಮಗೆ ೧೨ನೇ ಶತಮಾನದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ ಮುಂತಾದ ಶಿವಶರಣರ ವಚನಗಳ ನೆನಪು ಬಂದರೆ ಆಶ್ಚರ್ಯವಿಲ್ಲ. ಏಕೆಂದರೆ, ೧೨ನೇ ಶತನಮಾನದಲ್ಲಿ ಶಿವಶರಣರಿಂದ ರಚಿತವಾದವುಗಳು ಮಾತ್ರ 'ವಚನ ಸಾಹಿತ್ಯ'ವೆಂದು ಗುರುತಿಸುವ ಪರಿಪಾಠ ಬೆಳೆದು ಬಂದಿದೆ. ವಾಸ್ತವವಾಗಿ ೧೨ನೇ ಶತಮಾನದಲ್ಲಿ ಶಿವಶರಣರು ವಚನಗಳನ್ನು 'ಸಾಹಿತ್ಯ'ವೆಂದು ರಚಿಸಲಿಲ್ಲ. ವಚನ ಸಾಹಿತ್ಯದ ಹಿಂದಿದ್ದ ಮೂಲ ಪ್ರೇರಣೆಯು ಸಾಮಾಜಿಕವಾದುದಾಗಿತ್ತು. ಆದ್ದರಿಂದ ವಚನಗಳನ್ನು ಸಾಹಿತ್ಯವೆಂದು ನೋಡುವುದಕ್ಕಿಂತ 'ಸಾಮಾಜಿಕ ವಿಚಾರ'ವೆಂದು ಅಥವಾ ಡಾ|| ಎಂ. ಚಿದಾನಂದ ಮೂರ್ತಿಗಳು ಸರಿಯಾಗೇ ಗುರುತಿಸಿರುವಂತೆ 'ಸಮಾಜ ದರ್ಶನ'(Social Philosophy) ಎಂದೇ ನೋಡುವುದು ಸೂಕ್ತ.[೧] ವಚನ ಸಾಹಿತ್ಯವು 'ಶಾಸ್ತ್ರ' ಅಥವಾ 'ಸಂಹಿತೆ'ಯಲ್ಲಿ ಅನುಭವ ಮತ್ತು ಅನುಭಾವಗಳ ಚಿಂತನೆಯು ಅಭಿವ್ಯಕ್ತಿಯಾಗಿ ವಚನಗಳು ಮೂಡಿ ಬಂದವು. ಜಡ್ಡುಗಟ್ಟಿದ್ದ ಸಾಮಾಜಿಕ ವ್ಯವಸ್ಥೆಗೆ 'ಚಾಲನೆ'ಯನ್ನು ಒಂದು ರೀತಿಯ 'ಶಾಕ್' ಅನ್ನು ವಚನಕಾರರು ನೀಡಿದರು. "ಸ್ಥಾವರಕಳಿವುಂಟು; ಜಂಗಮಕಳಿವಿಲ್ಲ" ಎಂಬ ಚಲನಶೀಲ ಧೋರಣೆಯು (Dynomism) ವಚನಕಾರರ Manifesto ಆಗಿತ್ತು. ಚಲನಶೀಲ ಗುಣದಿಂದಾಗಿಯೆ ವಚನ ಸಾಹಿತ್ಯವು ೮೦೦ ವರ್ಷಗಳ ನಂತರವೂ ಪ್ರಸ್ತುತವಾಗಿದೆ ಮತ್ತು ಪ್ರೇರಣೆಯ ಬಿಂದುವಾಗಿದೆ.

ವಚನಕಾರರು ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿದರು–ಬೆಳೆಸಿದರು–ಬೆಳಗಿಸಿದರು. ಸಮಾನತೆ, ಸ್ವಾವಲಂಬನೆ, ಸ್ವಾತಂತ್ರ್ಯ ಮುಂತಾದ ಗುಣಗಳನ್ನು ಜನತೆಯಲ್ಲಿ ಬೆಳೆಸಲು ವಚನಕಾರರು ಶ್ರಮಿಸಿದರು.[೨] ಮಹಿಳೆಗೆ ಉನ್ನತ ಸ್ಥಾನ–ಮಾನವನ್ನು ವಚನಕಾರರು ನೀಡಿದರು. ಬದುಕಿನ ಎಲ್ಲಾ ಮಗ್ಗಲುಗಳನ್ನೂ ವಚನಕಾರರು ಪರೀಕ್ಷೆಗೆ ಒಡ್ಡಿದರು. ಅಂಧಶ್ರದ್ಧೆ, ಅಸ್ಪೃಶ್ಯತೆ, ಸಂಗ್ರಹ ಪ್ರವೃತ್ತಿ– ಮುಂತಾದ ಅನಿಷ್ಟ ಆಚರಣೆಗಳು ವಚನಕಾರರ ಉಗ್ರ ಟೀಕೆಗೆ ಗುರಿಯಾದವು. ವಿಧಿ–ನಿಷೇಧಗಳು, ಮಡಿ–ಮೈಲಿಗೆ; ಮೇಲು–ಕೀಳು, ಸೂತಕ ಮುಂತಾದ ಕಟ್ಟು–ಪಾಡುಗಳಿಗೆ ವಚನಕಾರರು ಬಲಿಯಾಗಲಿಲ್ಲ.

ಇಂತಹ ಜನ ಮುಖಿ–ಚಲನಶೀಲ ಬರಹದ ವಿಧಾನವನ್ನು ೨೦ನೇ ಶತಮಾನದಲ್ಲಿ ಪ್ರಯೋಗಿಸುವ ಸಾಹಸವನ್ನು ಹಲವಾರು ಕನ್ನಡ ಬರಹಗಾರರು ನಡೆಸಿದರು. ೨೦ನೇ ಶತಮಾನದ 'ಸಮಾಜ' ಹಾಗೂ ಬದುಕನ್ನು 'ವಚನ' ವಿಧಾನದ ಮೂಲಕ ಪರಿಶೀಲಿಸಲು ಪ್ರಯತ್ನಿಸಿದವರಲ್ಲಿ ಮುಖ್ಯರಾದವರು ಎಸ್. ವಿ. ರಂಗಣ್ಣ, ಎಸ್. ವಿ. ಪರಮೇಶ್ವರಭಟ್ಟ, ಮಹದೇವ ಬಣಗಾರ ಮುಂತಾದವರು. ಇಂತಹ ಪ್ರಯೋಗದಲ್ಲಿ ಹಿರಿದಾದ ಸಿದ್ಧಿ–ಸಾಧನೆ ಪಡೆದವರೆಂದರೆ ಸಿದ್ಧಯ್ಯ ಪುರಾಣಿಕರು ಅರ್ಥಾತ್ ಕಾವ್ಯಾನಂದರು. ೧೨ನೇ ಶತಮಾನದಲ್ಲಿ ಮೇರು ಸದೃಶವಾಗಿ ಮೆರದ 'ವಚನ' ವಿಧಾನವನ್ನು ಶ್ರೀ ಸಿದ್ಧಯ್ಯ ಪುರಾಣಿಕರು ಅನುಸರಿಸಿದರೆ ಹೊರತು ಅನುಕರಣೆ ಮಾಡಲಿಲ್ಲ. ವಚನ ವಿಧಾನವನ್ನು ೨೦ನೇ ಶತಮಾನದ ಅರಿವು–ಅನುಭಾವಗಳ ತೆಕ್ಕೆಗೆ ಒಗ್ಗಿಸಿಕೊಳ್ಳುವುದರಲ್ಲಿ–ಬಗ್ಗಿಸಿಕೊಳ್ಳುವುದರಲ್ಲಿ ಕಾವ್ಯಾನಂದರು ಸಂಪೂರ್ಣವಾಗಿ ಯಶಸ್ವಿಯಾಗಿದ್ದಾರೆ.

ಈ ಪ್ರಬಂಧದಲ್ಲಿ ನಾನು ಕಾವ್ಯಾನಂದರ ವಚನ ಸಾಹಿತ್ಯದ ಕೆಲವು ವಿಶಿಷ್ಟ ಗುಣಗಳನ್ನು ಗುರುತಿಸಲು ಪ್ರಯತ್ನಿಸಿದ್ದೇನೆ.

**'ಸ್ವತಂತ್ರ ಧೀರ ಸಿದ್ಧೇಶ್ವರ' ಅಂಕಿತ:**

ವ್ಯಕ್ತಿ ವಿಶಿಷ್ಟತೆ ಅಥವಾ ವ್ಯಕ್ತಿವಾದ (Individualism) ತನ್ನ ಔನ್ನತ್ಯವನ್ನು ೧೨ನೇ ಶತಮಾನದ ವಚನ ಸಾಹಿತ್ಯದಲ್ಲಿ ಮೆರೆದಿರುವುದು ವಚನಗಳ ಪ್ರಥಮ ಅಧ್ಯಯನದಿಂದಲೇ ಕಂಡುಬರುತ್ತದೆ. ಪ್ರತಿಯೊಬ್ಬ

ವಚನಕಾರರು ತಮ್ಮ ವೈಯಕ್ತಿಕ ಛಾಪನ್ನು ತಮ್ಮ ಅಂಕಿತಗಳ ಮೂಲಕ ಒತ್ತಿ ಬಿಟ್ಟಿರುತ್ತಾರೆ. ಈ ವಚನ ಪರಂಪರೆಯನ್ನು ಕಾವ್ಯಾನಂದರು ತಮ್ಮ ವಚನಗಳಲ್ಲಿ ಮುಂದುವರಿಸಿದ್ದಾರೆ. ೧೨ನೇ ಶತಮಾನದ ವಚನಕಾರರು ಮುಕ್ತ ಸಮಾಜವೊಂದರ ಕನಸನ್ನ ಕಂಡಿದ್ದರು. ಸ್ವಾತಂತ್ರ್ಯ-ಸ್ವಾವಲಂಬನೆಗಳು ೧೨ನೇ ಶತಮಾನದ ವಚನ ಸಾಹಿತ್ಯದ ಎರಡು ಆಧಾರ ಸ್ತಂಭಗಳಾಗಿವೆ.[೩]

'ಸ್ವಾತಂತ್ರ್ಯ' ವು ೨೦ನೇ ಶತಮಾನದಲ್ಲಿ ಅತ್ಯುನ್ನತ ಮೌಲ್ಯವಾಗಿ ರೂಪುಗೊಂಡಿದೆ. ಈ ಶತಮಾನದ ಹತ್ತು-ಹಲವು ಹೋರಾಟ, ಚಳುವಳಿ-ಕ್ರಾಂತಿಗಳ ಹಿಂದಿನ ಪ್ರೇರಣೆ ಸ್ವಾತಂತ್ರ್ಯವಾಗಿದೆ. ವಚನಕಾರರ 'ವೀರ-ಧೀರ' ಗುಣಗಳ ಬಗ್ಗೆ ಇಲ್ಲಿ ವಿವರಿಸುವ ಅವಶ್ಯಕತೆ ಇಲ್ಲ. ಇಂತಹ 'ಸ್ವಾತಂತ್ರ್ಯ-ಧೀರ, ಗುಣಗಳನ್ನೇ ಕಾವ್ಯಾನಂದರು ತಮ್ಮ ವಚನಗಳ ಅಂಕಿತ ಮಾಡಿಕೊಂಡಿರುವುದು ಅತ್ಯಂತ ಔಚಿತ್ಯ ಪೂರ್ಣವಾದುದಾಗಿದೆ. ಶ್ರೀ ಸಿದ್ಧಯ್ಯ ಪುರಾಣಿಕರ ಬದುಕಿನ ಹೋರಾಟವನ್ನು ಗಮನಿಸಿದವರಿಗೆ ಅವರು 'ಧೀರತ್ವ'ವನ್ನು ಯಾಕೆ ಅಂಕಿತ ಮಾಡಿಕೊಂಡಿದ್ದಾರೆ ಎಂಬುದು ಅರ್ಥವಾಗುತ್ತದೆ. ಸ್ವಾತಂತ್ರ್ಯವು ಅರ್ಥವತ್ತಾಗಬೇಕಾದರೆ-ವೀರ್ಯವತ್ತಾಗಬೇಕಾದರೆ ಅದು 'ಧೀರತ್ವ'ವನ್ನು ಒಳಗೊಂಡಿರಬೇಕು. ಹೇಡಿಗಳಿಗೆ ಸ್ವಾತಂತ್ರ್ಯ ದೊರೆಯುವುದಿಲ್ಲ. 'ಗುಲಾಮತನ' ಮತ್ತು 'ಹೇಡಿತನ'ಗಳು ಹೇಗೆ ಜೊತೆಯಾಗಿರುತ್ತವೆಯೊ ಹಾಗೆಯೆ 'ಸ್ವಾತಂತ್ರ್ಯ' ಹಾಗೂ 'ಧೀರತ್ವ'ಗಳು ಜೊತೆ-ಜೊತೆಯಾಗೆ ಇರಬೇಕು. ಅಂದಾಗ ಮಾತ್ರ ಸ್ವಾತಂತ್ರ್ಯಕ್ಕೆ ಒಂದು ಅರ್ಥವುಂಟು ಅದಕ್ಕೆ ಸಾರ್ಥಕ್ಯವುಂಟು.

ಸ್ವಾತಂತ್ರ್ಯವನ್ನು ಕುರಿತು ಕಾವ್ಯಾನಂದರು ಒಂದು ವಚನದಲ್ಲಿ ಹೀಗೆ ನುಡಿದಿದ್ದಾರೆ.

"ಓ ಸ್ವಾತಂತ್ರ್ಯವೆ
ಪರಮಾತ್ಮನಾತ್ಮವೆ
ಬದುಕಿನ ಹೆಡೆಯ
ನಿನ್ನ ಪ್ರಾಪ್ತಿ ಜೀವನ, ನಿನ್ನ ಲುಪ್ತಿ ಮರಣ
ನಿನ್ನ ಒಪ್ಪು ಒಳಿತು, ನಿನ್ನ ತಪ್ಪು ಕೆಡುಕು
ನಿನ್ನ ಹಾಸ ವಿಕಾಸ, ನಿನ್ನ ರೋಷ ವಿನಾಶ
ನಿನ್ನ ಮಿತಿಯಲ್ಲಿ ಹಿತ, ಅತಿಯಲ್ಲಿ ವಿಹಿತ
ನಿನ್ನ ಸದುಪಯೋಗ ಸ್ವರ್ಗ, ನಿನ್ನ ದುರುಪಯೋಗ ನರಕ
ಎಚ್ಚರಿರುವವರಿಗೆ ನೀನು ವರದಾನ, ಗೊರಕೆ ಹೊಡೆವವರಿಗೆ ಬರಿಶೂನ್ಯ
.................................
................................." (ವ.೪೫೭)

ತಮ್ಮ ಅದಮ್ಯ ಸ್ವಾತಂತ್ರ್ಯಾಪೇಕ್ಷೆ ಬಗ್ಗೆ ಅವರು ಹೀಗೆ ನುಡಿಯುತ್ತಾರೆ.

.................................
.................................
ದಾಸ್ಯ ದೀಪಕ್ಕೆರಗಿ ಸುಡುವ ಶಲಭವಲ್ಲ
ದಾಸ್ಯ ದೈತ್ಯನ ತಲೆಕುಕ್ಕುವ ಶರಭ ನಾನು
ಪಂಜರದ ಪಕ್ಷಿಯಲ್ಲಿ
ಸಿಡಿಲ ಹಕ್ಕಿ ನನ್ನ ಮುಕ್ತಮನ!
ಸ್ವಾತಂತ್ರ್ಯದಾಹ ನಿರಂತನ!
.................................

.......................................
.......................................         (ವ. ನಂ. ೪೩೭)

ಹೀಗೆ 'ಸ್ವತಂತ್ರಧೀರ ಸಿದ್ಧೇಶ್ವರ' ಅಂಕಿತವೇ ಕಾವ್ಯಾನಂದರ ವಚನಸಾಹಿತ್ಯದ ಗಟ್ಟಿತನವನ್ನು ಸತ್ವವನ್ನು ತೋರಿಸುತ್ತದೆ.

*   *   *   *

**ಗತಕಾಲದ ಬಗ್ಗೆ ಕಾವ್ಯಾನಂದರ ದೃಷ್ಟಿಕೋನ :**

ಇಂದು ಭಾರತದಲ್ಲಿ ಇತಿಹಾಸದ ಬಗೆಗಿನ ದೃಷ್ಟಿಕೋನದ ಬಗ್ಗೆ ಸಾಕಷ್ಟು ಬಿಸಿ ಬಿಸಿಯಾದ ವಾದ-ವಿವಾದ-ಚರ್ಚೆ ದೇಶಾದ್ಯಂತ ನಡೆದಿದೆ. ಭಾರತದ ಇತಿಹಾಸವನ್ನು ಪುನರ್ ರಚಿಸುವ ಮಾತು ಕೇಳಿ ಬರುತ್ತಿದೆ. ರಾಷ್ಟ್ರೀಯತೆಯ ಆಧಾರದ ಮೇಲೆ ಇತಿಹಾಸ ರಚಿಸುವ ಭಾವುಕ ಚಳುವಳಿಯ ಸಂಘಟನೆ ನಡೆದಿದೆ ಗತಕಾಲದ ಬಗ್ಗೆ 'ಅತಿ'ಎನ್ನ ಬಹುದಾದ ಎರಡು ದೃಷ್ಟಿಕೋನಗಳನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

೧. ಗತಕಾಲದ್ದೆಲ್ಲವೂ ಶ್ರೇಷ್ಠವಾದುದು, ಜೇಷ್ಠವಾದುದು ಎಂಬ ಗತಕಾಲದ ವೈಭವೀಕರಣ ದೃಷ್ಟಿಕೋನ ಒಂದು.

೨. ಗತಕಾಲದ್ದೆಲ್ಲವೂ ಪ್ರತಿಗಾಮಿಯಾದುದು, ತ್ಯಾಜ್ಯವಾದುದು ಎಂಬ ಗತಕಾಲದ ನಿರಾಕರಣೆಯ ದೃಷ್ಟಿಕೋನ ಎರಡನೆಯದು. ಪ್ರಾಂಜಲ ಮನಸ್ಸೊಂದು ಇತಿಹಾಸದ ಬಗ್ಗೆ ಯಾವ ಬಗೆಯ ಭಾವನೆ ತಳೆಯ ಬೇಕು. ಯಾವ ಬಗೆಯ ಧೋರಣೆ ತಳೆಯಬೇಕು ಎಂಬುದರ ಬಗ್ಗೆ ಕಾವ್ಯಾನಂದರ ವಚನವೊಂದು ಮಾರ್ಗದರ್ಶಿ ಯಾಗ ಬಲ್ಲುದಾಗಿದೆ. ಕಾವ್ಯಾನಂದರಿಗೆ ಗತಕಾಲದ ವ್ಯಸನ (obsession) ಇಲ್ಲ, ಗತಕಾಲದ ಬಗ್ಗೆ ಅತ್ಯಂತ ವಸ್ತು ನಿಷ್ಠ (objective) ದೃಷ್ಟಿಕೋನವನ್ನು ಕಾವ್ಯಾನಂದರು ತಳೆದಿದ್ದಾರೆ. ಅತ್ಯಂತ ಚಲನ-ಶೀಲವೂ-ಆರೋಗ್ಯಕಾರಿಯೂ ಆದ ಗತಕಾಲದ ಬಗೆಗಿನ ಈ ದೃಷ್ಟಿಕೋನ ಇಂದು ನಮಗೆ ಹೆಚ್ಚು ಪ್ರಸ್ತುತವಾಗಿದೆ.

ಗತಕಾಲದ ಬಗೆಗಿನ ಕಾವ್ಯಾನಂದರ ದೃಷ್ಟಿಕೋನವನ್ನು ತೋರಿಸುವ ವಚನ ಹೀಗಿದೆ.

"ಗತಕಾಲವೆ, ನಿನ್ನನ್ನು ಪ್ರೀತಿಸಬಲ್ಲೆ-ಪೂಜಿಸಲಾರೆ, ನಾನು.
ವರ್ತಮಾನವೆ, ನಿನ್ನನ್ನು ಆಧರಿಸಬಲ್ಲೆ-ಅರ್ಚಿಸಲಾರೆ, ನಾನು.
ಭವಿಷ್ಯತ್ತೆ, ನಿನ್ನನ್ನು ಸ್ವಾಗತಿಸಬಲ್ಲೆ-ಸಮಾರಾಧಿಸೆ, ನಾನು.
ಕಾಲವೆ, ನಿನ್ನ ಕೆಳೆಬೇಕು, ಆಳಿಕೆ ಬೇಡ, ನನಗೆ.
ನಿನ್ನ ಪ್ರವಾಹ ಕೊಂಡೊಯ್ದತ್ತ ತೇಲಲು
ಸತ್ತ ಮೀನೆನಲ್ಲ ನಾನು!
ನಿನಗೆ ಬೇಕಾದತ್ತ ನೀನೆಳೆ! ನನಗೆ ಬೇಕಾದತ್ತ ನಾನೀಸುವೆ.
ಪುರಂದರೋಪದೇಶ ಪ್ರಭಾವದಿಂದ ಈಸುವೆ ಇದ್ದು ಜೈಸುವೆ.
'ಕಾಲೋ ಜಗದ್ಭಕ್ಷಕಃ' ಎಂದು ಎಚ್ಚರಿಸುವಿಯೇನು?
'ತಮಾರೋಹಂತಿ ಕವಯಃ' ಎಂದು ಉತ್ತರಿಸಲೆ ನಾನು?
ಬೇಡ, ನೀನು ಸ್ವತಂತ್ರಧೀರ ಸಿದ್ಧೇಶ್ವರನ ಸ್ವಯಂ ಸೇವಕ.
ನಾನೂ ಅವನ ಪಾದಾರಾಧಕ.
ಏಕೆ ನಮ್ಮಿಬ್ಬರಲಿ ಸೆಣಸಿನ-ಕಿನಿಸಿನ ಕಂದಕ?"         (ವ. ೪೮೧)

'ಕಾಲ ನಿನ್ನ ಕೆಳೆಬೇಕು, ಆಳಿಕೆ ಬೇಡ, ನನಗೆ'-ಎಂಬ ಕಾವ್ಯಾನಂದರ ನುಡಿ 'ವಚನೋದ್ಯಾನ'ದ ಕಳಸ ಪ್ರಧಾನ ನುಡಿಯಾಗಿದೆ. ಇತಿಹಾಸವನ್ನು ಯಾರೂ ಬರೆಯುವುದಿಲ್ಲ. ಇತಿಹಾಸವನ್ನು ಕೇವಲ ದಾಖಲಿಸಲಾಗುತ್ತದೆ.

ಇತಿಹಾಸವನ್ನು ತಮ್ಮ ಮೂಗಿನ ನೇರಕ್ಕೆ ವಿಕೃತಿಗೊಳಿಸುವುದಾದರೆ ಅದಕ್ಕಿಂತ ಇತಿಹಾಸಕ್ಕೆ ದೊಡ್ಡ ಅಪಚಾರ ಬೇರೆ ಇರಲಾರದು, ಕಾವ್ಯಾನಂದರು ಇತಿಹಾಸವನ್ನು ಅದರ ಎಲ್ಲಾ ನಿಷ್ಠುರ ಸತ್ಯಗಳೊಂದಿಗೆ ಒಪ್ಪಿಕೊಂಡವರು, ಇತಿಹಾಸವನ್ನು ಎದುರಿಸುವ 'ಸ್ವತಂತ್ರಧೀರ' ಛಾತಿ ಕಾವ್ಯಾನಂದರಿಗಿದೆ. ಇತಿಹಾಸದ ಬಗ್ಗೆ ಇಂತಹ ದೃಷ್ಟಿಕೋನವನ್ನು ಇಂದು ಬೆಳೆಸುವ ಅವಶ್ಯಕತೆ ಇದೆ. ಕಾವ್ಯಾನಂದರೆ ಹೇಳುವಂತೆ 'ಇತಿಹಾಸವನ್ನು ಪ್ರೀತಿಸಬೇಕು, ಪೂಜಿಸಬಾರದು.'

**ಜಾತ್ಯಾತೀತ ದೃಷ್ಟಿಕೋನ:**

ಇಂದು ವಿಶ್ವಾದ್ಯಂತ ಧೀಮಂತ-ದಾರ್ಶನಿಕರೆಲ್ಲರನ್ನೂ ಮತ್ತು ಅವರ ವಿಚಾರಗಳನ್ನು 'ದೇಶ-ಕಾಲ-ವರ್ಗ-ಪಂಥ'ಗಳ ಚೌಕಟ್ಟಿಗೆ ಕಟ್ಟಿ ಹಾಕುವ-ಸೀಮಿತಗೊಳಿಸುವ ಪ್ರವೃತ್ತಿ ಕಂಡು ಬರುತ್ತಿದೆ. ಬಸವಣ್ಣನನ್ನೂ ಹೀಗೆ ಒಂದು ಪ್ರದೇಶದ, ಒಂದು ವರ್ಗದ, ಒಂದು ಪಂಥದ ಚೌಕಟ್ಟಿಗೆ ಕಟ್ಟುವ ಪ್ರಯತ್ನಗಳೂ ನಡೆದಿವೆ. ವಚನ ಸಾಹಿತ್ಯವನ್ನೂ ಸಹ ಹೀಗೆ ಅತ್ಯಂತ ಸೀಮಿತ ಚೌಕಟ್ಟಿಗೆ ಬಂಧಿಸುವ ದುರದೃಷ್ಟ ಪ್ರಯತ್ನ ನಡೆದಿದೆ. 'ಶಿವಾನುಭವ ಚಿಂತನೆ'—'ವೀರಶೈವ ಧರ್ಮತತ್ವ'ಗಳು ಮಾತ್ರ ವಚನ ಸಾಹಿತ್ಯ ಎಂಬ ಗೊಡ್ಡು ವ್ಯಾಖ್ಯಾನಗಳೂ ಇದ್ದಾವೆ. ಆದರೆ ಕಾವ್ಯಾನಂದರ ವಚನ ಸಾಹಿತ್ಯವು ೧೨ ನೇ ಶತಮಾನದ ವಚನ ಸಾಹಿತ್ಯಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ 'ಜಾತ್ಯಾತೀತ' ಗುಣವನ್ನು ಮೈಗೂಡಿಸಿಕೊಂಡು ಬಿಟ್ಟಿದೆ. 'ದೇಶ, ಕಾಲ, ವರ್ಗ ಮತ್ತು ಪಂಥ'ಗಳೆಂಬ ಸೀಮಿತ ಚೌಕಟ್ಟಿನಿಂದ ಕಾವ್ಯಾನಂದರ ವಚನ ಸಾಹಿತ್ಯವು 'ಅತೀತ'ವಾಗಿದೆ.

'ವಚನೋದ್ಯಾನ'ಕ್ಕೆ ಮುನ್ನುಡಿ ಬರೆದಿರುವ ಡಾ| ಹಾ. ಮಾ. ನಾಯಕ ಸರಿಯಾಗೆ ಗುರುತಿಸಿರುವಂತೆ 'ವೀರಶೈವ ಧರ್ಮತತ್ವ'—'ಶಿವಾನುಭವ ಚಿಂತನೆ'ಗಳೇ ವಚನ ಸಾಹಿತ್ಯವಲ್ಲ ಕಾವ್ಯಾನಂದರ ವಚನಗಳು ಮುಕ್ತ ಸಮಾಜದ-ಮುಕ್ತ ಮಾನವನ ಬದುಕನ್ನು ಕುರಿತ ಮುಕ್ತ ಗೀತೆಗಳಾಗಿವೆ. ರೂಢಿಗತವಾದ ಮತ್ತು ಸಂಪ್ರದಾಯ ನಿಷ್ಟವಾದ 'ದೈವೋಪಾಸನೆ' (ಏಕ)ಯ ಸಂಕೋಲೆಯಿಂದ ಕಾವ್ಯಾನಂದರ ವಚನ ಸಾಹಿತ್ಯವು ಮುಕ್ತವಾಗಿದೆ. ಜೀವನ ದರ್ಶನ ಬಗ್ಗೆ ಕಾವ್ಯಾನಂದರ ವಿಚಾರವನ್ನು ಹೇಳುವ ಈ ವಚನ ನೋಡಿ.

ಋತುವ ತೋರುವ ಮತವು ಯಾವುದಾದರೇನು?
ಗುರಿಗೆ ಸೇರುವ ಪಥವು ಯಾವುದಾದರೇನು?
ಮೌಢ್ಯದ ಗ್ರಂಥಿಯನು ಬಿಚ್ಚುವ ಗ್ರಂಥ ಯಾವುದಾದರೇನು?
ಬಂಧುತ್ವವನು ಬೆಳೆಸುವ ಪಂಥ ಯಾವುದಾದರೇನು?
ಮನವ ಘನಗೊಳಿಸುವ ಮಂತ್ರ ಯಾವುದಾದರೇನು?
ಉದ್ಯೋಗಗಳ ಹೆಚ್ಚಿಸುವ ತಂತ್ರ ಯಾವುದಾದರೇನು?
ಮೈಗೆ ಒಪ್ಪುವ ವೇಷ ಯಾವುದಾದರೇನು?
ಜನಕ್ಕೆ ಒದಗುವ ಕೋಶ ಯಾವುದಾದರೇನು?
ಸ್ವತಂತ್ರಧೀರ ಸಿದ್ಧೇಶ್ವರ
ಜೀವನಕ್ಕೆ ಸವಿ ಬೆಳಕುಗಳನ್ನು ಬರಿಸುವ
ಜೀವನ ದರ್ಶನ ಯಾವುದಾದರೇನು? (ವ. ೪೩೯)

ಜಾತ್ಯಾತೀತ ಗುಣವನ್ನು ರಕ್ತಗತ ಮಾಡಿಕೊಂಡಿರುವ ಈ ವಚನ ನೋಡಿ.

ಕರುಣೆಯೆ ಕಾಶಿ, ದಯೆಯೆ ಗಯೆ
ಕನಿಕರವೆ ಕಾಂಚಿ, ಕೇದಾರಗಳಯ್ಯ
ಪ್ರೀತಿ ಜ್ಯೋತಿರ್ಲಿಂಗ, ಮಮತೆ ಮಕ್ಕಾಮದೀನ

ಭ್ರಾತೃತ್ವವೇ ಬೆತ್ಲೆಹೇಮ್ ಕಂಡಯ್ಯ,
ಕಲ್ಯಾಣವೇ ಕಲ್ಯಾಣ, ಔದಾರ್ಯವೇ ಉಡುಪಿ.
ಸದ್ಗುಣಗಳೇ ಶೃಂಗೇರಿ, ಶ್ರವಣ ಬೆಳಗೊಳಗಳ
ಶ್ರದ್ಧಾತರಂಗವೇ ಗಂಗೆ, ಯಮುನೆ, ತುಂಗಭದ್ರೆ,
ಪಾವನತೆ ಕಾವೇರಿ, ನಿರ್ಮಲತೆ ನರ್ಮದೆ
ಶುಭ್ರ ಶೀಲವೆ ಕೃಷ್ಣೆ ಗೋದಾವರಿಗಳಯ್ಯ
ಸ್ವತಂತ್ರಧೀರ ಸಿದ್ಧೇಶ್ವರ
ಜೀವಿಯಿದ್ದೆಡೆ ಕ್ಷೇತ್ರ, ಹೃದಯವಿದ್ದೆಡೆ ತೀರ್ಥ
ಸದ್ಭಾವ, ಸತ್ಕರ್ಮಗಳಿದ್ದೆಡೆಯೊಳೆ ಸದ್ಧರ್ಮವಯ್ಯ. (ವ. ೪೪೦)

ಮತೀಯವೆನ್ನಬಹುದಾದ ಅಂಶಗಳು ಕಾವ್ಯಾನಂದರ ವಚನ ಸಾಹಿತ್ಯದಲ್ಲಿ ಲವಶೇಷವೂ ಇಲ್ಲ. ಈ ದೃಷ್ಟಿಯಿಂದಲೆ ಕಾವ್ಯಾನಂದರು 'ವಿಶ್ವಗೇಹ', 'ವಿಶ್ವದೇಹ', 'ವಿಶ್ವಾತ್ಮ'ರಾಗಿ ಬಿಡುತ್ತಾರೆ. ಕಾವ್ಯಾನಂದರು ದೇವರನ್ನು ಪರಿಭಾವಿಸುವ ಬಗೆ ಹೇಗೆ?

ತಾಯಿಯಾಗಿ ಕಂಡೆ,
ತಂದೆಯಾಗಿ ಕಂಡೆ,
ಗುರುವಾಗಿ ಕಂಡೆ,
ಅರಿವಾಗಿ ಕಂಡೆ,
ತರುವಾಗಿ, ಗಿರಿಯಾಗಿ, ದರಿಯಾಗಿ ಕಂಡೆ.
ಮಗುವಾಗಿ, ಮಿಗವಾಗಿ, ಖಗವಾಗಿ ಕಂಡೆ.
ಜಲವಾಗಿ, ಸ್ಥಲವಾಗಿ, ವಿಯತ್ತಲಯವಾಗಿ ಕಂಡೆ!
ಏನೇನಾಗಿ ಕಂಡೆ, ಏನೇನಾಗಿ ಕಾಣಲಿಲ್ಲವಯ್ಯಾ ನೀನು?
ಅನಂತರೂಪಗಳಲ್ಲಿ ನೀನು ಕಂಡು ಕಾಣೆವೆಂಬುದು
ಕಣ್ಣಿದ್ದೂ ಕಾಣದವರ ವಾಣಿಯಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರ. (ವ. ೨೨)

ಮೇಲಿನ ವಚನದ ವಿಚಾರದ ಸಮರ್ಥನೆಯು ಅತ್ಯಂತ ಸಮರ್ಥವಾಗಿ ಕೆಳಗಿನ ವಚನದಲ್ಲಿ ನಡೆಯುತ್ತದೆ.

ಕಣ್ಣು ತೆರೆಯೆ ವಿಶ್ವಲಿಂಗ ದರ್ಶನ. (ಭೌತಿಕ ಪ್ರಪಂಚ)
ಉಸಿರಾಡಿಸೆ ವಾಯುಲಿಂಗ ದರ್ಶನ. (ಗಾಳಿ)
ಹಸಿವಾಗೆ ಅಗ್ನಿಲಿಂಗದ ದರ್ಶನ. (ಅನ್ನ)
ತೃಷೆಯಾಗೆ ಜಲಲಿಂಗದ ದರ್ಶನ. (ನೀರು)
ನಿದ್ದೆ ಬಂದೊಡೆನೆಲದ ಲಿಂಗದ ನೆನಪು ನೋಡಯ್ಯಾ (ಮಣ್ಣು)
'ಲಿಂಗ ಮಧ್ಯೆ ಜಗತ್ಸರ್ವಂ' ಎಂಬುದು ನಿಜವಾದರೆ
ಎನ್ನನೇಕೆ ಲಿಂಗವಾಗಿಸಿಲ್ಲವಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ. (ವ. ೧೪)

ಕಾವ್ಯಾನಂದರು ಯಾವ ರೂಪದಲ್ಲಿ ದೇವರನ್ನು ಕಾಣುತ್ತಾರೆ? ಈ ವಚನ ನೋಡಿ.

"ಭಕ್ತ ಹಿತಾರ್ಥವಾಗಿ ಇದುವರೆಗೆ
ಏನೇನೋ ಅವತಾರಗಳನ್ನು ಎತ್ತಿರುವೆಯಂತೆ-

ಈಗ ಹೊಸ ಅವತಾರಗಳನ್ನು ತಳೆದು ಇಳಿಯಯ್ಯಾ!
ಹಸಿದವರ ಮುಂದೆ ರೊಟ್ಟಿಯಾಗಿ ಅವತರಿಸು.
ಶೋಷಿತರ ಮುಂದೆ ವಿಮೋಚನೆಯಾಗಿ ಅವತರಿಸು.
ದ್ಯಾಸದಲ್ಲಿರುವರೆದುರು ಸ್ವಾತಂತ್ರ್ಯವಾಗಿ ಅವತರಿಸು.
ವಾಸಿಯಾಗದ ರೋಗಿಗಳೆದುರು ವಾಸಿಗೊಳಿಪ ಭೈಷಜ್ಯವಾಗಿ ಅವತರಿಸು.
ನಿರಕ್ಷರಿಗಳೆದೆಯಲ್ಲಿ ವಿದ್ಯೆಯ ಅಮೃತವಾಗಿ ಅವತರಿಸಿ,
ಇನ್ನೂ ಸ್ಪೃಶ್ಯರೆನಿಸದವರಂಗದಲ್ಲಿ ಪಾವಿತ್ರ್ಯವಾಗಿ ಪಾದುರ್ಭವಿಸು.
ಸ್ವತಂತ್ರಧೀರ ಸಿದ್ಧೇಶ್ವರಾ,
ಸಂಹಾರಕ್ಕಾಗಿ ತೊಟ್ಟ ಅವತಾರಗಳು ಸಾಕು.
ಸರ್ವೋದ್ಧಾರಕ್ಕಾಗಿ ಹೊಸ ಅವತಾರಗಳ ತಳೆಯಯ್ಯಾ. (ವ. ೩೪೩)

೧೨ನೇ ಶತಮಾನದ ಶಿವಶರಣರಂತೆ ಕಾವ್ಯಾನಂದರೂ ಸಹ ಅಂಧಶ್ರದ್ಧೆ ಮೌಢ್ಯತೆಗಳನ್ನು ತಮ್ಮ ವಚನಗಳಲ್ಲಿ ಖಂಡಿಸಿದ್ದಾರೆ.

ಹೋಮ–ಹವನಗಳಿಗೆ ಸುರಿವ ತುಪ್ಪಕ್ಕಿಂತ
ಹಸಿದ ಹೊಟ್ಟೆಗಿತ್ತ ಹಳಿಸಿದನ್ನ ಪೂಜ್ಯ.
ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿಮಗೆ!
ಬೆಂಕಿಗೆ ಹೊಯ್ಯುವ ತುಪ್ಪವ
ಕಲ್ಲಿಗೆರೆಯುವ ಹಾಲ
ಕಾಗೆಗಿಕ್ಕುವ ಅನ್ನವ
ಹಸಿದವರಿಗೆ ನೀಡಿ ಧನ್ಯರಾಗಿರಯ್ಯಾ.

ಆಷಾಢಭೂತಿತನವನ್ನು ಕುರಿತು ಕಾವ್ಯಾನಂದರು ಹೀಗೆ ನುಡಿದಿದ್ದಾರೆ.

ಭಸ್ಮ ಬಳಿದೊಡಿಲ್ಲ, ಗಂಧತಳೆದೊಡಿಲ್ಲ, ಗಡ್ಡ ಬೆಳೆದೊಡಿಲ್ಲ
ಶಿಲಬೆ ಧರಿಸಿದೊಡಿಲ್ಲ, ಮುದ್ರೆ ಮೆರೆದೊಡಿಲ್ಲ,
ಬಾಹ್ಯ ಚಿನ್ಹೆಗಳಿಂದ ಭಕ್ತರಾದವರುಂಟೆ?
ಬೂದಿಬಳಿದ ಮಾತ್ರಕ್ಕೆ ವಿರಕ್ತರಾದವರುಂಟೆ?
ಬಳಸಲು ಬಾರದ ಆಯುಧ ಹಿಡಿದು ಶಕ್ತರಾದವರುಂಟೆ?
ಮುಂಡನ ಮಾಡಿಸಿಕೊಂಡು ಅನಾಸಕ್ತರಾದವರುಂಟೆ?
ವೇಷಗಾರಿಕೆ, ಮೋಸಗಾರಿಕೆ ಬೇರಿಲ್ಲ;
ಒಳಗ ತೊಳೆಯದೆ ದಾರಿ ಬೇರಿಲ್ಲ;
ಅಂತರಂಗ ಶುದ್ಧವಾದರೆ ಗುರಿದೂರಿಲ್ಲ;
ಸ್ವತಂತ್ರಧೀರ ಸಿದ್ಧೇಶ್ವರನೇ ಬಲ್ಲ. (ವ. ೨೮೦)

ಕಾವ್ಯಾನಂದರು ತಮ್ಮ ವಚನಗಳಲ್ಲಿ ವಿಪುಲವಾಗಿ ಆದರೆ ಬಹಳ ಔಚಿತ್ಯಪೂರ್ಣವಾಗಿ ಸಂಸ್ಕೃತ, ಉರ್ದು, ಇಂಗ್ಲಿಷ್, ಮರಾಠಿ, ಫ್ರೆಂಚ್, ತಮಿಳಿ ಭಾಷೆಯ ಪದಗಳನ್ನು ಬಳಸಿದ್ದಾರೆ.[೪] ಇದಲ್ಲದೆ ಕೆಲವು ಇಂಗ್ಲಿಷ್ ಪದಗಳನ್ನು ಕನ್ನಡದವೆಂಬಂತೆ ಸಹಜವಾಗಿ ಬಳಸಿದ್ದಾರೆ. ಹೀಗಾಗಿ ಕಾವ್ಯಾನಂದರ ವಚನ ಸಾಹಿತ್ಯಕ್ಕೆ ಯಾವ ಮಿತಿಗಳೂ ಇಲ್ಲ. ವಿಶ್ವಸ್ವರೂಪಿ ವಿರಾಟ್ ರಚನೆಗಳಾಗಿವೆ. ಕಾವ್ಯಾನಂದರ ವಚನಗಳು.

* * * *

**ಭಾಷೆಯ ಚಮತ್ಕಾರಿಕ ಬಳಕೆ:**

ಕಾವ್ಯಾನಂದರು ಭಾಷೆಯನ್ನು ಪದಗಳನ್ನು, ನುಡಿಗಳನ್ನು ಚಮತ್ಕಾರದಿಂದ ಬಳಸಬಲ್ಲರು. ಪದ-ನುಡಿಗಳ ಜೊತೆ ಸರ್ಕಸ್ ಆಡಬಲ್ಲರು. ಆದರೆ ಕೇವಲ ಚಮತ್ಕಾರಕ್ಕೋಸ್ಕರವಾಗೇ ಇಂತಹ ಪ್ರಯೋಗಗಳನ್ನು ಕಾವ್ಯಾನಂದರು ಮಾಡಲಾರರು. ಈ ರೀತಿಯ ಚಮತ್ಕಾರದ ವಚನಗಳು ಕಾವ್ಯಾನಂದರ 'ವಚನೋದ್ಯಾನ' ಮತ್ತು 'ವಚನ ನಂದನ' ಕೃತಿಗಳಿಗೆ ವೈವಿಧ್ಯತೆಯನ್ನು ತಂದು ಕೊಟ್ಟಿವೆ. ಒಂದು ರೀತಿಯ ಏಕತಾನತೆಯಿಂದ ಓದುಗನನ್ನು ಈ ವಚನಗಳು ಬಿಡುಗಡೆಗೊಳಿಸುತ್ತವೆ. ಇಂತಹ ಕೆಲವು ರಚನೆಗಳನ್ನು ಈಗ ನೋಡಬಹುದು.

ಸವದತ್ತಿಯ ಎಲ್ಲಮ್ಮನಿಗೆ
ಜೋಗತಿಯರಾಗುವುದ
ನಿಲ್ಲಿಸಬೇಕೆನ್ನುವವರು
ದಿಲ್ಲಿಯ ಎಲ್ಲಮ್ಮನಿಗೆ
ಜೋಗತಿಯರಾಗುವುದ
ಮೊದಲು ನಿಲ್ಲಿಸಲಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ. (ವ. ನಂ. ೪೨೧)

ನದಿಯೆ ಬತ್ತಿರುವಾಗ
ನೀರ್-ಬೀಳು ಎಲ್ಲಿಯದಯ್ಯ?
ನೀರ್-ಬೀಳೆ ನಿಂತಿರುವಾಗ
ವಿದ್ಯುದುತ್ಪಾದನೆ ಎಲ್ಲಿಯದಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ
ಮಾನವ್ಯವೇ ಮೃತವಾದಾಗ
ನಲ್-ಬಾಳು ಎಲ್ಲಿಯದಯ್ಯಾ. (ವ. ೪೦೭)

ಅಕ್ಷರಗಳಲ್ಲಿ ಅ ಕಾರ ನಾನು
ಎಂದಿರುವೆಯೆಂತೆ ನೀನು;
ಅಂತೆಯೆ, ಅ ಕಾರವೊಂದನ್ನೆ
ನಂಬಿರುವೆವು ನಾವು!
ಒಳ್ಳೆಯದೆನ್ನುವ ಎಲ್ಲದಕ್ಕೂ
ಧರ್ಮ, ನೀತಿ, ನ್ಯಾಯ, ಶಾಂತಿ, ಸತ್ಯ ಇತ್ಯಾದಿ ಎಲ್ಲದಕ್ಕೂ
ಹಿಂದೆ 'ಅ' ಸೇರಿಸುತ್ತ ಹೊರಟಿಹೆವು.
ಯಾರು ಅಳಿಸಬಲ್ಲರು
ಈ ಅ ಕಾರಗಳನ್ನು
ಅವು ಸೃಷ್ಟಿಸಿಹ ವಿಕಾರಗಳನ್ನು
ಸ್ವತಂತ್ರಧೀರ ಸಿದ್ಧೇಶ್ವರ (ವ. ೨೯೬)

ನವೀಕರಣ, ನವೀಕರಣವೆಂದು
ನಲುಗಿತ್ತಲಿಹರಯ್ಯ ನವಯುವಕರು

'ಮಾ ನವೀಕರಣ, ಮಾ ನವೀಕರಣ'ವೆಂದು
ಯಾರೆನ್ನುವರು?
ನಾನಂತೂ ಎನ್ನಲಾರೆ.
ಆದರೆ ಮಾನವೀಕರಣ, ಮಾನವೀಕರಣವೆಂದು
ಎನ್ನದಿರಲಾರೆ!
ನವೀಕರಣದೊಡನೆ
ಮಾನವೀಕರಣವೂ ಸಾಗಿದರೆ ಸರಿ
ಇಲ್ಲದಿದ್ದರೆ ಬಲು ಬರಿ
ನನ್ನ ದೇಶದಲ್ಲಿ ಇವೆರಡೂ
ಒಟ್ಟಿಗೆ ನಡೆಯುವಂತೆ ಮಾಡಾ,
ಸ್ವತಂತ್ರಧೀರ ಸಿದ್ಧೇಶ್ವರ.
(ವ. ೨೦೩)

ಕಡೆದರೆ ಬೆಣ್ಣೆ, ಕಟಿದರೆ ಮೂರ್ತಿ
ಒಕ್ಕಿದರೆ ಕಾಳು, ಹಿಕ್ಕಿದರೆ ಕೇಶಗಳಯ್ಯಾ,
ಅಟ್ಟರೆ ಅಡುಗೆ, ಸುಟ್ಟರೆ ಭಸ್ಮ
ನೆಟ್ಟರೆ ಸಸಿ, ಇಟ್ಟರೆ ಒಡವೆಗಳಯ್ಯಾ
ಉರಿದರೆ ದೀಪ, ಉರಿಸಿದರೆ ಧೂಪ,
ತೇಯ್ದರೆ ಗಂಧ, ನೇಯ್ದರೆ ವಸ್ತ್ರವಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರ.
ತಾಳಿದರೆ ಬಾಳು, ದುಡಿದರೆ ಪಾಲು
ಕೀಳೊಪ್ಪೆ ಮೇಲು, ಕೊಡದಿಹುದೆ ಹಾಳು ಕಂಡಯ್ಯ.
(ವ. ೩೬೩)

ಭಾರತಕ್ಕೆ ಬಹಳಷ್ಟು 'ಬಾಬಾ'ಗಳನ್ನು ಕೊಟ್ಟಿರುವೆ
ಈಗ ಸಾಕಷ್ಟು 'ಭಾಭಾ'ಗಳನ್ನು ಕೊಡಯ್ಯ.
ಬಹಳಷ್ಟು ತಾತಾ ಎನ್ನುವ 'ತಾತಾ'ಗಳನ್ನು ಕೊಟ್ಟಿರುವೆ
ಈಗ ಸಾಕಷ್ಟು 'ಟಾಟಾ'ರನ್ನು ಕೊಡಯ್ಯ.
ಬ್ರಹ್ಮಜ್ಞಾನಿಗಳ ಜೊತೆಗೆ ವಿಜ್ಞಾನಿಗಳನ್ನು,
ಮಂತ್ರದ್ರಷ್ಟಾರರ ಜೊತೆಗೆ ಯಂತ್ರ-ತಂತ್ರ ಬ್ರಹ್ಮರನ್ನು ಸೃಷ್ಟಿಸಿಲ್ಲಿ
ಇ[illegible]ಯೆ ನೆಲ, ಜಲ, ಅನಿಲ, ತೈಲ, ಸೌರಶಕ್ತಿಯ ಸುವರ್ಣ ಸೃಜಿಪ
ರಸಸಿದ್ಧರ ಹುಟ್ಟಿಸಿಲ್ಲಿ ಸ್ವತಂತ್ರಧೀರ ಸಿದ್ಧೇಶ್ವರಾ.
(ವ. ೪೪೮)

ಈ ಚಮತ್ಕಾರದ ರಚನೆಗಳನ್ನು 'ಚುಟುಕು'ಗಳೆನ್ನುವಂತಿಲ್ಲ. ಏಕೆಂದರೆ ಇಲ್ಲಿ ಹಾಸ್ಯ-ವ್ಯಂಗ್ಯಗಳಿಲ್ಲ. ಇಲ್ಲಿ ಹೇಳಬೇಕಾದುದನ್ನು ಸುತ್ತಿ-ಬಳಸಿ ಹೇಳದೆ ನೇರವಾಗಿ ಹೇಳಲಾಗಿದೆ. ನೂರಾರು ವಚನಗಳ ಸಂತಲನದಲ್ಲಿ, ಇಂತಹ ಚಮತ್ಕಾರದ ವಚನಗಳು ಓದುಗನಿಗೆ ಒಂದು ರೀತಿಯ 'ರಿಲೀಪ್' ಕೊಡುತ್ತವೆ, ಏಕತಾನತೆಯಿಂದ ಬಿಡುಗಡೆ ಒದಗಿಸುತ್ತವೆ.

**ಕಾವ್ಯಾನಂದರ ವಚನಗಳ ವಸ್ತು:**

ವಚನಗಳಿಗೆ ಕಾವ್ಯಾನಂದರು ವಸ್ತುವನ್ನು ಎಲ್ಲಿಂದ ಪಡೆಯುತ್ತಾರೆ? ಬದುಕಿನ ಎಲ್ಲಾ ಕ್ಷೇತ್ರಗಳಿಂದಲೂ ಅವರು ವಸ್ತುವನ್ನು ಆರಿಸಿಕೊಳ್ಳುತ್ತಾರೆ. ಅವರು ವಚನಗಳಲ್ಲಿ ಬಳಸಿರುವ ವಸ್ತುಗಳ ವೈವಿಧ್ಯತೆಯು



ಬೆಳ್ಳಿ

ಹಿಮಾಲಯಸದೃಶವಾದುದಾಗಿದೆ. ರಾಷ್ಟ್ರೀಯ–ಅಂತರರಾಷ್ಟ್ರೀಯ, ಕಲೆ–ವಿಜ್ಞಾನ, ಸಾಹಿತ್ಯ–ಸಂಗೀತ, ರಾಜಕೀಯ–ಧಾರ್ಮಿಕ, ಭೂತ–ವರ್ತಮಾನ, ಇತಿಹಾಸ–ಸಮಾಜಶಾಸ್ತ್ರ— ಹೀಗೆ ವಿಪುಲವಾದ ವಸ್ತು–ವಿಷಯಗಳನ್ನು ಅವರ ವಚನಗಳಲ್ಲಿ ಕಾಣಬಹುದಾಗಿದೆ. ಈ ಉದಾಹರಣೆ ನೋಡಿ—

ಬರ್ಲಿನ್ ಗೋಡೆಯನ್ನು ಕಟ್ಟಿ
ನಗರವನ್ನು ಒಡೆದರಾಗಲಿ
ಜರ್ಮನ್ ಜನಾಂಗವನ್ನು ಒಡೆದರೇನಯ್ಯಾ?
ಚೀಣಾ ಗೋಡೆಯನ್ನು ಕಟ್ಟಿ
ಇನ್ನೇನ ತಡೆದರೂ
ವಿಚಾರವಾಹಿನಿಯ ತಡೆಯಲಾದೀತೇನಯ್ಯ?
ಹರಡುವ ಗಂಧಕ್ಕೆ ಗಡಿಗಳನ್ನು ಹಾಕುವ ಹವ್ಯಾಸ,
ಹಬ್ಬುವ ಬೆಳಕಿಗೆ ಬಂಧನವ ಬಿಗಿವ ಹವ್ಯಾಸ,
ಚೆಲ್ಲವರಿವ ಒಲವಿಗೆ ಎಲ್ಲೆಗಳನ್ನು ರಚಿಸುವ ಹವ್ಯಾಸ,
ಹಾಸ್ಯಾಸ್ಪದ ಹವ್ಯಾಸಗಳಲ್ಲವೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರ. (ವ. ೧೯೮)

ಈ ವಚನ ಪ್ರಕಟವಾಗಿರುವುದು ೧೯೮೮ ರಲ್ಲಿ. ಈ ವಚನದ ಪ್ರಾರಂಭದ ಎರಡು ಸಾಲುಗಳನು ಓದಿದ ತಕ್ಷಣ ಎರಡು ವರ್ಷಗಳ ಹಿಂದೆ ಜರ್ಮನರು ಬರ್ಲಿನ್ ಗೋಡೆಯನ್ನು ಕೆಡವಿ ಪುಡಿ–ಪುಡಿ ಮಾಡಿದ್ದು ಜ್ಞಾಪಕಕ್ಕೆ ಬರುತ್ತದೆ. 'ಗೋಡೆ ಕಟ್ಟಿ ನಗರವನ್ನು ಒಡೆದರಾಗಲಿ ಜನಾಂಗವನ್ನು ಒಡೆಯಲಾಗಲಿಲ್ಲ' ಎನ್ನುತ್ತಾರೆ ಕಾವ್ಯಾನಂದರು. ಆದರೆ ನಮಗೆ ಈಗ ತಿಳಿದುಬಂದಿರುವಂತೆ 'ಗೋಡೆ' ನಗರವನ್ನು ಒಡೆಯುವುದ ರಲ್ಲಿಯೂ ಸಹ ವಿಫಲವಾಗಿದೆ. ಗೋಡೆ ಉರುಳಿಬಿತ್ತು. ಇಂತಹ ವಚನಗಳಲ್ಲಿ ಕಾವ್ಯಾನಂದರು ಒಂದು ರೀತಿಯ ದಾರ್ಶನಿಕತೆಯನ್ನು ಮೆರೆದುಬಿಡುತ್ತಾರೆ.

ಕೇಂದ್ರ–ರಾಜ್ಯಗಳ ನಡುವಿನ ಸಂಬಂಧಗಳೂ ಸಹ ಇವರ ವಚನಗಳ ವಸ್ತುವಾಗುತ್ತವೆ. ಈ ವಚನ ನೋಡಿ–

ತಿರಿದು ತಂದುದರಲ್ಲಿ
ಅರ್ಧ ಭೀಮನಿಗೆ
ಅರ್ಧ ಉಳಿದವರಿಗೆ
ಹಂಚುತ್ತಿದ್ದಳು ಕುಂತಿ
ತಿರಿದು ತಂದುದರಲ್ಲಿ
ಅರ್ಧ ದಿಳ್ಳಿಗೆ
ಅರ್ಧ ಉಳಿದ ದೇಶಕ್ಕೆ
ಹಂಚುತ್ತಲಿಹಳು ಅಭಿನವ ಕುಂತಿ
ಅರ್ಧ ಪಾಲು ತಿಂದೂ
ಉಳಿದ ದೇಶವ ಮರೆತ
ದಿಳ್ಳಿಯ ಡೊಳ್ಳು ಹೊಟ್ಟೆಯ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರ. (ವ. ನಂ. ೪೨೦)

ಒಕ್ಕೂಟ ರಾಜ್ಯ ವ್ಯವಸ್ಥೆಯಲ್ಲಿ (Federation) ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ–ಹಣ–ಸಂಪನ್ಮೂಲಗಳ ಹಂಚಿಕೆಯು ಸಮತೋಲನದಿಂದ ಇರಬೇಕು. ಆದರೆ ಇಂದು ಎಲ್ಲಾ ಅಧಿಕಾರ–ಸಂಪನ್ಮೂಲ ಗಳೂ ದೆಹಲಿಯ ವಶವಾಗಿದೆ. ಕೇಂದ್ರೀಕರಣದ ರಾಕ್ಷಸ ಸ್ವಾರ್ಥದಿಂದಾಗಿ ರಾಜ್ಯಗಳು ಇಂದು ಕೇಂದ್ರ ಸರ್ಕಾರದ ವಿಭಾಗಗಳಂತೆ ಕೆಲಸ ಮಾಡುವ ಪ್ರಮೇಯ ಬಂದಿದೆ. 'ಕುಂತಿ' ಮತ್ತು 'ಅಭಿನವ ಕುಂತಿ'ಯೆಂಬುದು ಯಾರನ್ನು ಸಂಕೇತಿಸುತ್ತದೆ ಎಂದು ಹೇಳುವ ಅವಶ್ಯಕತೆ ಇಲ್ಲ. ಇಲ್ಲಿ ಕುಂತಿ ಕೇವಲ ಸಂಕೇತ ಅಷ್ಟೆ. ದೆಹಲಿಯ ಸಿಂಹಾಸನದ ಮೇಲೆ ಯಾರಿದ್ದರೂ ಅಷ್ಟೆ. ಕಳೆದ ೪೦ ವರ್ಷಗಳಿಂದ ನಡೆದ 'ಕೇಂದ್ರೀಕರಣ'ದ ಹಾವಳಿ ಬಗ್ಗೆ ಈ ವಚನ ಬೆಳಕು ಚೆಲ್ಲುತ್ತದೆ.

ನಗರ–ಗ್ರಾಮಗಳ ನಡುವಿನ ಅಸಮಾನತೆ ಬಗ್ಗೆ ಕಾವ್ಯಾನಂದರ ವಚನವೊಂದು ಹೀಗೆ ನುಡಿಯುತ್ತದೆ:

ದ್ವಿರಾಷ್ಟ್ರ ವಾದದ ದುಃಸ್ವಪ್ನ ದೂರಾಗುತ್ತಿದ್ದಂತೆ
ದ್ವಿಭಾರತದ ಭೂತಲೀಲೆ ಪ್ರಾರಂಭವಾಗಿದೆಯಯ್ಯಾ ಇಲ್ಲಿ!
ಗಗನಾಭಿಮುಖವಾಗಿ ಬೆಳೆಯುತ್ತಿರುವ ನಗರ–ಭಾರತ.
ರಸಾತಳಕ್ಕೆ ಇಳಿಯುತ್ತಿರುವ ಗ್ರಾಮ–ಭಾರತ.
ಸುಖೀ ರಾಜ್ಯದ ಹೆಸರಿನಲ್ಲಿ ಎಂಥ ಅಧಃಪಾತ!
ನಗರ ಪೆಡಂಭೂತ, ಗ್ರಾಮ ಬರೀ ಪ್ರೇತ!

..............................

.............................. (ವ. ನಂ. ೩೫೩)

ಸ್ವತಂತ್ರಧೀರ ಸಿದ್ಧೇಶ್ವರ.

ಕಾವ್ಯಾನಂದರ ವಚನ ಸಾಹಿತ್ಯದ ಸ್ಥಾಯಿಗುಣ– ಕೋಮಲತೆ. ಆದರೂ ಅವರ ವಚನಗಳು ಆಕ್ರೋಶದ ಕಿಡಿ ಕಾರಬಲ್ಲವು, ಕ್ರಾಂತಿಯ ಮಾತನಾಡಬಲ್ಲವು. ಶೋಷಣೆ–ಅನ್ಯಾಯಗಳ ಇತಿಹಾಸವನ್ನೇ ಬಗೆಯಬಲ್ಲವು. ಈ ವಚನ ನೋಡಿ–

ಇಲ್ಲಿ ಯಾರಾರ ನಂಬಿ ಕೆಟ್ಟೆ
ಯಾರಾರ ನಂಬಿ ಕೆಡಲಿಲ್ಲ ನೀನು, ಬಡವಾ?
ಹುಟ್ಟಲಿಲ್ಲ ಕೊನೆಗೂ
ನಿನಗೆ ಕೊಟ್ಟ ಮಾತ ನಡೆಸುವ ಬಡವಾ!
ಸುರರು ಕೈ ಕೊಟ್ಟರು
ಭೂಸುರರು ಕೈ ಕೊಟ್ಟರು
ಅರಸರು ಕೈ ಕೊಟ್ಟರು
ಸಾಮಂತರು, ಶ್ರೀಮಂತರು
ಭೀಮಂತರು ಕೈ ಕೊಟ್ಟರು, ನಿನಗೆ!
ನೀನೆ ಆರಿಸಿದವರು
ನೀನೆ ಏರಿಸಿದವರು
ನೀನೆ ಹೊತ್ತು ಮೆರೆಸಿದವರು
ನೀನೆ ಸಂಬಳವಿತ್ತು ಸಲಹಿದವರು
ಕೈ ಕೊಟ್ಟವರು ನಿನಗೆ!

ಬೆಳ್ಳಿ

ನೀನೇನಾದರೂ ಹಸಿದು ಹುಯಿಲಿಟ್ಟಾಗ–
‘ಹೆಚ್ಚು ದುಡಿಯಿರಿ,
ಹೆಚ್ಚು ಪಡೆಯಿರಿ’
ಎಂದು ಕರೆಕೊಟ್ಟರು ನಿನಗೆ
ಗಾಯದ ಮೇಲೆ ಬರೆ ಕೊಟ್ಟರು ನಿನಗೆ!
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ
ಹೇಳುವೆ ನನಗೆ ಬಡವ:
ಎಲ್ಲ ಬಡವರ ಸಂಘಟನೆಯಲ್ಲಿಯೇ
ಬಡವರ ಶಕ್ತಿ;
ಬಡವರ ಶಕ್ತಿಯಲ್ಲಿಯೇ
ಬಡವರ ಮುಕ್ತಿ! (ವ. ನಂ. ೩೧೧)

## ಉಪಸಂಹಾರ

ಕಾವ್ಯಾನಂದರ ವಚನ ಸಾಹಿತ್ಯದ ಬಹುದೊಡ್ಡ ಗುಣವೆಂದರೆ–ಇದರಲ್ಲಿ ಉಪದೇಶದ ಧ್ವನಿಯಿಲ್ಲ. ವ್ಯಕ್ತಿಯೊಬ್ಬ ತನಗೆ ತಾನೇ ಹೇಳಿಕೊಂಡ ಆತ್ಮಾಲಾಪಗಳು ಈ ವಚನಗಳು. ಇಲ್ಲಿ ಭಕ್ತನೊಬ್ಬನ ಕೋರಿಕೆ ಇದೆ. ವಿರಹಿಯೊಬ್ಬನ ಮಿಲನದ ಹಂಬಲವಿದೆ. ಇಲ್ಲಿಯ ಎಲ್ಲಾ ವಚನಗಳಲ್ಲೂ ಪ್ರಾರ್ಥನೆಯ ಧ್ವನಿ ಇದೆ. ‘ವಚನೋದ್ಯಾನ’ ಮತ್ತು ‘ವಚನ ನಂದನ’ ಕೃತಿಗಳನ್ನು ಓದುವಾಗ ಒಂದು ಕುತೂಹಲದ ಪ್ರಶ್ನೆ ಉಂಟಾಗುತ್ತದೆ. ಕಾವ್ಯಾನಂದರ ವಚನ ಸಾಹಿತ್ಯದ ಮೇಲೆ ೧೨ ನೇ ಶತಮಾನದ ಯಾವ ವಚನಕಾರರ ಪ್ರಭಾವ ಹೆಚ್ಚಿಗಿದೆ? ಅಕ್ಕಮಹಾದೇವಿಯು ಶ್ರೀ ಸಿದ್ಧಯ್ಯ ಪುರಾಣಿಕರನ್ನು ತುಂಬಾ ಕಾಡಿದಂತೆ ಕಾಣುತ್ತದೆ. ವಚನೋದ್ಯಾನದ ಕೊನೆಯ ಕೆಲವು ವಚನಗಳಂತೂ ‘ಶರಣಸತಿ–ಲಿಂಗಪತಿ’ ಭಾವನೆಯ ಪ್ರತಿರೂಪಗಳಾಗಿವೆ. ‘ನನ್ನ ನಯನಗಳು ನೀರಡಿಸಿವೆ ನಲ್ಲ’ (ವ. ೫೧೮) ‘ನಲ್ಲನ ನಲ್ಮೆಯನೆಂತು ಗಳಿಸುವುದೆಂದು (ವ. ೫೨೦)’ ‘ನಿನಗೆ ವಿಧುರನಾಗುವ ಭಯವಿದ್ದರೂ ಇರಬಹುದು, ನನಗೆ ಮಾತ್ರ ವಿಧವೆಯಾಗುವ ಭಯವಿಲ್ಲ ನಲ್ಲ’ (ವ. ೫೨೧) ಮುಂತಾದ ವಚನಗಳಲ್ಲಿ ವಿರಹಿಯೊಬ್ಬಳ ಆರ್ತನಾದವಿದೆ, ಆತ್ಮೀಯತೆಯ ಭಾವನೆ ಇದೆ. ಈ ಕಾರಣಕ್ಕೆ ಕಾವ್ಯಾನಂದರ ವಚನ ಸಾಹಿತ್ಯವೂ ನಮಗೂ ಆತ್ಮೀಯವಾಗುತ್ತದೆ.

* * * *

## ಅಡಿ ಟಿಪ್ಪಣಿ

೧. ಡಾ॥ ಎಂ. ಚಿದಾನಂದಮೂರ್ತಿ ‘ಲಿಂಗಾಯತ ಅಧ್ಯಯನಗಳು’ ಪು. ೪೩೬
೨. ಟಿ. ಆರ್, ಚಂದ್ರಶೇಖರ. ‘ಬಸವಪಥ’ ಸಂ. ೪ ಸಂ. ೧೦ ಜನವರಿ ೧೯೯೩, ಪುಟ ೫೯–೬೨
೩. ಟಿ. ಆರ್. ಚಂದ್ರಶೇಖರ. ಅದೇ
೪. ವ. ೫೦೫: ಇಂಗ್ಲಿಷ್ ನುಡಿಗಳು
ವ. ೪೬೦: ಮರಾಠಿ ಚೌಪದಿ
ವ. ೪೯೪: ಫ್ರೆಂಚ್ ನುಡಿಗಳು
ವ, ೪೬೨: ತಮಿಳು–ತಿರುಕ್ಕುರುಳಿನ ದ್ವಿಪದಿ
ವ. ೩೨೪: ಹಿಂದಿ ಚೌಪದಿ.

## ವಚನಾಂಕಗಳು

‘ವ’ – ‘ವಚನೋದ್ಯಾನ’ದ ವಚನ ಸಂಖ್ಯೆಗಳನ್ನು ಸಂಕೇತಿಸುತ್ತದೆ.
‘ವ. ನಂ.’ವು ‘ವಚನ ನಂದನ’ದ ವಚನ ಸಂಖ್ಯೆಗಳನ್ನು ತಿಳಿಸುತ್ತದೆ. □□